ಅಖಿಲ ಭಾರತ ಪತ್ರಿಕೆ
ಜೂನ್ 2024

# ನವ ಸೃಷ್ಟಿ



ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಬ್ರಹ್ಮಾಣು ಕುಣಿತ ಗತಿಬದ್ಧ ಮಣಿತ ಮಣಿ–ಮುಕುಟ–ಮಧುರ– ಶಾಂತಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ')**

**ಅಖಿಲ ಭಾರತ ಪತ್ರಿಕೆ**
**ಜೂನ್ 2024**

ಸಂಪುಟ: 34 ಸಂಚಿಕೆ: 06

**ಪರಿವಿಡಿ**

# ನವ ಸೃಷ್ಟಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅತಿಮಾನಸಿಕ ಬಲದ ಕ್ರಿಯೆ** 2
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಮಹದ್ಬದಲಾವಣೆ** 14
ಅನು: ಶ್ರೀ ಪ್ರವೀಣಕುಮಾರ ಪಾಟೀಲ

**ನವ ಜನಾಂಗದ ಹೊಳಹುಗಳು** 24
ಅನು: ಡಾ॥ ಮಹಾದೇವ ಸಕ್ರಿ

**ಮಾನವೀಯತೆ ಮತ್ತು ನವ ಜನಾಂಗ** 36
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 44
ಅನು: ಜಾನ್ವಿ

**ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು'** 50
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಮುಕುಲ ಚಂದ್ರರ "ಶ್ರೀ ಅರವಿಂದರ ಚಿತ್ರ ರಚನೆ"** 66
ಅನು: ಶ್ರೀ ರಮೇಶ ಸರಗೂರ

---

**ಸಂಪಾದಕರ ಟಿಪ್ಪಣಿ:** ಪ್ರಳಯದ ನಂತರದಲ್ಲಿ ಅಲ್ಲೆಲ್ಲ ಒಂದು ನೂತನ ಜೀವನದ ಪುನರುತ್ಥಾನವು ಘಟಿಸುತ್ತದೆ. ಶಿಶಿರ ಋತುವಿನ ಶೀತದಲ್ಲಿ ಎಲ್ಲ ಎಲೆಗಳೂ ಉದುರಿ ಹೋದರೂ ಮತ್ತೆ ವಸಂತದ ಪುಷ್ಪ ವಿಕಾಸವು ನಮಗಾಗಿ ಆಗಮಿಸಲು ಕಾತರಿಸುತ್ತಿರುತ್ತದೆ. ಪ್ರಳಯವು ನವ ಸೃಷ್ಟಿಗಾಗಿ ಸಿದ್ಧಗೊಳ್ಳಲು ಇರುವ ಪ್ರಕ್ರಿಯೆಯಾಗಿದೆ. ಈ ವಿಷಯದ ಕುರಿತು ಈ ಸಂಚಿಕೆ ರೂಪಿಸಲ್ಪಟ್ಟಿದೆ. (ಎಐಎಂ)

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಅತಿಮಾನಸಿಕ ಬಲದ ಕ್ರಿಯೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ವಾತಾವರಣದ ಗುಣ

ವಾತಾವರಣದ ಗುಣವೇ ಬದಲಾಗಿದೆ.

ಪ್ರತಿಫಲಗಳು ಅನಂತ ವೈವಿಧ್ಯತೆಗಳಿಂದ ಕೂಡಿರುವವು. ಆದರೆ ಗ್ರಹಿಸಲು ಸಾಧ್ಯ. ಅಂದರೆ ಸುಪ್ರಮಾನಸ ಕ್ರಿಯೆ ಮತ್ತು ಸಾಮಾನ್ಯ ಚಲನೆಯ ಪರಿಣಾಮಗಳ ನಡುವಿನ ವ್ಯತ್ಯಾಸವು ಸುಸ್ಪಷ್ಟವಾಗಿರುವದು. ಏಕೆಂದರೆ ಇವು ಒಂದು ನಿರ್ದಿಷ್ಟ ಸ್ವಭಾವವನ್ನು ಹೊಂದಿರುವವು, ಒಂದು ವಿಶಿಷ್ಟ ಗುಣ.

ಆದರೆ ಯಾರಾದರೂ, ಯಾವುದೇ ಕ್ಷಣದಲ್ಲಿ ಅಥವಾ ಯಾವುದೇ ರೀತಿಯಲ್ಲಿ ಇದ್ದಕ್ಕಿದ್ದಂತೆ ಸುಪ್ರಮಾನಸ ಮೇಧಾವಿಗಳಾಗುವರು ಎಂದು ಹೇಳಲು ಸಾಧ್ಯವಿಲ್ಲ, ಹಾಗಾಗಬಹುದೆಂದು ನಿರೀಕ್ಷಿಸಲೇಬಾರದು.

*

ಅವು ಹೊಸ ವಿಷಯಗಳೇನಲ್ಲ. ಅವು ಹಿಂದೆ ಅಸ್ತಿತ್ವದಲ್ಲಿ ಇರಲಿಲ್ಲ ಎಂದೇನು ಅಲ್ಲ, ಆದರೆ ವಿಶ್ವದಲ್ಲಿ ಪ್ರಕಟವಾಗಿರಲಿಲ್ಲ ಅಷ್ಟೆ. ಅವು ಈಗಾಗಲೇ ಇದ್ದಿರದಿದ್ದರೆ, ಒಳಗೊಂಡಿರದಿದ್ದರೆ, ಅವು ಆಗಮಿಸುತ್ತಲೇ ಇರಲಿಲ್ಲ. ಅದು ಸುಸ್ಪಷ್ಟ. ಪರಮೋತ್ತಮನ ಎಲ್ಲಾ ನಿರಂತರತೆಯಲ್ಲಿ ಯಾವುದು ಈಗಾಗಲೇ ಇಲ್ಲವೋ ಅದು ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ, ಆದರೆ ಅಭಿವ್ಯಕ್ತಿಯಲ್ಲಿ ಅದು ಹೊಸದು ಅಷ್ಟೇ. ಆ ಅಂಶವು ಹೊಸದೇನಲ್ಲ. ಆದರೆ ಅದು ಹೊಸದಾಗಿ ಪ್ರಕಟವಾಗಿದೆ; ಅಪ್ರಕಟಿತ–ವಾದುದರಿಂದ ಹೊಸದಾಗಿ ಹೊರಹೊಮ್ಮಿದೆ. ಹೊಸದು, ಹಾಗೆಂದರೇನು? ಅದಕ್ಕೆ ಅರ್ಥವೇ ಇಲ್ಲ. ಒಂದು "ಹೊಸ ವಸ್ತು!" ಪ್ರಕಟಣೆಯಲ್ಲಿ ಅದು ನಮಗೆ ಹೊಸದು ಅಷ್ಟೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/178, 314**

## ಪ್ರಕೃತಿಯ ನಿಯಮಗಳು ಬದಲಾವಣೆ

ನಾನು ನಿನಗೆ ಈಗ ತಾನೆ ಹೇಳಿದುದಕ್ಕೆ ಒಂದು ಉಪಯೋಗಕರವಾದ ಪದವನ್ನು ಸೇರಿಸಬಹುದು ಎನ್ನಿಸುತ್ತಿದೆ. ಅದು ವಿವರಣೆಯ ಒಂದು ನಿರೂಪಣೆ

ಮಾತ್ರ. ಕೆಲಕಾಲದ ಹಿಂದೆ ಪ್ರಕೃತಿಯ ನಿಯಮಗಳು, ಕಾರಣಗಳು ಮತ್ತು ಪರಿಣಾಮಗಳು, ಭೌತಿಕ ಕೇಂದ್ರದಲ್ಲಿ ಅದರ ತಡೆಯಲಾಗದ ಪರಿಣಾಮಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಲಾಗಿತ್ತು. ಅವುಗಳಿಗೂ ಸಹ ಇದು ಒಂದು ಪರೋಕ್ಷ ಉತ್ತರ. ಆ ಪ್ರಶ್ನೆಗಳು ಆರೋಗ್ಯಕ್ಕೆ ಹೆಚ್ಚಾಗಿ ಸಂಬಂಧಿಸಿದವಾಗಿದ್ದವು. ಅವುಗಳಿಗೂ ಇದೇ ಉತ್ತರ. ಉದಾಹರಣೆಗೆ ಯಾರಾದರೂ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸದಿದ್ದರೆ ಅಂದರೆ ಯಾರಾದರೂ ಸರಿಯಾದ ರೀತಿಯಲ್ಲಿ ಆಹಾರವನ್ನು ಸೇವಿಸದಿದ್ದರೆ, ಕೆಲವು ನಿಯಮಗಳನ್ನು ಅನುಸರಿಸದಿದ್ದರೆ, ಪರಿಣಾಮಗಳನ್ನು ಎದುರಿಸಬೇಕಾಗುವದು ಎಂಬುದಂತೂ ನಿಜ. ಆದರೆ ಅದನ್ನು ನಾನು ಈಗ ಹೇಳಿರುವದರ ಬೆಳಕಿನಲ್ಲಿ ವಿಶ್ಲೇಷಿಸಿದರೆ ಅಥವಾ ಎರಡು ವಿಶ್ವಾತೀತ ಮಿಶ್ರಣಗಳು ಎಂದೂ ಒಂದೇ ಆಗಿರುವದಿಲ್ಲ ಎಂದು ಹೇಳಿದರೆ ನಿಯಮಗಳನ್ನು ದೃಢಪಡಿಸುವದಾದರೂ ಹೇಗೆ? ಮತ್ತು ಈ ನಿಯಮಗಳ ಸಮಗ್ರ ಸತ್ಯವಾದರೂ ಏನು? .... ಅದು ಅಸ್ತಿತ್ವದಲ್ಲಿ ಇಲ್ಲ.

ನೀನು ತರ್ಕಬದ್ಧವಾಗಿದ್ದರೆ, ಒಂದು ಸ್ವಲ್ಪ ಉನ್ನತ ತರ್ಕವು ಅದಾಗಿದ್ದರೆ, ಯಾವ ಎರಡು ವಸ್ತುಗಳು, ಎರಡು ಮಿಶ್ರಣಗಳು, ಎರಡು ವಿಶ್ವಾತೀತ ಪ್ರಕಟಣೆಗಳು ಎಂದೂ ಒಂದೇ ಆಗಿರುವದಿಲ್ಲ. ಆದುದರಿಂದ ಯಾವುದು ತಾನೇ ಪುನರಾವರ್ತನೆಯಾಗಲು ಸಾಧ್ಯ? ಅದು ಹಾಗೆ ಗೋಚರಿಸಬಹುದು ಅಷ್ಟೇ. ಆದರೆ ಅದು ಸತ್ಯವಲ್ಲ. ಮತ್ತು ಹೀಗಾಗಿ ಕಠಿಣ ನಿಯಮಗಳನ್ನು ದೃಢಪಡಿಸಲು ಸಾಧ್ಯವಿಲ್ಲ – ಮೇಲ್ಮೈಯಲ್ಲಿ ಕಾಣಿಸುವ ನಿಯಮಗಳಿಂದ ನೀನು ದೂರವಾಗಿಬಿಡು ಎಂದಲ್ಲ, ಏಕೆಂದರೆ ಮನಸ್ಸು ಅನೇಕ ನಿಯಮಗಳನ್ನು ರೂಪಿಸುವದು. ಮತ್ತು ಮೇಲ್ಮೈ ಈ ನಿಯಮಗಳಿಗೆ ತಲೆಬಾಗಿ ಕೆಲಸ ಮಾಡುತ್ತಿರುವಂತಿದೆ. ಆದರೆ ಅದು ಗೋಚರಿಸುವಿಕೆ ಮಾತ್ರವಾಗಿದೆ. ಆದರೆ ಚೇತನದ ಸೃಷ್ಟಿಶೀಲ ಸಾಮರ್ಥ್ಯದಿಂದ ಇದು ನಿನ್ನನ್ನು ದೂರ ಮಾಡುವದಂತೂ ಸತ್ಯ. ಅನುಗ್ರಹದ ನೈಜ ಸಾಮರ್ಥ್ಯದಿಂದಲೂ ಇದು ನಿನ್ನನ್ನು ದೂರ ಮಾಡುವದು. ನೀನು ಇದನ್ನು ಅರ್ಥ ಮಾಡಿಕೊಳ್ಳುವದು ಒಳಿತು. ಅದೇನೆಂದರೆ ನಿನ್ನ ಅಭೀಪ್ಸೆ ಅಥವಾ ಮನೋಭಾವದ ಮೂಲಕ ಒಂದು ಹೊಸ ಅಂಶ ಅಥವಾ ಒಂದು ಉನ್ನತ ಅಂಶವು ಪ್ರವೇಶಿಸುವಂತೆ ಮಾಡಿದರೆ – ಅದನ್ನು ನಾವು ಸುಪ್ರಮಾನಸಿಕ ಅಂಶವೆಂದು ಕರೆಯಬಹುದು. ಆ ಅಂಶವು ಈಗ ಅಸ್ತಿತ್ವದಲ್ಲಿ ಇರುವ ಮಿಶ್ರಣದೊಳಗೆ ಪ್ರವೇಶಿಸಿದರೆ, ನೀನು ತಕ್ಷಣವೇ ಅವುಗಳ ಸ್ವಭಾವವನ್ನು ಬದಲಾಯಿಸಬಹುದು. ಮತ್ತು ಈಗ ಅವಶ್ಯಕವಾಗಿರುವ ಮತ್ತು ತೆಗೆದುಹಾಕಲು ಅಸಾಧ್ಯವಾಗಿರುವ

ನಿಯಮಗಳು ಅಸಂಬದ್ಧವೆನಿಸುವವು. ಅಂದರೆ ಸ್ವತಃ ನೀನೇ, ನಿನ್ನ ಕಲ್ಪನೆಯ ಮೂಲಕ, ನಿನ್ನ ಮನೋಭಾವದಿಂದ ಮತ್ತು ನಿರ್ದಿಷ್ಟ ಅಪಾದಿತ ತತ್ತ್ವಗಳನ್ನು ನೀನು ಅಂಗೀಕರಿಸುವದರ ಮೂಲಕ, ನೀನೇ ಪವಾಡವು ಸಂಭವಿಸದಂತೆ ಮಾಡುತ್ತಿರುವೆ. ಅವು ಹೇಗೆ ಸಂಭವಿಸುವವೆಂದು ಅರಿತಾಗ ಅವು ಪವಾಡಗಳಲ್ಲವೆಂಬುದರ ಅರಿವಾಗುವದು. ಆದರೆ ಬಾಹ್ಯ ಪ್ರಜ್ಞೆಗೆ ಅವು ಪವಾಡಗಳಾಗಿ ಕಾಣಿಸುವದಂತೂ ನಿಜ. ಸ್ವತಃ ನೀನೇ ನಿನಗೆ ತರ್ಕಬದ್ಧವೆನಿಸುವ ರೀತಿಯಲ್ಲಿ ಹೇಳುತ್ತಿರುವೆ, "ಸರಿ, ನಾನು ಇದನ್ನು ಮಾಡಿದರೆ, ಅದು ಅವಶ್ಯಕವಾಗಿ ಉಂಟಾಗುವದು ಅಥವಾ ನಾನು ಅದನ್ನು ಮಾಡದಿದ್ದರೆ ಆ ಇನ್ನೊಂದು ವಿಷಯವು ಖಂಡಿತವಾಗಿ ಸಂಭವಿಸುವದು". ಬಾಗಿಲನ್ನು ಮುಚ್ಚುತ್ತಿರುವದು ಸ್ವತಃ ನೀನೇ, ಇದು ಅನುಗ್ರಹದ ಒಂದು ಸ್ವತಂತ್ರ ಕ್ರಿಯೆ ಮತ್ತು ನಿನ್ನ ನಡುವೆ ಒಂದು ಕಬ್ಬಿಣದ ಪರದೆಯನ್ನು ತಂದು ನಿಲ್ಲಿಸುತ್ತಿರುವಂತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/315–16**

---

ಸಾಧು, ವಿಪ್ರ, ಋಷಿ, ಸ್ಫೂರ್ತಿಭರಿತ ಕ್ರಿಯಾಶೀಲ ವ್ಯಕ್ತಿ, ಸೃಷ್ಟಿಕರ್ತ – ಇವು ಆತನ ಸತ್ತೆಯ ಶೃಂಗಗಳು. ಆಧ್ಯಾತ್ಮಿಕ ಲೋಕೋತ್ತರ ಪುರುಷ, ಸುಪ್ರಮಾನಸಿಕ ಸತ್ತೆ ಆತನಿಂದ ಆಚೆಗೆ ಇರುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/231 – ಶ್ರೀ ಅರವಿಂದರು**

---

ಅದರ ಅದ್ಭುತವಾದ ಆಯ್ಕೆಯಿಂದ ತುಂಬಿರುವ, ವಿಶ್ವಾತೀತ ಪ್ರಕಟಣೆಯ ಅಧ್ಯಕ್ಷ ಸ್ಥಾನದಲ್ಲಿರುವ, ಮೂಲಭೂತವಾಗಿ ಸ್ವತಂತ್ರವಾದ ಪರಮೋನ್ನತ ಪ್ರಜ್ಞೆಯ ಕಲ್ಪನೆಯು ಎಷ್ಟು ಸುಂದರ. ಜೊತೆಗೆ ಅದು ವಸ್ತುಗಳು ಒಂದನ್ನೊಂದು ಅನುಸರಿಸುವಂತೆ ಮಾಡುವದು ಮಾನವ ಚಿಂತನೆಯು ತಲುಪಬಹುದಾದ ತರ್ಕಕ್ಕೆ ಅನುಗುಣವಾಗಿ ಅಲ್ಲ. ಆದರೆ ಅದು ಬೇರೆಯದೇ ಅನಿರೀಕ್ಷಿತವಾದುದರ ತರ್ಕಕ್ಕೆ ಅನುಗುಣವಾಗಿ ಸಂಭವಿಸುವದು!

ನಂತರ ಸಾಧ್ಯತೆಗಳಿಗೆ, ಅನಿರೀಕ್ಷಿತವಾದವುಗಳಿಗೆ, ಅದ್ಭುತವಾದವುಗಳಿಗೆ, ಯಾವುದೇ ಪರಿಮಿತಿಯೂ ಇರುವದಿಲ್ಲ. ಈ ಸಾರ್ವಭೌಮ ಸ್ವತಂತ್ರ ಸಂಕಲ್ಪದಿಂದ ಯಾರಾದರೂ ಅತ್ಯಂತ ದಿವ್ಯವಾದವುಗಳನ್ನು ಆಶಿಸಬಹುದು, ಅತ್ಯಧಿಕ ಆನಂದಭರಿತವಾದವನ್ನೂ ಆಶಿಸಬಹುದು.

ಈ ಸಂಕಲ್ಪವು ನಿರಂತರವಾಗಿ ಎಲ್ಲಾ ಅಂಶಗಳೊಂದಿಗೆ ಕ್ರೀಡೆಯಲ್ಲಿ ತೊಡಗಿದೆ ಮತ್ತು ಅಂತ್ಯರಹಿತವಾಗಿ ನವ ಪ್ರಪಂಚವನ್ನು ಸೃಷ್ಟಿಸುತ್ತಿದೆ. ಈ ನವ ಪ್ರಪಂಚವು ತರ್ಕಬದ್ಧವಾಗಿ ಅದರ ಹಿಂದಿನದಕ್ಕಿಂತ ಸಂಪೂರ್ಣ ವಿಭಿನ್ನವಾಗಿರುವದು.

ಅದು ಆಕರ್ಷಕವಾಗಿರುವದು ಎಂದು ನಿನಗೆ ಅನ್ನಿಸುವುದಿಲ್ಲವೇ? ಈಗಿರುವ ಪ್ರಪಂಚವಂತೂ ಸಾಕಾಗಿಹೋಗಿದೆ. ಅದು ಹೇಗಿರಬೇಕೆಂದು ನಮಗೆ ಅನಿಸುವದೋ ಅದು ಹಾಗೆ ಆಗಲು ಏಕೆ ಬಿಡಬಾರದು?

ಮತ್ತು ನಾನು ನಿಮಗೆ ಇದನ್ನೆಲ್ಲಾ ಏಕೆ ಹೇಳುತ್ತಿರುವೆನೆಂದರೆ, ನಿಮ್ಮಲ್ಲಿ ಪ್ರತಿಯೊಬ್ಬರೂ ಆಗಮಿಸಲಿರುವ ಸಾಧ್ಯತೆಗಳ ಹಾದಿಯಲ್ಲಿ ಆದಷ್ಟೂ ಕಡಿಮೆ ಅಡೆತಡೆಗಳನ್ನು ಹಾಕುವಂತಾಗಲಿ ಎಂದು. ಅದೇ ನನ್ನ ತೀರ್ಮಾನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/316 ಶ್ರೀಮಾತೆ**

---

**ಲೋಕೋತ್ತರ ಪುರುಷನ ಅವರೋಹಣ**

ಲೋಕೋತ್ತರ ಪುರುಷನ ಅಥವಾ ಒಂದು ನವ ಸೃಷ್ಟಿಗೆ ಮಾನವರನ್ನು ಸಿದ್ಧಪಡಿಸಲು ಈ ವರ್ಷದ ಪ್ರಾರಂಭದಿಂದಲೂ ಒಂದು ಹೊಸ ಪ್ರಜ್ಞೆಯು ಭೂಮಿಯ ಮೇಲೆ ಕೆಲಸ ಮಾಡುತ್ತಿದೆ. ಈ ಸೃಷ್ಟಿಯು ಸಾಧ್ಯವಾಗಲು ಮಾನವನ ದೇಹದೊಳಗಿನ ವಸ್ತುಗಳು ಒಂದು ದೊಡ್ಡ ಬದಲಾವಣೆಯನ್ನು ಹೊಂದಬೇಕು. ಅದು ಪ್ರಜ್ಞೆಯನ್ನು ಇನ್ನೂ ಹೆಚ್ಚಾಗಿ ಗ್ರಹಿಸುವಂತೆ ಆಗಬೇಕು ಮತ್ತು ಅದರ ಕಾರ್ಯದಲ್ಲಿ ಇನ್ನೂ ಹೆಚ್ಚು ಬದಲಾಗಬಲ್ಲ ಸಾಮರ್ಥ್ಯವನ್ನು ಹೊಂದಿರಬೇಕು.

ಇವು ಯಾರಾದರೂ ವ್ಯಾಯಾಮ ಶಿಕ್ಷಣದಿಂದ ಕಲಿಯಬಹುದಾದ ಗುಣಗಳು ಮಾತ್ರ.

ಆದುದರಿಂದ, ನಾವು ಅಂತಹ ಫಲಿತಾಂಶದ ದೃಷ್ಟಿಕೋನದೊಂದಿಗೆ ಈ ಆಯಾಮವನ್ನು ಅನುಸರಿಸಿದರೆ, ನಾವು ನಿಶ್ಚಿತವಾಗಿ ಅತ್ಯಂತ ಕುತೂಹಲಭರಿತ ಫಲಿತಾಂಶವನ್ನು ಪಡೆಯುವೆವು.

ಪ್ರಗತಿ ಮತ್ತು ಸಾಧನೆಗೆ ಎಲ್ಲರಿಗೂ ನನ್ನ ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/278 1 ಏಪ್ರಿಲ್ 1969**

**ವಿಕಸನದ ನಿಯಮದಲ್ಲಿ ಬದಲಾವಣೆ**

ಭೂಮಿಯ ಸ್ವಭಾವದಲ್ಲಿ ಸುಪ್ರಮಾನಸದ ಮಧ್ಯೆ ಪ್ರವೇಶ ಅಥವಾ ಪರಮೋತ್ತಮ ಸೃಷ್ಟಿಶೀಲ ಸತ್ಯ ಶಕ್ತಿಯ ಅವರೋಹಣದ ಒಂದು ಫಲಿತಾಂಶವು ವಿಕಸನದ ನಿಯಮದಲ್ಲಿಯ ಬದಲಾವಣೆ. ಅಂದರೆ ಅದರ ವಿಧಾನ ಮತ್ತು ವ್ಯವಸ್ಥೆಯು ಬದಲಾಗುವದು. ಭೌತಿಕ ವಿಶ್ವದ ಶಕ್ತಿಗಳ ಒಳಗಡೆಗೆ ಜ್ಞಾನದ ಮೂಲಕ ವಿಕಸನ ತತ್ತ್ವದ ಒಂದು ದೊಡ್ಡ ಅಂಶವು ಪ್ರವೇಶಿಸಬಹುದು. ನವ ಸೃಷ್ಟಿಯಲ್ಲಿ ಮೊದಲಿನಿಂದಲೇ ಇದು ತನ್ನನ್ನು ತಾನು ವಿಸ್ತರಿಸಿಕೊಳ್ಳುವದು ಮತ್ತು ಈಗ ಸಂಪೂರ್ಣವಾಗಿ ಅಜ್ಞಾನದಲ್ಲಿ ವಿಕಸನವಾಗಿರುವದರಲ್ಲಿ ಒಂದರ ನಂತರ ಇನ್ನೊಂದರಂತೆ ವೃದ್ಧಿಸುವ ಪರಿಣಾಮಗಳನ್ನು ಉತ್ಪಾದಿಸುವದು. ನಿಜಕ್ಕೂ, ಈಗ ಪ್ರಜ್ಞಾರಹಿತ ಸ್ಥಿತಿಯ ಸಂಪೂರ್ಣ ಅಜ್ಞಾನದಿಂದ ಪ್ರಾರಂಭಿಸಿ ಮುಂದುವರೆಯುತ್ತಿದೆ. ಇದರ ಅತ್ಯುನ್ನತ ಅವಸ್ಥೆಯ ಜ್ಞಾನವೆಂದರೆ ಕಡಿಮೆ ಹಂತದ ಅಜ್ಞಾನವೆಂದು ಹೇಳಬಹುದು. ಏಕೆಂದರೆ ಇದು ಜ್ಞಾನವನ್ನು ನೇರವಾಗಿ ಮತ್ತು ಸಂಪೂರ್ಣವಾಗಿ ಹೊಂದಿರದೆ ಅದರ ಪ್ರತಿನಿಧಿ ಮಾತ್ರವಾಗಿದೆ. ಯಾವುದೋ ಪೂರ್ಣತ್ವ ಹೊಂದಿರುವದರಲ್ಲಿ ಉನ್ನತ ಜ್ಞಾನದ ಹಾದಿ ಮತ್ತು ಶಕ್ತಿಗಳನ್ನು ಮಾನವನು ಅಭಿವೃದ್ಧಿಪಡಿಸಿಕೊಳ್ಳತೊಡಗಿದನೆನ್ನಿ ಅಥವಾ ಮೊಟ್ಟಮೊದಲಿನ ತರ್ಕಬದ್ಧತೆ ಮತ್ತು ಪ್ರಜ್ಞಾಭರಿತ ಚಿಂತನೆಯ ಪ್ರಾರಂಭಕ್ಕೆ ಆತನ ಮಾನಸಿಕತೆಯ ಬಾಗಿಲನ್ನು ಅಭಿವೃದ್ಧಿ ಹೊಂದುತ್ತಿರುವ ಪ್ರಾಣಿಯೇನಾದರೂ ತೆಗೆದರೆ – ನಿಜಕ್ಕೂ ಈಗಲೂ ಆತನ ಅತ್ಯುನ್ನತೆಯಲ್ಲಿ ಅದರಿಂದ ತಲುಪಲಾಗದಿರುವಷ್ಟು ದೂರದಲ್ಲಿ ಏನೂ ಇಲ್ಲ. ತನ್ನ ಮೊದಲ ಅಜಾಗೃತ ಮನಸ್ಸಿನ ಪ್ರತಿಕ್ರಿಯೆಗಳನ್ನು ಸಸ್ಯಗಳು ಅಭಿವೃದ್ಧಿ–ಪಡಿಸಿಕೊಂಡು ಪ್ರಥಮ ನರಗಳ ಸಂವೇದನಾಶೀಲತೆಯನ್ನು ಪಡೆದರೆ ಚೇತನದ ಅಂಧರೂಪವಾಗಿರುವ ಭೌತ ವಸ್ತುವು ತನ್ನೊಳಗೆ ಅಡಗಿರುವ ಸಾಮರ್ಥ್ಯದಿಂದ ಹೆಚ್ಚು ಜೀವಂತವಾಗಿ, ವಸ್ತುಗಳ ಗುಪ್ತ ಭಾವವನ್ನು ಸರಾಗವಾಗಿ ನೀಡತೊಡಗಿತೆನ್ನಿ, ಅಂದರೆ ಅದು ಆಚ್ಛಾದಿಸಿರುವ ಇಂದ್ರಿಯಾತೀತ ಸತ್ಯಗಳನ್ನು ಹೊರಹೊಮ್ಮಿಸಿದರೆ, ಉದಾಹರಣೆಗೆ ಮೂಕ ಅಧೊ ಚೇತನದಲ್ಲಿ ತನ್ನ ಪೂರ್ವ ಚರಿತ್ರೆಯನ್ನು ಯಾವಾಗಲೂ ಕಾಪಾಡಿಕೊಂಡಿರುವದು, ಅದರೊಳಗೆ ಕೆಲಸ ಮಾಡುತ್ತಿರುವ ಶಕ್ತಿಗಳ ವಿವರ, ನವ ಮಾನವ ಸೂಕ್ಷ್ಮ ಬೌದ್ಧಿಕತೆಗೆ ಭೌತಿಕ ಪ್ರಕೃತಿಯಲ್ಲಿನ ಅವಕುಂಠನವನ್ನು ಹೊಂದಿರುವ ಸಾಮರ್ಥ್ಯಗಳನ್ನು ತೋರ್ಪಡಿಸುವ ಅಗೋಚರ ಚಲನೆಗಳು. ಇವುಗಳು ಭವಿಷ್ಯತ್ಕಾಲದಲ್ಲಿ ಇನ್ನೂ ಹೆಚ್ಚು ಬದಲಾವಣೆಗಳು

ಸಂಭವಿಸುವುದರ ದ್ಯೋತಕ. ಇದು ಉನ್ನತಿಗೇರಿಸುವಿಕೆ ಮಾತ್ರ. ಆದರೆ ವಿಶ್ವಾತೀತ ಶ್ರೇಣಿಗಳಿಗೆ ತೊಂದರೆಯನ್ನು ಉಂಟುಮಾಡುವದಿಲ್ಲ. ವಿಕಸನವು ತನ್ನಂತೆ ತಾನೇ ವಿಕಸಿಸುವದು. ಅದು ಅಡೆತಡೆಗೆ ಒಳಗಾಗುವದಿಲ್ಲ ಅಥವಾ ಸ್ಥಾಪಕನಾಗುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/570–71**

## ಒಂದು ನವ ಮತ್ತು ಅಗಾಧವಾದ ಸಾಮರ್ಥ್ಯ

ಸತ್ಯವಾಗಿ ಈ ಪ್ರಪಂಚದಲ್ಲಿ ಆ ಸಾಮರ್ಥ್ಯವಿದೆ; ಒಂದು ನವ ಮತ್ತು ಅಗಾಧವಾದ ಸಾಮರ್ಥ್ಯ. ದೈವೀ ಪರಮೋನ್ನತೆಯನ್ನು ಪ್ರಕಟಪಡಿಸಲು ಅದು ಈ ಪ್ರಪಂಚಕ್ಕೆ ಆಗಮಿಸಿದೆ ಮತ್ತು ಅದನ್ನು "ಪ್ರಕಟಪಡಿಸಲು ಸಾಧ್ಯವಾಗುವಂತೆ" ಮಾಡಲು ಎಂದು ಹೇಳಬಹುದು.

ಸೂಕ್ಷ್ಮವಾಗಿ ಗಮನವಿಟ್ಟು ಕೇಂದ್ರೀಕರಿಸುವದರ ಮೂಲಕ ನಾನು ಹೀಗೆ ತೀರ್ಮಾನಿಸಿರುವೆನು: ನಾವು ಯಾವುದನ್ನು 'ಸುಪ್ರಮಾನಸ' ಎಂದು ಕರೆಯುವೆವೋ ಅದನ್ನು ನಾನು ನೋಡಿರುವೆನು. ಇನ್ನೂ ಹೆಚ್ಚು ಉತ್ತಮವಾದ ಪದವು ಇಲ್ಲದಿರುವದರಿಂದ ಅದನ್ನು ಸುಪ್ರಮಾನಸವೆಂದು ಕರೆಯಲಾಗುವದು. ಅದು ಉನ್ನತ ಶಕ್ತಿಗೆ ಸೃಷ್ಟಿಯು ಹೆಚ್ಚು ನಮ್ಯವಾಗಿರುವಂತೆ ಮಾಡುತ್ತಿದೆ. ಆ ಉನ್ನತ ಶಕ್ತಿಯನ್ನು ನಾವು ದೈವ ಎಂದು ಕರೆಯುವೆವು. ಏಕೆಂದರೆ ನಾವು .... (ನಮಗೆ ಹೋಲಿಸಿದರೆ ಅದು ದೈವಿಕ, ಆದರೆ ....) ಅದು ಭೌತ ವಸ್ತುವನ್ನು ಶಕ್ತಿಯ ಕಡೆ ಹೆಚ್ಚು ಗ್ರಹಣಶೀಲ ಮತ್ತು ಪ್ರತಿಕ್ರಿಯಾಶೀಲವಾಗಿಸುತ್ತದೆ. (ಅವರೋಹಣ ಮತ್ತು ಒತ್ತಡದ ಸೂಚಕವನ್ನು ಶ್ರೀಮಾತೆಯವರು ತೋರ್ಪಡಿಸುವರು.) ನಾನು ಅದನ್ನು ಹೇಗೆ ವಿವರಿಸಲಿ? ಈಗಿನ ಪರಿಸ್ಥಿತಿಯಲ್ಲಿ, ಯಾವುದು ಅಗೋಚರವೋ ಮತ್ತು ಇಂದ್ರಿಯಗ್ರಾಹ್ಯವಲ್ಲವೋ ಅದು ನಮಗೆ ಅಸತ್ಯವೆನಿಸುವದು. (ಸಾಮಾನ್ಯ ಜನರಿಗೆ ಅನ್ವಯಿಸಿ ಹೇಳಲಾಗಿದೆ.); ಕೆಲವು ವಿಷಯಗಳು "ದೃಢವಾಗಿವೆ" ಮತ್ತು ಇತರವು ಸ್ಥಿರವಾಗಿಲ್ಲ ಎಂದು ನಾವು ಹೇಳುವೆವು. ಆದರೆ, ಪ್ರಾಪಂಚಿಕವಾಗಿಲ್ಲದಿರುವ ಈ ಶಕ್ತಿ, ಈ ಬಲಿಷ್ಠತೆ ಪ್ರಾಪಂಚಿಕ ವಸ್ತುಗಳಿಗಿಂತಲೂ ಭೂಮಿಯ ಮೇಲೆ ಹೆಚ್ಚು ಪ್ರಭಾವಶಾಲಿಯಾಗಿದೆ. ಅದೇ ಅದರ ಮರ್ಮ.

ಈ ರೀತಿಯಲ್ಲಿಯೇ ಸುಪ್ರಮಾನಸ ಸತ್ತೆಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವದು ಮತ್ತು ಸಮರ್ಥಿಸಿಕೊಳ್ಳುವದು. ಹೊರ ನೋಟದಲ್ಲಿ ಅದು ಲೌಕಿಕವಾಗಿ ಇರುವದಿಲ್ಲ.

ಆದರೆ ಭೌತಿಕತೆಯ ಮೇಲೆ ಅದರ ಪ್ರಭಾವವು ವಸ್ತುಗಳಿಗಿಂತಲೂ ಅಧಿಕವಾಗಿ ಇರುವದು. ದಿನದಿಂದ ದಿನಕ್ಕೆ, ಗಂಟೆಗಳು ಉರುಳುತ್ತಿದ್ದಂತೆ ಇದು ಹೆಚ್ಚು ಹೆಚ್ಚು ಸತ್ಯವೆನಿಸುತ್ತಿದೆ. ನಾವು ಏನನ್ನು ದೈವವೆಂದು ಕರೆಯುವೆವೋ ಅದರಿಂದ ಈ ಶಕ್ತಿಯು ಮಾರ್ಗದರ್ಶನ ಪಡೆಯುತ್ತಿದೆ ಎಂಬ ಭಾವನೆಯು ಉಂಟಾದಾಗ ಅದಕ್ಕೆ ಸಾಮರ್ಥ್ಯವಿರುವದು, ಒಂದು ನೈಜ ಸಾಮರ್ಥ್ಯ, ವಸ್ತುಗಳನ್ನು ಚಲಿಸುವಂತೆ ಮಾಡಬಲ್ಲ ಸಾಮರ್ಥ್ಯ, ನಿನಗೆ ಅರ್ಥವಾಯಿತೇ? ಅದು ಒಂದು ಭೌತಿಕ ಅಪಘಾತಕ್ಕೆ ಕಾರಣವಾಗಬಲ್ಲದು ಅಥವಾ ಒಂದು ಸಂಪೂರ್ಣವಾಗಿ ಭೌತಿಕವಾದ ಅಪಘಾತದಿಂದ ನಿನ್ನನ್ನು ರಕ್ಷಿಸಬಲ್ಲದು. ಅದು ಸಂಪೂರ್ಣವಾಗಿ ಭೌತಿಕವಾದ ಘಟನೆಯ ಪರಿಣಾಮಗಳನ್ನು ಇಲ್ಲವಾಗಿಸಬಲ್ಲದು. ಅದು ಭೌತಿಕವಾದ ವಸ್ತುವಿಗಿಂತ ಬಲಶಾಲಿ. ಇದೇ ಸಂಪೂರ್ಣವಾಗಿ ಹೊಸದಾದ ಮತ್ತು ಅರ್ಥಮಾಡಿಕೊಳ್ಳಲು ಅಸಾಧ್ಯವಾದ ಸತ್ಯ. ಆದರೆ ಅದು .... (ಗಾಳಿಯಲ್ಲಿ ಅಲುಗಾಡುತ್ತಿರುವಂತೆ ಸೂಚಕ), ಸಾಮಾನ್ಯ ಮಾನವ ಪ್ರಜ್ಞೆಯಲ್ಲಿ ಒಂದು ವಿಧದ ತಳಮಳವನ್ನು ಉಂಟುಮಾಡುವದು.

ಅದೇ ಅದರ ವೈಶಿಷ್ಟ್ಯ. ಪೂರ್ವದಲ್ಲಿ ಇದ್ದ ರೀತಿಯಲ್ಲಿ ವಸ್ತುಗಳು ಈಗ ಇಲ್ಲ ಎಂಬಂತೆ ಗೋಚರಿಸುತ್ತಿದೆ. ನಿಜಕ್ಕೂ ಹೊಸದೇನೋ ಇದೆ.... ವಸ್ತುಗಳು ಹಿಂದೆ ಇದ್ದ ರೀತಿಯಲ್ಲಿ ಇಲ್ಲ.

ನಮ್ಮ ಎಲ್ಲಾ ಸಾಮಾನ್ಯ ಗ್ರಹಿಕೆ, ನಮ್ಮ ಮಾನವ ತರ್ಕ, ನಮ್ಮ ಪ್ರಾಯೋಗಿಕ ಗ್ರಹಿಕೆ ಕೆಳಗೆಬಿದ್ದಿತು, ಮುಗಿದುಹೋಯಿತು. ಇನ್ನುಮುಂದೆ ಪರಿಣಾಮಕಾರಿಯಲ್ಲ. ಇನ್ನುಮುಂದೆ ನೈಜವಾದುವಲ್ಲ. ಅವು ಇನ್ನುಮುಂದೆ ಸುಸಂಬದ್ಧವಾದವಲ್ಲ.

ನಿಜಕ್ಕೂ ಒಂದು ಹೊಸ ಪ್ರಪಂಚ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 6 ಮೇ, 1972**

### ಒಂದು ಹೊಸ ಪ್ರಪಂಚದ ಜನನ

ಸರಿ, ಈ ನವ ಪ್ರಪಂಚವು ಜನಿಸಿದೆ ಎಂದು ನಾನು ನಿಮಗೆಲ್ಲರಿಗೂ ತಿಳಿಸಿದೆನಲ್ಲವೇ? ಹಳೆಯ ಪ್ರಪಂಚ ಅದನ್ನು ಎಷ್ಟರಮಟ್ಟಿಗೆ ಆವರಿಸಿದಂತೆ ಕಾಣುತ್ತಿದೆಯೆಂದರೆ ಅನೇಕ ಜನರಿಗೆ ಇದುವರೆವಿಗೂ ವ್ಯತ್ಯಾಸವನ್ನು ಅರಿಯಲಾಗಿಲ್ಲ. ಆದರೂ ಬಹಳ ನಿಯಮಬದ್ಧವಾಗಿ, ನಿರಂತರವಾಗಿ ಮತ್ತು ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಗಿದೆ ಹೊಸ ಶಕ್ತಿಗಳ ಕ್ರಿಯೆ.

ಈ ಕ್ರಿಯೆಯ ಪ್ರಕಟಣೆಯಿಂದ ನನಗೆ ಹೀಗೊಂದು ಅನುಭವವಾಯಿತು – ನಿಜಕ್ಕೂ ಬಹಳ ಹೊಸದು – ನಿನ್ನೆ ಸಾಯಂಕಾಲ ಈ ಅನುಭವವಾಯಿತು. ಮತ್ತು ಇವುಗಳೆಲ್ಲವುಗಳ ಫಲಿತಾಂಶವನ್ನು ನನ್ನ ದೈನಂದಿನ ಅನುಭವಗಳಲ್ಲಿ ಒಂದೊಂದಾಗಿ ಪ್ರತಿಯೊಂದನ್ನೂ ಉಲ್ಲೇಖಿಸಿರುವೆ. ಅದನ್ನು ಸಂಕ್ಷಿಪ್ತವಾಗಿ ಸರಳವಾಗಿ ಹೀಗೆ ವ್ಯಕ್ತಪಡಿಸಬಹುದು:

ಮೊದಲಿಗೆ, ಅದು ಆಧ್ಯಾತ್ಮಿಕ ಜೀವನ ಮತ್ತು ದೈವೀ ಅಸ್ತಿತ್ವದ ಒಂದು "ನವ ಕಲ್ಪನೆ" ಮಾತ್ರವಲ್ಲ. ಶ್ರೀ ಅರವಿಂದರು ಈ ಕಲ್ಪನೆಯನ್ನು ವ್ಯಕ್ತಪಡಿಸಿದರು. ಅನೇಕ ಸಲ ಸ್ವತಃ ನಾನು ಇದನ್ನು ವ್ಯಕ್ತಪಡಿಸಿರುವೆ. ಈ ರೀತಿಯಲ್ಲಿ ಅದನ್ನು ಸೂತ್ರೀಕರಿಸಬಹುದು: ಜೀವನದಿಂದ ತಪ್ಪಿಸಿಕೊಳ್ಳಲು ದೈವೀ ಅಸ್ತಿತ್ವದೊಳಗಡೆಗೆ ಪ್ರವೇಶಿಸುವದೇ ಪುರಾತನ ಆಧ್ಯಾತ್ಮಿಕತೆ. ಇದರಲ್ಲಿ ಪ್ರಪಂಚವು ಹೇಗೆ ಇರುವದೋ ಹಾಗೆ ಇರಲು ಬಿಟ್ಟುಬಿಡಲಾಗುವದು. ಆದರೆ ನಮ್ಮ ನವ ದರ್ಶನದಲ್ಲಿ, ಇದಕ್ಕೆ ತದ್ವಿರುದ್ಧವಾಗಿ ಜೀವನವನ್ನು ದೈವೀಕರಣಗೊಳಿಸಲಾಗುವದು. ದೈವೀ ಪ್ರಪಂಚವಾಗಿ ಭೌತಿಕ ಪ್ರಪಂಚವನ್ನು ಪರಿವರ್ತನೆಗೊಳಿಸಲಾಗುವದು. ಇದನ್ನು ಪುನಃ ಪುನಃ ಹೇಳಲಾಗಿದೆ, ಹೆಚ್ಚು ಕಮ್ಮಿ ಅರ್ಥಮಾಡಿಕೊಳ್ಳಲಾಗಿದೆ. ನಿಜಕ್ಕೂ, ನಾವು ಏನು ಮಾಡಬೇಕೆಂದಿರುವೆವೋ ಅದರ ಮೂಲ ಚಿಂತನೆಯೇ ಇದಾಗಿದೆ. ಆದರೆ ಇದು ಸುಧಾರಣೆಯೊಂದಿಗಿನ ಮುಂದುವರಿಸುವಿಕೆಯೂ ಆಗಿರಬಹುದು. ಹಿಂದೆ ಇದ್ದ ಪುರಾತನ ಜಗತ್ತಿನ ವಿಸ್ತರಣೆ. ಚಿಂತನೆಯ ಕ್ಷೇತ್ರದ ಔನ್ನತ್ಯದಲ್ಲಿ ಇದು ಒಂದು ಕಲ್ಪನೆಯಾಗಿ ಇರುವವರೆಗೂ, ಅದಕ್ಕಿಂತ ಇನ್ನೂ ಹೆಚ್ಚಿನ ಪ್ರಾಶಸ್ತ್ಯವನ್ನೇನೂ ಇದು ಪಡೆದುಕೊಳ್ಳುವದಿಲ್ಲ. ಆದರೆ ಈಗ ಏನಾಗಿದೆ? ನಿಜಕ್ಕೂ ಒಂದು ಹೊಸ ವಸ್ತುವು ಜನ್ಮ ತಾಳಿದೆ. ಒಂದು ಹೊಸ ಪ್ರಪಂಚವು ಜನಿಸಿದೆ. ಇದು ಹಳೆಯದರ ಪರಿವರ್ತನೆಯಾಗಿರುವದಲ್ಲ. ಅದು ಜನ್ಮ ತಾಳಿರುವ ಹೊಸ ಪ್ರಪಂಚ. ನಾವು ಇವೆರಡು ಒಂದಕ್ಕೊಂದು ಸಿಕ್ಕಿಹಾಕಿಕೊಂಡಿರುವ ಸಂಕ್ರಮಣ ಕಾಲದಲ್ಲಿ ಇದ್ದೇವೆ. ಅಲ್ಲಿ ಇನ್ನೊಂದು ಈಗಲೂ ಶಕ್ತಿಭರಿತವಾಗಿ ಮುಂದುವರೆಯುತ್ತಿದೆ. ಜೊತೆಗೆ ಸಾಮಾನ್ಯ ಪ್ರಜ್ಞೆಯು ಸಂಪೂರ್ಣವಾಗಿ ಮೇಲುಗೈಯನ್ನು ಪಡೆದಿದೆ. ಆದರೆ ಹೊಸದು ಮೌನವಾಗಿ ಒಳಗಡೆಗೆ ಜಾರಿಕೊಂಡು ಆಗಮಿಸುತ್ತಿದೆ ಸಾಧಾರಣ–ವಾದುದೇನೋ ಎಂಬಂತೆ, ಕಣ್ಣಿಗೆ ಕಾಣದಂತೆ ಬರುತ್ತಿದೆ – ಅದು ಎಷ್ಟು ಅಗೋಚರವಾಗಿದೆಯೆಂದರೆ ಹೊರಗಡೆಯಿರುವ ಯಾವುದನ್ನೂ ಅದು ಸದ್ಯಕ್ಕೆ ಹೆಚ್ಚಾಗಿ ಕದಡುವದಿಲ್ಲ. ಅನೇಕ ಜನರ ಪ್ರಜ್ಞೆಯಲ್ಲಿ ಅದು ಇನ್ನೂ ಕಾಣಿಸಿಕೊಂಡೇ

ಇಲ್ಲ. ಆದರೂ ಅದು ಕೆಲಸ ಮಾಡುತ್ತಿದೆ, ವೃದ್ಧಿಸುತ್ತಿದೆ – ತಾನಿರುವೆನೆಂದು ತೋರ್ಪಡಿಸಿಕೊಳ್ಳುವಷ್ಟು ಬಲಶಾಲಿಯಾಗುವವರೆಗೂ ಹೀಗೆ ಮುಂದುವರೆಯುವದು.

**ಮತೀಯತೆಗಳ ಕಾಲ ಮುಗಿದುಹೋಗಿದೆ**

ಏನೇ ಹೇಳಿದರೂ, ವಿಷಯಗಳನ್ನು ಸರಳವಾಗಿ ಹೇಳಬೇಕೆಂದರೆ ಅಧಿಮನಸ್ಸಿನ ಸೃಷ್ಟಿಯಾಗಿತ್ತು. ಪುರಾತನ ಪ್ರಪಂಚದ ಗುಣ ವಿಶೇಷಗಳು ಎನ್ನುವರು ಶ್ರೀ ಅರವಿಂದರು. ಅದು ದೇವತೆಗಳ ಯುಗವಾಗಿತ್ತು. ಹೀಗಾಗಿ ಮತಗಳ ಕಾಲ. ನಾನು ಹೇಳಿದ ಹಾಗೆ, ಅದರ ಮೇಲಿರುವದತ್ತಲಿನ ಮಾನವ ಪ್ರಯತ್ನದ ಪುಷ್ಪಗಳು ಅಸಂಖ್ಯಾತ ಮತಗಳ ರೂಪವನ್ನು ಪಡೆದವು. ಅಂದರೆ ಅತ್ಯುತ್ತಮ ಆತ್ಮಗಳು ಮತ್ತು ಅಗೋಚರ ಪ್ರಪಂಚದ ನಡುವಿನ ಮತೀಯ ಸಂಬಂಧ. ಜೊತೆಗೆ ಇವುಗಳೆಲ್ಲದರ ತುತ್ತ ತುದಿಯಲ್ಲಿ, ಉನ್ನತ ಸಾಕ್ಷಾತ್ಕಾರದ ಕಡೆಗಿನ ಪ್ರಯತ್ನವಾಗಿ ಮತಗಳನ್ನು ಒಗ್ಗೂಡಿಸುವಿಕೆಯ ಚಿಂತನೆಯು ಉದ್ಭವಿಸಿದೆ. ಅಂದರೆ ಎಲ್ಲಾ ಅಭಿವ್ಯಕ್ತಿಗಳ ಹಿಂದಿರುವ ಈ "ಏಕೈಕ ವಸ್ತು"ವಿನದು; ಮತ್ತು ನಿಜಕ್ಕೂ ಹೇಳಬೇಕಾಗಿದ್ದರೆ, ಈ ಚಿಂತನೆಯು ಮಾನವನ ಅಭೀಪ್ಸೆಯ ಆತ್ಯಂತಿಕ ಪರಿಮಿತಿ. ಸರಿ, ಗಡಿಯಲ್ಲಿ, ಅದು ಅಧಿಮನಸ್ಸಿನ ಪ್ರಪಂಚಕ್ಕೇ ಇನ್ನೂ ಸಂಪೂರ್ಣವಾಗಿ ಸೇರಿದುದಾಗಿದೆ ಅಥವಾ ಅಧಿಮನಸ್ಸಿನ ಸೃಷ್ಟಿಯಾಗಿದೆ. ಈ "ಮತ್ತೊಂದು ವಿಷಯ"ದ ಕಡೆಗೆ ಅಲ್ಲಿಂದ ಅದು ನೋಡುತ್ತಿರುವಂತಿದೆ. ಈ ನವ ಸೃಷ್ಟಿಯನ್ನು ಗ್ರಹಿಸಲು ಅದಕ್ಕೆ ಆಗುತ್ತಿಲ್ಲ – ಅದನ್ನು ತಲುಪಲು ಪ್ರಯತ್ನಿಸುತ್ತಿದೆ, ಅದು ಹತ್ತಿರ ಬರುತ್ತಿರುವಂತೆ ಅನಿಸುತ್ತಿದೆ. ಆದರೆ ಹಿಡಿಯುವದು ಅಸಾಧ್ಯವಾಗಿದೆ. ಅದನ್ನು ಗ್ರಹಿಸಲು ಪುನರಾವರ್ತನೆಯು ಅವಶ್ಯಕ. ಅಧಿಮನಸ್ಸಿನ ಸೃಷ್ಟಿಯನ್ನು ತೊರೆಯುವದು ಅವಶ್ಯಕ. ಸೃಷ್ಟಿ, ನವ ಸೃಷ್ಟಿ, ಸುಪ್ರಮಾನಸ ಸೃಷ್ಟಿಯು ಅಸ್ಥಿತ್ವಕ್ಕೆ ಬರುವದು ಅವಶ್ಯಕವಾಗಿತ್ತು.

ಮತ್ತು ಈಗ, ಎಷ್ಟು ಹಳೆಯದಾಗಿ, ಈಗ ಕೆಲಸಕ್ಕೆ ಬಾರದವಾಗಿ, ಅನಿಯಂತ್ರಿತವಾದವಾಗಿ ಈ ಎಲ್ಲ ವಸ್ತುಗಳು ಕಾಣಿಸುವವು. ನೈಜ ಸತ್ಯದ ಎಂತಹ ಅಣಕವಾಗಿವೆ ಇವೆಲ್ಲ ಎನಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/149–51**

## ಭೌತ ವಸ್ತುಗಳನ್ನು ಒತ್ತುತ್ತಿರುವ ಸುವರ್ಣ ಶಕ್ತಿ

ಒಂದು ಸುವರ್ಣ ಶಕ್ತಿಯು ಕೆಳಗಡೆಗೆ ಒತ್ತುತ್ತಿರುವಂತೆ ಇದೆ. (ಒತ್ತುತ್ತಿರುವಂತೆ ಸೂಚಕವನ್ನು ಶ್ರೀಮಾತೆಯವರು ತೋರ್ಪಡಿಸುವರು.) ಅದು ಭೌತಿಕವಾಗಿ ಕಣ್ಣಿಗೆ ಗೋಚರಿಸುವದಿಲ್ಲ. ಆದರೆ ಅತ್ಯಧಿಕ ಭಾರವಾಗಿದೆ.

ಹೌದು ಹೌದು.

ಭೌತ ವಸ್ತುಗಳನ್ನು ಒತ್ತುತ್ತಿರುವ ಅದು ಅವುಗಳನ್ನು ಆಂತರಿಕವಾಗಿ ದೈವದತ್ತ ತಿರುಗುವಂತೆ ಒತ್ತಾಯಿಸುತ್ತಿದೆ – ಹೊರಗಡೆ ತಪ್ಪಿಸಿಕೊಂಡು ಹೋಗುವದಲ್ಲ. (ಮೇಲುಗಡೆಗೆ ಸೂಚಕ) ಆದರೆ ಆಂತರಿಕವಾಗಿ ದೈವದತ್ತ ತಿರುಗಿಸುತ್ತಿದೆ. ಆದುದರಿಂದ ತಕ್ಷಣವೇ ದುರಂತವು ನಿಶ್ಚಿತವಾಗಿ ಸಂಭವಿಸುವದು ಎಂದು ಅನಿಸುವದು. ಈ ತಪ್ಪಿಸಿಕೊಳ್ಳಲಾಗದ ದುರಂತದ ಗೋಚರಿಸುವಿಕೆಗಳೊಂದಿಗೆ ಈ ಸಂದರ್ಭಕ್ಕೆ ತಕ್ಕ ಪರಿಹಾರಗಳು ಸಹ ಲಭ್ಯವಿವೆ ಎಂದೂ ಅನಿಸದಿರದು. ಅಂದರೆ, ಪವಾಡಸದೃಶ ಘಟನೆಗಳು ತಮ್ಮಂತೆ ತಾವೇ ಸಂಭವಿಸುವವು. ಎರಡು ತುತ್ತ ತುದಿಗಳು ಇನ್ನೂ ಹೆಚ್ಚು ತುತ್ತ ತುದಿಯಾಗುತ್ತಿರುವಂತೆ ಇದೆ. ಅಥವಾ ಉತ್ತಮವಾದುದು ಇನ್ನೂ ಹೆಚ್ಚು ಉತ್ತಮವಾಗುತ್ತಿರುವಂತೆ ಇದೆ. ಕೆಟ್ಟದಾಗಿರುವದು ಮತ್ತಷ್ಟು ಕೆಟ್ಟದಾಗುವದು. ಅದು ಹಾಗೆ ಆಗುವದು. ಪ್ರಪಂಚವನ್ನು ಈ ಅಸಾಧಾರಣವಾದ ಭೀಕರ ಶಕ್ತಿ ಒತ್ತುತ್ತಿರುವದರಿಂದ ಹೀಗಾಗುವದು – ಅದು ನನ್ನ ಅನಿಸಿಕೆ.

ಹೌದು, ಅದು ಗೋಚರಿಸುತ್ತಿದೆ.

ಹೌದು, ಅದು ಹೀಗೆ ಅನುಭವಕ್ಕೆ ಬರುತ್ತಿದೆ. (ಶ್ರೀಮಾತೆ ಗಾಳಿಯಲ್ಲಿ ಬೆರಳುಗಳನ್ನು ಎತ್ತಿ ತೋರಿಸುವರು) ಮತ್ತು ಈಗಿನ ಪರಿಸ್ಥಿತಿಗಳಲ್ಲಿ, ಸಾಮಾನ್ಯವಾಗಿ ಉದಾಸೀನ ಭಾವದಿಂದ ಸಂಭವಿಸುವ ಅನೇಕ ವಿಷಯಗಳು ತೀವ್ರವಾಗುವವು. ಸಂದರ್ಭಗಳು, ವ್ಯತ್ಯಾಸಗಳು ತೀಕ್ಷ್ಣವಾಗುವವು. ದುಷ್ಟ ಸಂಕಲ್ಪಗಳು ತೀವ್ರವಾಗುವವು. ಮತ್ತು ಇದೇ ಸಮಯದಲ್ಲಿ ಅಸಾಧಾರಣವಾದ ಪವಾಡಗಳು ಸಹ ಸಂಭವಿಸುವವು. ನಿಜಕ್ಕೂ ಅದ್ಭುತವಾದವು! ಇನ್ನೇನು ಸತ್ತುಹೋಗುವರು ಎಂದುಕೊಂಡವರನ್ನು ರಕ್ಷಿಸಲಾಗುವದು. ಬಿಡಿಸಿಕೊಳ್ಳಲಾಗದಂತಹ ಕಗ್ಗಂಟುಗಳು ಇದ್ದಕ್ಕಿದ್ದಂತೆ ಪರಿಹಾರವನ್ನು ಪಡೆಯುವವು.

ಮತ್ತು ನಂತರ, ವೈಯಕ್ತಿಕವಾಗಿಯೂ ಸಹ ಇದೇ ಅನ್ವಯಿಸುವದು.

.... ತಿರುಗಲು ಯಾರಿಗೆ ಗೊತ್ತಿದೆಯೋ (ಅದನ್ನು ಹೇಗೆ ಹೇಳುವದು) ಯಾರು ಪ್ರಾಮಾಣಿಕವಾಗಿ ದೈವವನ್ನು ಕರೆಯುವರೋ, ಅದೊಂದೇ ನಮಗೆ ಶ್ರೀರಕ್ಷೆ ಎಂದು ಭಾವಿಸುವರೋ, ಇರುವದು ಅದೊಂದೇ ದಾರಿ ಎಂದು ತಿಳಿಯುವರೋ, ಮತ್ತು ಮನಸಾರೆ ತಮ್ಮನ್ನು ತಾವು ನೀಡುವರೋ, (ಸೀಳಿಕೊಂಡು ಮುನ್ನಡೆಯುವ ಸೂಚಕ) ಅವರಿಗೆ ಕೆಲವೇ ನಿಮಿಷಗಳಲ್ಲಿ ಅದ್ಭುತವು ಸಂಭವಿಸುವದು. ಅತ್ಯಂತ ಚಿಕ್ಕ ವಿಷಯಗಳಲ್ಲಿ, ಯಾವುದೂ ಚಿಕ್ಕದೂ ಅಲ್ಲ ಯಾವುದೂ ದೊಡ್ಡದೂ ಅಲ್ಲ. ಮುಖ್ಯವೋ ಅಥವಾ ಅಮುಖ್ಯವೋ ಎಲ್ಲವೂ ಒಂದೇ ಆಗಿದೆ.

ಮೌಲ್ಯಗಳು ಮಾತ್ರ ಬದಲಾಗುವವು.

ಅದು ಪ್ರಪಂಚದ ದರ್ಶನವೇ ಬದಲಾಯಿತೇನೋ ಎಂಬಂತೆ ಆಗುವದು (ಮೌನ).

ಅದು ಸುಪ್ರಮಾನಸದ ಅವರೋಹಣದಿಂದ ಪ್ರಪಂಚವು ಹೇಗೆ ಬದಲಾಗುವದು ಎಂಬುದರ ಕಲ್ಪನೆಯನ್ನು ನೀಡಲಿಕ್ಕಾಗಿ ಹೇಳಲಾಯಿತು. ನಿಜಕ್ಕೂ ತಟಸ್ಥವಾಗಿ ಇದ್ದ ವಸ್ತುಗಳು ಸಮಗ್ರಗೊಳ್ಳುವವು. ಒಂದು ಸಣ್ಣ ತಪ್ಪು ಅದರ ಪರಿಣಾಮಗಳಲ್ಲಿ ವರ್ಗೀಕರಣವಾಗುವದು. ಮತ್ತು ಸ್ವಲ್ಪ ಪ್ರಾಮಾಣಿಕತೆ, ಒಂದು ಸ್ವಲ್ಪ ನೈಜ ಅಭೀಪ್ಸೆಯೂ ಅದರ ಫಲ ನೀಡುವಿಕೆಯಲ್ಲಿ ಪವಾಡಸದೃಶವಾಗುವದು. ಜನರಲ್ಲಿ ಮೌಲ್ಯಗಳು ತೀವ್ರವಾಗಿದೆ; ಭೌತಿಕ ದೃಷ್ಟಿಕೋನದಿಂದಲೂ ಅತ್ಯಂತ ಚಿಕ್ಕ ತಪ್ಪು, ತುಂಬಾ ಚಿಕ್ಕದು ಸಹ ದೊಡ್ಡ ಪರಿಣಾಮಗಳನ್ನು ಉಂಟುಮಾಡುವದು. ಅಭೀಪ್ಸೆಯಲ್ಲಿ ಅತ್ಯಂತ ಕಡಿಮೆ ಪ್ರಾಮಾಣಿಕತೆಯನ್ನು ತೋರಿದರೂ ಅದ್ಭುತವಾದ ಫಲಿತಾಂಶವು ದೊರಕುವದು. ಮೌಲ್ಯಗಳು ತೀವ್ರವಾಗಿವೆ ಮತ್ತು ನಿರ್ದಿಷ್ಟವಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/313–14**

## ದೈವಕ್ಕೆ ಭೌತವನ್ನು ಅಧಿಕ ಪ್ರತಿಕ್ರಿಯಾಶಾಲಿಯಾಗಿ ಮಾಡುವದು

ನಾನು ಈ ನಿರ್ಧಾರವನ್ನು ತಳೆದಿರುವೆ. ನಾನು ನೋಡಿರುವೆ, ನಾನು ಗಮನಿಸಿರುವೆ ಮತ್ತು "ಸುಪ್ರಮಾನಸ"ವೆಂದು ನಾವು ಏನನ್ನು ಕರೆಯುವೆವೋ ಅದನ್ನು ನಾನು ದರ್ಶಿಸಿರುವೆ. ಇನ್ನೂ ಹೆಚ್ಚು ಉತ್ತಮವಾದ ಪದವು ಇಲ್ಲದಿರುವದರಿಂದ ಅದನ್ನು "ಸುಪ್ರಮಾನಸ"ವೆಂದು ಕರೆಯಲಾಗಿದೆ. ಅದು

ಉನ್ನತ ಶಕ್ತಿಯೊಂದಿಗೆ ಸೃಷ್ಟಿಯು ಹೆಚ್ಚು ಸಂವೇದನಾಶೀಲತೆಯನ್ನು ಹೊಂದುವಂತೆ ಮಾಡುವದು. ನಾವು ಅದನ್ನು 'ದೈವಿಕ' ಎಂದು ಕರೆಯುವೆವು. ಏಕೆಂದರೆ ನಾವು .... ನಾವು ಈಗ ಏನಾಗಿರುವೆವೋ ಅದಕ್ಕೆ ಹೋಲಿಸಿದೆ "ಸುಪ್ರಮಾನಸ"ವು ದೈವಿಕ ಎಂದೇ ಹೇಳಬೇಕಾಗುವದು. (ಅವರೋಹಣ ಮತ್ತು ಒತ್ತಡದ ಸೂಚಕ) ಆದರೆ ಅದು ಭೌತವನ್ನು ಶಕ್ತಿಯೊಂದಿಗೆ ಹೆಚ್ಚು ಸಂವೇದನಾಶೀಲ ಮತ್ತು ಪ್ರತಿಕ್ರಿಯಾಶೀಲವಾಗಿ ಮಾಡಬೇಕು. ಅದನ್ನು ಹೇಗೆ ಹೇಳುವದು? ಈಗ ನಮಗೆ ಯಾವುದು ಅಗೋಚರವೋ ಮತ್ತು ಸಂವೇದನಾಶೀಲವಾಗಿ ಇಲ್ಲವೋ ಅದು ಅಸತ್ಯ (ನಾನು ಹೇಳುತ್ತಿರುವದು ಸಾಮಾನ್ಯ ಜನರಿಗೆ). ಹಾಗೆ ಇರದಿರುವ ಅನೇಕಾನೇಕ ದೃಢ ವಸ್ತುಗಳು ಇವೆಯೆಂದು ನಾವು ಹೇಳುವೆವು. ಆದರೂ ಭೌತವಲ್ಲದ ಈ ಅಪಾರ ಶಕ್ತಿಯು, ಭೂಮಿಯ ಮೇಲಿನ ಭೌತಿಕ ವಸ್ತುಗಳಿಗಿಂತ ಹೆಚ್ಚು ದೃಢವಾಗುವದು. ಹೌದು, ಅದು ಆಗುವದು.

ಸುಪ್ರಮಾನಸ ಸತ್ತೆಗಳಿಗೆ ಇದೇ ರಕ್ಷಣೆ ಮತ್ತು ರಕ್ಷಣಾ ಮಾರ್ಗ. ಗೋಚರಿಸುವಿಕೆಯಲ್ಲಿ ಅದು ವಸ್ತುವಿನಂತೆ ಇಲ್ಲ. ಆದರೆ ಭೌತ ವಸ್ತುಗಳಿಗಿಂತ ಭೌತಿಕದ ಮೇಲೆ ಹೆಚ್ಚು ಪ್ರಭಾವಶಾಲಿಯಾಗಿ ಇರುವದು. ದಿನದಿಂದ ದಿನಕ್ಕೆ, ಗಂಟೆಗಳು ಮುಂದೆ ಸಾಗುತ್ತಿದ್ದಂತೆ ಇದು ಹೆಚ್ಚು ಹೆಚ್ಚು ಸತ್ಯವಾಗುತ್ತಿದೆ. ನಾವು ದೈವವೆಂದು ಏನನ್ನು ಕರೆಯುವೆವೋ ಅದರಿಂದ ಈ ಶಕ್ತಿಯು ಮಾರ್ಗದರ್ಶನವನ್ನು ಪಡೆದಿದೆ ಎಂಬ ಭಾವನೆಯು ಇರುವಾಗ ನಿಜಕ್ಕೂ ಅದು – ನಿನಗೆ ಅರ್ಥವಾಯಿತೇ – ಭೌತ ವಸ್ತುವನ್ನು ಚಲಿಸುವಂತೆ ಮಾಡಬಲ್ಲ ಶಕ್ತಿಯನ್ನು ಹೊಂದಿರುವದು. ಅದು ಭೌತ ಅಪಘಾತವನ್ನು ಉಂಟುಮಾಡಬಲ್ಲದು ಮತ್ತು ಸಂಪೂರ್ಣವಾಗಿ ಭೌತಿಕವಾದ ವಸ್ತುವಿನ ಪರಿಣಾಮವನ್ನು ಇಲ್ಲವಾಗಿಸ–ಬಲ್ಲದು. ಅದು ಭೌತ ವಸ್ತುವಿಗಿಂತಲೂ ಹೆಚ್ಚು ಬಲಶಾಲಿ. ಇದೇ ಸಂಪೂರ್ಣವಾಗಿ ನವ ನವೀನವಾಗಿ ಇರುವದು. ಮತ್ತು ಗ್ರಹಿಸಲು ಅಸಾಧ್ಯವಾಗಿ ಇರುವದು. ಹೀಗಾಗಿ ಮಾನವರ ಸಾಮಾನ್ಯ ಪ್ರಜ್ಞೆಯಲ್ಲಿ ಒಂದು ವಿಧದ ನೋವನ್ನು ಅದು ಉಂಟುಮಾಡುವದು. ಹೌದು ಅದೇ ಆಗಿದೆ. ಅದು ಹೇಗಿದೆಯೆಂದರೆ .... ಅದು ಹಿಂದೆ ಇದ್ದ ರೀತಿಯಲ್ಲಿ ಇಲ್ಲ. ಮತ್ತು ನಿಜಕ್ಕೂ ಹೊಸದೇನೋ ಆಗಮಿಸಿದೆ. ಅದು ಇನ್ನು ಹಿಂದಿನಂತೆ ಇಲ್ಲ.

ನಮ್ಮ ಎಲ್ಲಾ ಸಾಮಾನ್ಯ ಪ್ರಜ್ಞೆ, ನಮ್ಮ ಎಲ್ಲಾ ತರ್ಕ, ನಮ್ಮ ಎಲ್ಲಾ ಪ್ರಾಯೋಗಿಕ ಸಂವೇದನೆ ನೆಲದ ಮೇಲೆ ಬಿದ್ದಿದೆ.

ಉಪಯೋಗರಹಿತ! ಅದಕ್ಕೆ ಇನ್ನು ಯಾವ ಶಕ್ತಿಯೂ ಇಲ್ಲ, ನೈಜತೆಯೂ ಇಲ್ಲ. ಈಗ ಇರುವದಕ್ಕೆ ಅದು ಸಂಬಂಧಿಸಿಯೇ ಇಲ್ಲ. ಅದು ನಿಜಕ್ಕೂ ಒಂದು ಹೊಸ ಪ್ರಪಂಚ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/315–16**

## ಮಹದ್ಬದಲಾವಣೆ

**– ಅನು: ಶ್ರೀ ಪ್ರವೀಣಕುಮಾರ ಪಾಟೀಲ, ಮಾನವಿ**

**ನವ ಸೃಷ್ಟಿಗಾಗಿ ತಯಾರಿ**

*ಶ್ರೀಮಾತೆ, "ಜಗವು ಒಂದು ಶ್ರೇಷ್ಠ ಬದಲಾವಣೆಗೆ ತಯಾರಾಗುತ್ತಿದೆ. ನೀವು ಸಹಾಯ ಮಾಡುವಿರಾ?" ಶ್ರೇಷ್ಠ ಬದಲಾವಣೆಯ ಬಗ್ಗೆ ನೀವು ಮಾತನಾಡುವಿರಲ್ಲಾ, ಹಾಗೆಂದರೇನು? ಮತ್ತು ನಾವು ಇದಕ್ಕೆ ಯಾವ ರೀತಿಯಲ್ಲಿ ಸಹಾಯವಾಗಬಹುದು?*

ಈ ಶ್ರೇಷ್ಠ ಬದಲಾವಣೆಯೆಂದರೆ, ಅದು ಪ್ರಾಣಿಗಳಿಗೆ ಮಾನವ ಹೇಗೋ ಅದೇ ರೀತಿ ಮಾನವನಿಗೆ ಹೊಸ ಜನಾಂಗವು ಪೃಥ್ವಿಯ ಮೇಲೆ ಕಾಣಿಸಿಕೊಳ್ಳುತ್ತದೆ. ಯಾರು ಈ ಹೊಸ ಜನಾಂಗದ ಪ್ರಜ್ಞೆಯನ್ನು ಗ್ರಹಿಸುವರು ಮತ್ತು ಲಕ್ಷ್ಯಕೊಡುವರು ಅವರ ಜ್ಞಾನೋದಯಕ್ಕಾಗಿ ಈಗಾಗಲೇ ಪೃಥ್ವಿಯ ಮೇಲೆ ಕಾರ್ಯಗೈಯುತ್ತಿದೆ.

*ನೀವು ನಮಗೆ ನಿಮಗೆ ಸಹಾಯ ಮಾಡಲು ಕೇಳಿದ್ದೀರಿ. ನಾನು ನಿಮಗೆ ಹೇಗೆ ಸಹಾಯ ಮಾಡಬಹುದು? ನಾನೇನು ಮಾಡಲಿ?*

ಮೇಲಿನಿಂದ ಇಳಿದು ಬರುತ್ತಿರುವ ಹೊಸ ವಸ್ತುಗಳನ್ನು ಗ್ರಹಿಸಲು ಹೊಸ ಪ್ರಗತಿದಾಯಕ ಪ್ರಜ್ಞೆಯ ಮೇಲೆ ಕೇಂದ್ರಿಕರಿಸಿ ಅದನ್ನು ಗ್ರಹಿಸಲು ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳಿ.

ಈ ಬದಲಾವಣೆ ಬರಲು ನಮ್ಮ ಸಹಾಯ ಬೇಕಿಲ್ಲ ಆದರೆ ನಮ್ಮನ್ನು ನಾವು ಈ ಪ್ರಜ್ಞೆಗೆ ತೆರೆದಿಟ್ಟುಕೊಳ್ಳಬೇಕು. ಆಗ ಅದರ ಬರುವಿಕೆಯು ನಮಗೆ ವ್ಯರ್ಥವಾಗುವದಿಲ್ಲ.

*ಕಳೆದ ವರ್ಷ ಇಳಿದು ಬಂದ ಈ ಹೊಸ ಪ್ರಜ್ಞೆಯು ನಮ್ಮಲ್ಲಿ ಸ್ವತಂತ್ರವಾಗಿ ಕೆಲಸ ಮಾಡಲು ಸಾಧಕನು ಏನು ಮಾಡಬೇಕು?*

1. ಸ್ವೀಕಾರ ಮನೋಭಾವದಿಂದಿರಿ ಮತ್ತು
2. ನಮ್ರವಾಗಿರಿ

ಈ ಹೊಸ ಪ್ರಜ್ಞೆಯನ್ನು ಸ್ವೀಕರಿಸಲು ನಾವು ಮಾಡಬೇಕಾದ ಅತ್ಯವಶ್ಯಕ ತಯಾರಿಯೆಂದರೆ ನಿಜವಾದ ಮತ್ತು ಸಹಜವಾದ ದೀನಭಾವದ ಸ್ಥಿತಿ, ಇದು ನಾವು ಮುಂದೆ ಪಡೆಯಬೇಕಾದ ಅತ್ಯದ್ಭುತವಾದ ವಸ್ತುಗಳ ಸಮ್ಮುಖದಲ್ಲಿ ನಮಗೆ ಏನೂ ಗೊತ್ತಿಲ್ಲ ಮತ್ತು ನಾವು ಏನೂ ಅಲ್ಲ ಎಂಬ ಆಳವಾದ ಭಾವನೆಯನ್ನು ತರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/107–08**

**ಅಹಂಕಾರವೇ ದೊಡ್ಡ ಅಡೆತಡೆ**

ಆದರೆ ಒಂದು ಅವಶ್ಯಕ ಸ್ಥಿತಿಯೆಂದರೆ ಅಹಂಕಾರದ ಅಳ್ವಿಕೆಯು ಸಂಪೂರ್ಣವಾಗಿ ಮುಕ್ತವಾಗಿರಬೇಕು. ಈಗ ಅಹಂಕಾರವೇ ಅಡೆತಡೆಯಾಗಿದೆ. ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯನ್ನು ಸ್ಥಾಪಿಸಬೇಕು. ಶ್ರೀ ಅರವಿಂದರು ಅದನ್ನು ಅತಿಮಾನಸವೆಂದು ಕರೆದಿದ್ದಾರೆ; ನಾವು ಅದನ್ನು ಅತಿಮಾನಸವೆಂದು ಕರೆಯುತ್ತೇವೆ. ಏಕೆಂದರೆ, ಅಲ್ಲಿ ತಪ್ಪು ತಿಳುವಳಿಕೆಯಾಗಬಾರದು, ಏಕೆಂದರೆ ನಾವು "ದೈವತ್ವ"ವೆಂದು ಮಾತನಾಡಿಸಿದಾಗ ಜನರು "ದೇವರೆಂದು" ವಿಚಾರ ಮಾಡುತ್ತಾರೆ. ಅದು ಎಲ್ಲವನ್ನೂ ಕೆಡಿಸುತ್ತದೆ. ಅಲ್ಲ, ಇದು ಅದು ಅಲ್ಲ. (ಶ್ರೀಮಾತೆಯವರು ತಮ್ಮ ಮುಚ್ಚಿದ ಮುಷ್ಠಿಯನ್ನು ನಿಧಾನವನ್ನು ಕೆಳಗಿಸಿಸುತ್ತಾರೆ) ಇದು ಅತಿಮಾನಸ ಜಗತ್ತಿನ ಅವತರಣಿಕೆ, ಇದು ಕೇವಲ ಪರಿಶುದ್ಧವಾದ ಕಾಲ್ಪನಿಕ ವಸ್ತುವಲ್ಲ (ಮೇಲ್ಗಡೆ ತೋರಿಸುತ್ತ) ಇದು ಸಂಪೂರ್ಣವಾಗಿ ಭೌತಿಕ "ಶಕ್ತಿ"ಯಾಗಿದೆ. ಆದರೆ (ಶ್ರೀಮಾತೆಯವರು ಮುಗುಳ್ನಗೆ) ಇದಕ್ಕೆ ಯಾವುದೇ ಭೌತಿಕ ಮಾಧ್ಯಮದ ಅವಶ್ಯಕತೆಯಿಲ್ಲ. ಒಂದು ಜಗತ್ತು ಈ ಜಗದಲ್ಲಿ ದೇಹಧಾರಣೆ ಗೈಯಲು ಬಯಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/316**

*ಒಂದು ಬಾರಿ ವಿಶ್ವ ಯುದ್ಧವು ಪ್ರಾರಂಭವಾದರೆ, ಅದು ಕೇವಲ ಭೌತಿಕ ಮಾನವತೆಯನ್ನು ನಾಶಮಾಡುವದಲ್ಲದೇ ಅಣು ಯುದ್ಧದ ಪರಿಣಾಮವಾಗಿ ಯಾರು ಬದುಕುಳಿಯುತ್ತಾರೋ ಅವರಿಗೂ ಜೀವಿಸುವ ಪರಿಸರವು*

*ಅಸಾಧ್ಯವಾಗಿರುತ್ತದೆ. ಒಂದು ಬಾರಿ ಆ ತರಹದ ಯುದ್ಧದ ಸಾಧ್ಯತೆಯು ಇದ್ದರೆ, ಪೃಥ್ವಿಯ ಮೇಲೆ ಅತಿಮಾನಸ ಸತ್ಯ ಮತ್ತು ಹೊಸ ಜನಾಂಗದ ಆಗಮನದ ಮೇಲೆ ಪರಿಣಾಮ ಬೀರುವುದಿಲ್ಲವೇ?*

ಇವೆಲ್ಲವೂ ಮಾನಸಿಕ ಉಹಾಪೋಹಗಳು ಮತ್ತು ಒಮ್ಮೆ ಮಾನಸಿಕ ಕಲ್ಪನೆಗಳ ಕ್ಷೇತ್ರದಲ್ಲಿ ಪ್ರವೇಶಿಸಿದರೆ ಅಲ್ಲಿಯ ಸಮಸ್ಯೆಗಳಿಗೆ ಮತ್ತು ಪರಿಹಾರಗಳಿಗೆ ಕೊನೆಯೇ ಇರುವುದಿಲ್ಲ. ಆದರೆ ಇವೆಲ್ಲವೂ ಸತ್ಯಕ್ಕೆ ಒಂದು ಹೆಜ್ಜೆ ಹತ್ತಿರದಷ್ಟೂ ಕರೆದೊಯ್ಯುವದಿಲ್ಲ. ಮನಸ್ಸಿನಲ್ಲಿ ಸುರಕ್ಷಿತ ಮತ್ತು ಆರೋಗ್ಯಕರ ದೃಷ್ಟಿಕೋನವೆಂದರೆ: ಮುಂಬರುವ ಅತಿಮಾನಸ ಸೃಷ್ಟಿಯು ಪ್ರಸ್ತುತ ಸೃಷ್ಟಿಯನ್ನು ಹಿಂಬಾಲಿಸುತ್ತದೆ. ಎಂದು ನಮಗೆ ಧನಾತ್ಮಕವಾಗಿ ನಿರ್ಧಿಷ್ಟವಾಗಿ ಹೇಳಲಾಗಿದೆ, ಆದ್ದರಿಂದ, ಭವಿಷ್ಯಕ್ಕಾಗಿ ಏನೆಲ್ಲಾ ತಯಾರಿ ನಡೆದಿದೆಯೋ ಅವೆಲ್ಲವೂ ಮುಂದಿನ ಆಗಮನಕ್ಕೆ ಅವಶ್ಯಕವಾದ ಪರಿಸರಗಳಾಗಿವೆ. ಮತ್ತು ನಮಗೆ ಈ ಪರಿಸರಗಳು ಏನೆಂದು ಸರಿಯಾಗಿ ತಿಳಿಯಲು ಆಗದ ಕಾರಣ, ಅವುಗಳ ಬಗ್ಗೆ ಸುಮ್ಮನಿರುವುದೇ ಒಳ್ಳೆಯದಾಗಿದೆ.

ತೊಂದರೆಗಳನ್ನು ನಿರೀಕ್ಷಿಸುವುದು ಎಂದರೆ ಅವುಗಳು ಕಾರ್ಯರೂಪಕ್ಕೆ ಬರಲು ಸಹಾಯ ಮಾಡಿದಂತೆ.

ದೈವೀ ಕೃಪೆಯ ಮೇಲೆ ಸಂಪೂರ್ಣ ನಂಬಿಕೆಯೊಂದಿಗೆ ಯಾವಾಗಲೂ ನಮ್ಮ ಮುನ್ಸೂಚನೆಯು ಶ್ರೇಷ್ಠವಾದುದನ್ನೇ ಬಯಸುವುದೇ ಸಹಕಾರ ಮಾಡಿದಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/111–12**

**ಹೊಸ ಜಗತ್ತಿನೊಡನೆ ಸಹಕರಿಸುವಿಕೆ**

ಇದು ಎಷ್ಟು ಸಮಯ ತೆಗೆದುಕೊಳ್ಳುತ್ತದೆಯೋ ಎಂದು ಮುನ್ಸೂಚಿಸುವುದು ಬಹಳ ಕಷ್ಟ. ಕೆಲವೊಂದು ಜನರ ಸ್ವಭಾವ ಮತ್ತು ಸ್ವೀಕಾರ ಮನೋಭಾವದ ಮೇಲೆ ಇದೆಲ್ಲವೂ ಅವಲಂಬಿಸಿದೆ. ವ್ಯಕ್ತಿಯು ಯಾವಾಗಲೂ ವೇಗವಾಗಿ ಮುಂದು–ವರೆಯುವನು. ಮತ್ತು ಪ್ರಕೃತಿಗೆ ಅನುಗುಣವಾಗಿ, ಬೇರೆಲ್ಲಾ ಸೃಷ್ಟಿಯ ಮುಂದೆ ಮಾನವ ಜನಾಂಗವೇ ಮೊದಲು ಅತಿಮಾನಸವನ್ನು ಪ್ರಕಟಿಸಲು ನಿರ್ಧಾರಿತವಾಗಿದೆ.

ಈ ಸಹಕಾರದ ತಳಹದಿಯೇ ನಾವು ಬದಲಾಗಬೇಕೆಂಬ ಸಂಕಲ್ಪದ ಅವಶ್ಯಕತೆಯಾಗಿದೆ, ನಾವು ಹೇಗೆ ಇದ್ದೆವೋ, ಹಾಗೆಯೇ ಇರುವುದಿಲ್ಲ. ಏನಿದೆಯೋ

ಅದು ಹಾಗೆಯೇ ಇರುವದಿಲ್ಲ. ಅದನ್ನು ತಲುಪಲು ಅನೇಕ ಮಾರ್ಗಗಳಿವೆ. ಯಾವ ಮಾರ್ಗವು ಯಶಸ್ಸನ್ನು ತರುತ್ತದೆಯೋ ಅದೆಲ್ಲವೂ ಒಳ್ಳೆಯವೇ! ವಾಸ್ತವದ ಬಗ್ಗೆ ಒಬ್ಬನಲ್ಲಿ ಅತಿಯಾದ ಜುಗುಪ್ಸೆ ಮೂಡಬಹುದು ಮತ್ತು ಉತ್ಕಟವಾಗಿ ಇದೆಲ್ಲವುದರಿಂದ ಹೊರಬಂದು ಮತ್ತು ಬೇರೆ ಏನನ್ನೋ ಪಡೆಯಬದುದು; ಮತ್ತು ಇದು ಧನಾತ್ಮಕವಾದ ರೀತಿ ಒಬ್ಬರ ಅಂತರಂಗದೊಳಗೆ ಧನಾತ್ಮಕವಾಗಿ ಸೌಂದರ್ಯಮಯ, ಸತ್ಯಮಯವಾದುದರ ಸ್ಪರ್ಶವಾಗಬಹುದು, ಈ ಹೊಸ ಸೌಂದರ್ಯ ಮತ್ತು ಸತ್ಯದೆಡೆಗಿನ ಪ್ರಯಾಣಕ್ಕೆ ಭಾರವಾದುದೆಲ್ಲವನ್ನು ಇಚ್ಛಾಪೂರ್ವಕವಾಗಿ ಬಿಟ್ಟುಕೊಡುವುದು.

ಪ್ರಗತಿಯಾಗಬೇಕೆಂಬ ಉತ್ಕಟ ಸಂಕಲ್ಪವೇ ಎಲ್ಲಾ ಸಂದರ್ಭಗಳಲ್ಲಿ ಅವಶ್ಯಕ–ವಾದುದಾಗಿದೆ, ಪ್ರಗತಿಗಾಗಿ ಅಡ್ಡಿಯಾಗುವ ಎಲ್ಲವನ್ನೂ ಇಚ್ಛಾಪೂರ್ವಕವಾಗಿ ಮತ್ತು ಸಂತೋಷದಿಂದ ತಿರಸ್ಕರಿಸುವುದು; ನಾವು ಮುಂದುವರೆಯಲು ಅಡ್ಡಿಯಾಗುವ ಎಲ್ಲದರಿಂದಲೂ ದೂರವಿರುವುದು ಮತ್ತು ಇದೇ ಭವಿಷ್ಯದ ಸತ್ಯವೆಂದು ಉತ್ಕಟವಾದ ಶ್ರದ್ಧೆಯನ್ನಿಟ್ಟುಕೊಂಡು ಆಜ್ಞೇಯನೊಳಗೆ ಹುಡುಕಾಡಬೇಕು. ಇದು "ಅನಿವಾರ್ಯ", ಇದು ಅವಶ್ಯಕವಾಗಿ ಬರಲೇಬೇಕಾಗಿದೆ. ಇದು ವಾಸ್ತವವಾಗುವುದನ್ನು ಯಾವುದೇ ಕೆಟ್ಟ ಸಂಕಲ್ಪದಿಂದಲೂ ಮತ್ತು ಪ್ರಕೃತಿಯಿಂದಲೂ ಯಾವುದರಿಂದ, ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಬಹು ದೂರವಲ್ಲದ ಭವಿಷ್ಯದಲ್ಲಿ ಪ್ರಸ್ತುತದಲ್ಲಿ ಕಾರ್ಯಗೈಯುತ್ತಿರುವ ವಾಸ್ತವವು ಮತ್ತು ಯಾರಿಗೆ ಹೇಗೆ ಬದಲಾಗಬೇಕೆಂದು ಗೊತ್ತಿದೆಯೋ ಯಾರಿಗೆ ಹಳೆಯ ರೂಢಿಗತ ಅಭ್ಯಾಸಗಳನ್ನು ಭಾರಮಾಡಿಕೊಳ್ಳದೆ ಅವರು ನಿಜವಾಗಿಯೂ ಇದನ್ನು ನೋಡುವುದಷ್ಟೇ ಅಲ್ಲದೆ ಸಾಕ್ಷಾತ್ಕಾರ ಮಾಡಿಕೊಂಡಂತಹ ಸುದೈವಿಗಳಾಗಿರುತ್ತಾರೆ.

ಜನರು ಮಲಗಿದ್ದಾರೆ, ಅವರು ಮರೆತಿದ್ದಾರೆ, ಅವರು ಜೀವನವನ್ನು ಸುಲಭವಾಗಿ ತೆಗೆದುಕೊಳ್ಳುತ್ತಾರೆ. ಎಲ್ಲಾ ಸಮಯದಲ್ಲೂ ಅವರು ಮರೆತಿದ್ದಾರೆ... ಆದರೆ ನಾನು ನೆನಪಿಟ್ಟುಕೊಂಡರೆ... ನಾವು ಅಸಾಧಾರಣವಾದ ಘಳಿಗೆಯಲ್ಲಿದ್ದೇವೆ, ಒಂದು ವಿಶಿಷ್ಟವಾದ ಸಮಯ, ಹೊಸ ಜಗತ್ತಿನ ಜನನದ ಸಮಯದಲ್ಲಿರುವುದು ಅದೆಂತಹ ಒಳ್ಳೆಯ ಅದೃಷ್ಟ ಹಾಗೂ ಇದು ಬೆಲೆ ಕಟ್ಟಲಾಗದ ಭಾಗ್ಯವಾಗಿದೆ. ನಮ್ಮ ಪ್ರಗತಿಗೆ ಯಾವುದು ಅಡೆತಡೆಯಾಗಿದೆಯೋ ಅದೆಲ್ಲದರಿಂದ ಸುಲಭವಾಗಿ ಹೊರಬರಬಹುದು.

ಹಾಗಾಗಿ, ಅತಿ ಮುಖ್ಯವಾದ ವಿಷಯವೆಂದರೆ ಈ ವಿಷಯವನ್ನು ನೆನಪಿಟ್ಟುಕೊಳ್ಳುವುದು; ನಮಗೆ ಧೃಡವಾದ ಅನುಭವವಿಲ್ಲದಾಗಲೂ ಅದರಲ್ಲಿ ಶ್ರದ್ಧೆ ಮತ್ತು ಭರವಸೆಯನ್ನು ಇಡಬೇಕು; ಯಾವಾಗಲೂ ನೆನಪಿಡಬೇಕು, ಸತತವಾಗಿ ಮರುಕಳಿಸಬೇಕು, ಇದೇ ವಿಚಾರವನ್ನಿಟ್ಟುಕೊಂಡು ನಿದ್ದೆಹೋಗಬೇಕು. ಮತ್ತು ಇದೇ ತಿಳುವಳಿಕೆಯಿಂದ ಎಚ್ಚೆತ್ತುಕೊಳ್ಳಬೇಕು. ನಾವು ಏನೆಲ್ಲಾ ಮಾಡಿದಾಗಲೂ ಈ ಶ್ರೇಷ್ಠ ಸತ್ಯವನ್ನು ಹಿನ್ನೆಲೆಯಲ್ಲಿಟ್ಟುಕೊಳ್ಳಬೇಕು, ಸತತವಾಗಿ ಬೆಂಬಲವಾಗಿ, ಒಂದು ಹೊಸ ಜಗತ್ತಿನ ಹುಟ್ಟನ್ನು ನಾವು ನೋಡುತ್ತಿದ್ದೇವೆ ಎಂಬ ಶ್ರೇಷ್ಠ ಸತ್ಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ನಾವು ಅದರಲ್ಲಿ ಭಾಗವಹಿಸಬಹುದು. ಈ ಹೊಸ ಜಗತ್ತೇ ನಾವಾಗಬಹುದು. ಮತ್ತು ನಿಜವಾಗಿಯೂ ಇಂತಹ ಅದ್ಭುತ ಅವಕಾಶ ಒಬ್ಬರಿಗೆ ಸಿಕ್ಕಾಗ, ಅದಕ್ಕಾಗಿ ಎಲ್ಲವನ್ನೂ ಬಿಟ್ಟುಕೊಡಲು ಸಿದ್ಧರಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/159–60**

**ಅಸಾಧಾರಣವಾದ ತಿರುವು**

ಜಗತ್ತಿನ ಇತಿಹಾಸದ ಅಸಾಧಾರಣ ಕಾಲ ಮತ್ತು ಅಸಾಧಾರಣ ತಿರುವಿನಲ್ಲಿ ಬದುಕುತ್ತಿದ್ದೇವೆ. ಬಹುಶಃ ಹಿಂದೆಂದೂ ಆಗದ ದ್ವೇಷ, ರಕ್ತಪಾತ, ಗೊಂದಲದಿಂದ ತುಂಬಿದ ಕತ್ತಲೆಯ ಸಮಯದ ಮೂಲಕ ಮಾನವ ಜನಾಂಗವು ಹಾದುಹೋಗುತ್ತದೆ. ಮತ್ತು ಇದೇ ಸಮಯದಲ್ಲಿ ಎಂದೂ ಇರದ ಶಕ್ತಿಶಾಲಿ, ಉತ್ಕಟ ಭರವಸೆಯು ಜನರ ಹೃದಯದಲ್ಲಿ ಜಾಗೃತವಾಗಿದೆ. ನಿಜವಾಗಿಯೂ, ನಮ್ಮ ಹೃದಯದ ವಾಣಿಯನ್ನು ಆಲಿಸಿದರೆ, ತಕ್ಷಣವೇ ನಮಗೆ ಅರಿವಾಗುತ್ತದೆ, ಹೆಚ್ಚು ಕಡಿಮೆ ಪ್ರಜ್ಞಾಪೂರ್ವಕವಾಗಿ, ನ್ಯಾಯ, ಸೌಂದರ್ಯ, ಸಾಮರಸ್ಯಯುತ ಸದ್ಭಾವ ಮತ್ತು ಭ್ರಾತೃತ್ವದ ಹೊಸ ಆಳ್ವಿಕೆಗಾಗಿ ನಾವು ಕಾಯುತ್ತಿದ್ದೇವೆ. ಮತ್ತು ವಾಸ್ತವ ಜಗದ ಸ್ಥಿತಿಯನ್ನು ನೋಡಿದಾಗ ಇದು ಅದರ ತದ್ವಿರುದ್ಧವಾಗಿದೆ. ಆದರೆ ನಮಗೆ ಗೊತ್ತು, ಉಷೆಯು ಬರುವ ಮುನ್ನ ಗಾಢವಾದ ಕತ್ತಲಿರುತ್ತದೆ. ಹಾಗಾಗಿ ಈ ಕತ್ತಲೆಯು ಮುಂಬರುವ ಉಷೆಯ ಲಕ್ಷಣವಲ್ಲವೇ? ಮತ್ತು ಹಿಂದೆಂದೂ ಕಾಣದ ಸಂಪೂರ್ಣ ಮತ್ತು ಭಯಾನಕ ಕತ್ತಲೆಯಾಗಿದೆ, ಆದ್ದರಿಂದ ಮುಂಬರುವ ಉಷೆಯು ಅಷ್ಟೇ ಪ್ರಜ್ವಲ, ಪರಿಶುದ್ಧ, ಪ್ರಕಾಶಮಾನವಾಗಿದೆ... ರಾತ್ರಿಯ ಕೆಟ್ಟ ಕನಸಿನ ನಂತರ ಜಗವು ಹೊಸ ಪ್ರಜ್ಞೆಯೊಂದಿಗೆ ಎಚ್ಚರವಾಗುವುದು.

ಯಾವ ನಾಗರೀಕತೆಯ ನಾಟಕವಾಗಿ ಈಗ ಕೊನೆಗೊಳ್ಳುತ್ತಿದೆಯೋ ಅದು ಮನಸಿನ ಶಕ್ತಿಯ ಮೇಲೆ ಆಧಾರವಾಗಿತ್ತು. ಜಡ ಮತ್ತು ಪ್ರಾಣದ ಜೊತೆಗೆ ಮನದ ವ್ಯವಹಾರವಾಗಿತ್ತು. ಆದ್ದರಿಂದ ಜಗತ್ತೇನಾಗಿದೆಯೋ ಎಂದು ಈಗ ಚರ್ಚೆ ಮಾಡುವ ಅಗತ್ಯವಿಲ್ಲ ಆದರೆ ಒಂದು ಹೊಸ ಆಳ್ವಿಕೆಯು ಬರುತ್ತಿದೆ, ಅದು ಆತ್ಮದ ಆಳ್ವಿಕೆಯಾಗಿದೆ; ಮಾನವನ ನಂತರ, ದೈವತ್ವದ ಆಳ್ವಿಕೆ ಬರಲಿದೆ.

ಆದಾಗ್ಯೂ, ಭೂಮಿಯ ಮೇಲೆ ಇಂತಹ ಅತ್ಯದ್ಭುತ, ವಿಶಿಷ್ಟ ಕಾಲದಲ್ಲಿ ಬದುಕುತ್ತಿರುವುದೇ ಅದೃಷ್ಟಶಾಲಿಯಾಗಿರುವಾಗ, ಅನಾವರಣಗೊಳ್ಳುತ್ತಿರುವ ಇಂತಹ ಘಟನೆಗಳನ್ನು ಕೇವಲ ಹೊರನಿಂತು ನೋಡುವುದು ಸರಿಯಾದುದೇ? ಯಾರ ಹೃದಯವು ತನ್ನದೇ ವ್ಯಕ್ತಿಗಳ ಮತ್ತು ಕುಟುಂಬದ ಮಿತಿಯನ್ನು ದಾಟಿ ವಿಸ್ತಾರವಾಗಿದೆಯೋ, ಯಾರ ವಿಚಾರಗಳು ಕೇವಲ ವೈಯಕ್ತಿಕ ಆಸಕ್ತಿಗಳು ಮತ್ತು ಪ್ರಾದೇಶಿಕ ಸಂಪ್ರದಾಯಗಳ ಆಚೆಗೆ ವಿಸ್ತರಿಸುತ್ತದೆಯೋ ಯಾರು ತಮಗೆ, ತಮ್ಮ ಕುಟುಂಬಕ್ಕೆ ಮತ್ತು ತಮ್ಮ ದೇಶಕ್ಕೆ ಮಾತ್ರ ಸೇರಿದವರಲ್ಲ ಎಂದು ಅರಿಯುತ್ತಾರೋ ಆದರೆ ಮಾನವ ಜನಾಂಗದ ಮೂಲಕ ಹಾಗೂ ಎಲ್ಲಾ ದೇಶಗಳ ಮೂಲಕ ತನ್ನನ್ನು ತಾನು ಪ್ರಕಟಪಡಿಸುವ ಆ ಪರಮಾತ್ಮನಿಗೆ ನಾನು ಸೇರಿದ್ದೇನೆ ಎಂದು ಅರಿತಿರುವರೋ, ನಿಜವಾಗಿ ಅವರು ಮಾತ್ರ ಇವೆಲ್ಲವನ್ನು ಮೀರಿ ಮಾನವ ಜನಾಂಗಕ್ಕಾಗಿ, ಉಷೆಯ ಆಗಮನಕ್ಕಾಗಿ ಕೆಲಸ ಮಾಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/158–59**

**ಅತಿಮಾನವನ ಕಡೆಗೆ ಮಾನವನ ದಾರಿ**

ಮಾನವ ಜನಾಂಗದಲ್ಲಿ ಕೆಲವೇ ಕೆಲವು ಜನರು ಅಂತರಾತ್ಮನನ್ನು ಬೆಳೆಸಿಕೊಂಡಿದ್ದಾರೆ. ಯಾರು ತಮ್ಮ ಎಲ್ಲಾ ಶಕ್ತಿಗಳನ್ನು ತಮ್ಮ ಅಸ್ತಿತ್ವದ ನಿಜ ನಿಯಮಗಳನ್ನು ಕಂಡುಕೊಳ್ಳಲು ಕೇಂದ್ರಿಕರಿಸುತ್ತಾರೋ ಅವರಿಗೆ ಹೆಚ್ಚು ಕಡಿಮೆ ಅಂತರ್ಭೋದೆಯ ಅಂಶವನ್ನು ಪಡೆದಿರುತ್ತಾರೆ. ಯಾವಾಗ ಮನಸ್ಸು ಸಂಪೂರ್ಣ ನಿಶ್ಚಲ ನೀರವತೆಯಿಂದ ಕೂಡಿರುತ್ತದೆಯೋ, ಸ್ವಚ್ಛ ಕನ್ನಡಿಯ ಹಾಗೆ ಪರಿಶುದ್ಧವಾಗಿರುತ್ತದೆಯೋ ಗಾಳಿಯಿಲ್ಲದ ದಿನದಂದು ನಿಶ್ಚಲವಾಗಿರುವ ಕೆರೆಯ ನೀರಿನಂತೆ, ಆಗ ಮೇಲಿನಿಂದ, ನಿಶ್ಚಲ ನೀರಿನ ಮೇಲೆ ನಕ್ಷತ್ರದ ಬೆಳಕು ಇಳಿದ ಹಾಗೆ ಅತಿಮಾನಸದ ಬೆಳಕು ಅದರೊಳಗಿರುವ ಸತ್ಯವು ನಿಶ್ಚಲ ಮನಸ್ಸಿನಲ್ಲಿ

ಹೊಳೆಯುತ್ತದೆ. ಮತ್ತು ಅಂತರ್ಭೋದೆಯ ಜನನವಾಗುತ್ತದೆ. ಯಾರು ಈ ನಿಶ್ಚಲ ನೀರವತೆಯಿಂದ ಬಂದ ಈ ವಾಣಿಯನ್ನು ಕೇಳಲು ಒಗ್ಗಿಕೊಂಡಿರುತ್ತಾರೋ, ಅವರು ಹೆಚ್ಚು ಹೆಚ್ಚು ಇವನ್ನೇ ತಮ್ಮ ಎಲ್ಲಾ ಕ್ರಿಯೆಗಳ ಹಿಂದಿರುವ ಉದ್ದೇಶವಾಗಿಸಿಕೊಳ್ಳುತ್ತಾರೆ; ಮತ್ತು ಎಲ್ಲಿ ಬೇರೆಯವರು, ಸಾಮಾನ್ಯ ಮನುಷ್ಯರು ತರ್ಕದ ಜಟಿಲ ಹಾದಿಗಳಲ್ಲಿ ಅಲೆದಾಡುತ್ತಿರುತ್ತಾರೋ ಆದರೆ ಅವರು ತಮ್ಮ ದಾರಿಯಲ್ಲಿ ನೇರವಾಗಿ ಹೋಗುತ್ತಾರೆ. ಅಂತರ್ಭೋದೆಯ ಮಾರ್ಗದರ್ಶನದ ಮೂಲಕ ಜೀವನದಲ್ಲಿ ಸುತ್ತುತಾರೆ. ಇದು ಅವರ ಶ್ರೇಷ್ಠ ಪ್ರವೃತ್ತಿ, ದೃಢವಾದ ಮತ್ತು ವಿಫಲವಾಗದ ಕರದ ಹಾಗೆ ಈ ಅಂತರ್ಭೋದೆಯು ಅಸಾಧಾರಣವಾಗಿದ್ದು ಈಗ ಬಹಳ ಮಟ್ಟಿಗೆ ಅಸಹಜವಾಗಿದೆ. ಆದರೆ ಮುಂದಿನ ಜನಾಂಗಕ್ಕೆ ನಾಳಿನ ಮಾನವನಿಗೆ, ಹೊಸ ಜನಾಂಗಕ್ಕೆ ಇದು ಸಹಜವು ಮತ್ತು ಸಾಮಾನ್ಯವಾಗಿರುತ್ತದೆ. ಆದರೆ ಇದರ ಸತತ ಉಪಯೋಗವು ಬಹುಶಃ ತರ್ಕಮಾಡುವ ಬುದ್ಧಿಗೆ ದುಷ್ಪರಿಣಾಮವಾಗಬಹುದು. ಯಾವ ರೀತಿಯಲ್ಲಿ ಮಾನವನು, ಮಂಗನ ಹಾಗೆ ಅತಿರೇಕದ ಬೌದ್ಧಿಕವನ್ನು ಪ್ರದರ್ಶಿಸಿ ತನ್ನ ಸಾಮರ್ಥ್ಯವನ್ನು ಕಳೆದುಕೊಂಡ ಹಾಗೆ, ಅತಿಮಾನವರು ಈ ಮಾನಸಿಕ ಸಾಮರ್ಥ್ಯ, ಅತಿರೇಕ ಮಾನಸಿಕ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ.

ಹಾಗಾಗಿ ಮಾನವನಿಗೆ ಅತಿಮಾನವತೆಯ ಮಾರ್ಗ ಯಾವಾಗ ತೆರೆದುಕೊಳ್ಳುತ್ತದೆ ಎಂದರೆ, ಇಲ್ಲಿಯವರೆಗೆ ಅವನಲ್ಲಿ ಬೆಳವಣಿಗೆಯಾಗದ, ಅದು ಸರಿಯಾಗದೇ ಮತ್ತು ಆದಾಗ್ಯೂ ವ್ಯರ್ಥವಾಗಿ ಗರ್ವ ಪಡುತ್ತಿರುವ ಅವನ ಬೌದ್ಧಿಕತೆಯನ್ನೂ ಸಹ ಗಮನಿಸದ, ಅವನಿಗೆ ಈಗ ಅದಷ್ಟೇ ಸಾಲದು ಎಂದು ಧೈರ್ಯದಿಂದ ಘೋಷಿಸಿ, ಮತ್ತು ತನ್ನೊಳಗಿರುವ ಈ ಉನ್ನತ ಶಕ್ತಿಯನ್ನು ಹೊರತೆಗೆದು, ಕಂಡು ಹಿಡಿದು ಸ್ವತಂತ್ರಗೊಳಿಸುವ ಕಾರ್ಯವೇ ಅವನ ಮುಂದಿನ ಶ್ರೇಷ್ಠ ಕಾರ್ಯವಾಗಬೇಕು. ಆಗ ಅವನ ತತ್ತ್ವ ಶಾಸ್ತ್ರ, ಕಲೆ, ವಿಜ್ಞಾನ, ನೀತಿ ಶಾಸ್ತ್ರ, ಸಾಮಾಜಿಕ ಅಸ್ತಿತ್ವ ಪ್ರಾಣಿಕ ಹುಡುಕಾಟಗಳು ಕೇವಲ ಮನ–ಪ್ರಾಣಕ್ಕಾಗಿ ಅಲ್ಲೇ ಸುತ್ತುವ ಚಟುವಟಿಕೆಗಳಾಗದೆ ಮನ ಪ್ರಾಣದ ಹಿಂದಿರುವ ಶ್ರೇಷ್ಠ ಸತ್ಯವನ್ನು ಹುಡುಕುವ ಮಾಧ್ಯಮಗಳಾಗಿ ಮತ್ತು ಅವುಗಳ ಶಕ್ತಿಯನ್ನು ಮಾನವನ ಅಸ್ತಿತ್ವದಲ್ಲಿ ತರುವುದಾಗಿದೆ. ಈ ಆವಿಷ್ಕಾರವು ನಿಜವಾದುದಾಗಿದೆ. ಏಕೆಂದರೆ ಅದು ನಮ್ಮ ಅತ್ಯುನ್ನತ ಆತ್ಮ ಮತ್ತು ಪ್ರಕೃತಿಯೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/163–64**

## ನವ ಯುಗದ ಪ್ರವರ್ತಕರು

ಆದ್ದರಿಂದ, ಈ ನವ ಯುಗದಲ್ಲಿ ಮಾನವತೆಯ ಭವಿಷ್ಯಕ್ಕೆ ಸಹಾಯ–ಮಾಡುವ ವ್ಯಕ್ತಿಗಳು ಯಾರೆಂದರೆ, ಆಧ್ಯಾತ್ಮಿಕ ವಿಕಾಸವೇ ಮಾನವನ ವಿಧಿಯೆಂದು ಗುರುತಿಸುವವರು. ಮತ್ತು ಪ್ರಸ್ತುತ ಮಾನವತೆಯನ್ನು ಆಧ್ಯಾತ್ಮೀಕರಣಗೊಂಡ ಮಾನವತೆಯಾಗಿ ಪರಿವರ್ತಿಸುವ ಅಥವಾ ವಿಕಾಸಗೊಳಿಸುವ ಮಾನವನ ಶ್ರೇಷ್ಠ ಅವಶ್ಯಕತೆಯಾಗಿದೆ ಎಂದು ಗುರುತಿಸುವವರು. ಪ್ರಾಣಿಕ ಮನುಷ್ಯನು ಅತ್ಯುನ್ನತ ಮಾನಸೀಕರಣಗೊಂಡ ಮಾನವತೆಯಾಗಿ ಬದಲಿಸಿದ ಹಾಗಾಗುತ್ತದೆ.

ಒಂದು ನಿರ್ಧಿಷ್ಟ ನಂಬಿಕೆಯಲ್ಲಿ ಮತ್ತು ಧರ್ಮದ ಪ್ರಕಾರದಲ್ಲಿ ತುಲನಾತ್ಮಕವಾಗಿ ನಿರ್ಲಿಪ್ತತೆಯಿಂದಿರುತ್ತಾರೆ, ಮತ್ತು ಜನರಿಗೆ ಸಹಜವಾಗಿ ಆಕರ್ಷಿತವಾದ ನಂಬಿಕೆ ಮತ್ತು ಪ್ರಕಾರಗಳನ್ನು ಆಯ್ಕೆ ಮಾಡಿಕೊಳ್ಳಲು ಬಿಡುತ್ತಾರೆ. ಆಧ್ಯಾತ್ಮಿಕ ಪರಿವರ್ತನೆ–ಯಲ್ಲಿರುವ ಶ್ರದ್ಧೆಯೇ ಮೂಲಸಾರವೆಂದು ಅವರು ಎತ್ತಿ ಹಿಡಿಯುತ್ತಾರೆ. ಬಹಿರಂಗ ಸಂಘ ಸಂಸ್ಥೆಗಳಿಂದ ಮತ್ತು ಯಾಂತ್ರಿಕತೆಯಿಂದ ಈ ಪರಿವರ್ತನೆಯನ್ನು ತರಬಹುದು ಎಂಬ ತಪ್ಪನ್ನು ಅವರು ಎಂದೂ ಮಾಡಲಾರರು. ಪ್ರತಿಯೊಬ್ಬ ಮಾನವನು ಇದನ್ನು ಅಂತರಂಗದಲ್ಲಿ ಬದುಕಬೇಕಾಗುತ್ತದೆ ಎಂಬುದು ಅವರಿಗೆ ಗೊತ್ತಿದೆ. ಮತ್ತು ಇದನ್ನು ಅವರು ಮರೆಯಲಾರರು ಅಥವಾ ಹೀಗಿಲ್ಲದೆ ಇದನ್ನು ವಾಸ್ತವದಲ್ಲಿ ತರಲಾರರು.

ಮತ್ತು ಇಂತಹ ವ್ಯಕ್ತಿಗಳ ನಡುವೆ ಈ ಶ್ರೇಷ್ಠ ಬದಲಾವಣೆಯನ್ನು ಮೊಟ್ಟಮೊದಲು ಸಾಕ್ಷಾತ್ಕಾರ ಮಾಡಿಕೊಳ್ಳುವವಳು ಮಹಿಳೆಯೇ ಆಗಿರಬೇಕಾಗುತ್ತದೆ. ಹೊಸ ಜನಾಂಗಕ್ಕೆ ಜನ್ಮ ನೀಡುವ ವಿಶಿಷ್ಟ ಕಾಯಕವು ಈಕೆಯದ್ದೇ ಆಗಿದೆ. ಮತ್ತು ಇದನ್ನೇ ಮಾಡಲು ಆಧ್ಯಾತ್ಮಿಕ ಪರಿವರ್ತನೆಯ ಪ್ರಾಯೋಗಿಕ ಪರಿಣಾಮಗಳೇನೆಂದು ಆಕೆ ಹೆಚ್ಚು–ಕಡಿಮೆ ಅರಿತಿರಬೇಕಾಗುತ್ತದೆ. ಇದನ್ನು ಕೇವಲ ಬಹಿರಂಗದ ರೂಪಾಂತರದಿಂದ ತರಲು ಸಾಧ್ಯವಿಲ್ಲವೆಂದರೆ ಬಹಿರಂಗದ ರೂಪಾಂತರ ತರಲಾರದೆ, ಇದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಇದನ್ನು ಕೇವಲ ಬೌದ್ಧಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ, ನೈತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯೂ ತರಬೇಕಾಗುತ್ತದೆ. ಧಾರ್ಮಿಕ ನಂಬಿಕೆಗಳು ಮತ್ತು ಪಂಥಗಳು ಎರಡನೆಯ ಅಂಶಗಳಾದ ಹಾಗೆ, ಅದೇ ರೀತಿಯಲ್ಲಿ ನೈತಿಕ ನಿರ್ಬಂಧಗಳು ಮತ್ತು ಕಟ್ಟಳೆಗಳು, ನಡವಳಿಕೆಯ ನಿಯಮಗಳು ಅಥವಾ ಸಂಪ್ರದಾಯಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/166–67**

## ಮಾನವ ಮತ್ತು ಅತಿಮಾನವ

ನಿಜವಾಗಿಯೂ ಪ್ರಾಣಿಕ ಸಂಕಲ್ಪ, ಅದರ ತುಡಿತಗಳು ಮತ್ತು ಮಾನಸಿಕ ಶಕ್ತಿಯ ಜೊತೆಗಿರುವ ಆದೇಶಗಳು ಇವೆರಡರ ಮಧ್ಯವಿರುವ ಹೋರಾಟವೇ ಮಾನವ ಜೀವನದಲ್ಲಿ ನೈತಿಕತೆಯ ತೊಂದರೆಗಳಿಗೆ ಕಾರಣವಾಗಿದೆ. ಮಾನಸಿಕ ಶಕ್ತಿಯ ಅಧೀನದಲ್ಲಿ ಪ್ರಾಣದ ಸಂಕಲ್ಪ ಬಂದಾಗ ವ್ಯಕ್ತಿ ಅಥವಾ ಸಮಾಜವು ನೈತಿಕವಾಗುತ್ತದೆ. ಆದರೆ, ಪ್ರಾಣಿಕ ಸಂಕಲ್ಪ ಮತ್ತು ಮಾನಸಿಕ ಶಕ್ತಿ ಇವೆರಡೂ ಸಮಾನವಾಗಿ ತಮಗಿಂತ ಉನ್ನತವಾದುದಕ್ಕೆ, ಅತಿಮಾನಸಕ್ಕೆ ವಿಧೇಯರಾದರೆ, ಮಾನವ ಜೀವನವನ್ನು ಮೀರಿದಂತಾಗುತ್ತದೆ, ನಿಜವಾದ ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತದೆ, ಅದುವೇ ಅತಿಮಾನವನ ಜೀವನ; ಅವನ ನಿಯಮವು ಅಂತರಂಗದಿಂದ ಬರುತ್ತದೆ, ಅದು ಪ್ರತಿಯೊಂದು ಜೀವಿಯ ಕೇಂದ್ರದಲ್ಲಿ ಹೊಳೆಯುತ್ತಿರುವ ದೈವೀ ನಿಯಮವಾಗಿರುತ್ತದೆ. ಮತ್ತು ಅಲ್ಲಿಂದ ಜೀವನವನ್ನು ಆಳುತ್ತದೆ, ದೈವೀ ನಿಯಮವು ತನ್ನ ಪ್ರಕಟಣೆಯಲ್ಲಿ ಅನೇಕತೆಯಿಂದಿದ್ದರೂ ಅದರ ಮೂಲವು ಒಂದೇಯಾಗಿರುತ್ತದೆ. ಇದರಲ್ಲಿರುವ ಐಕ್ಯತೆಯಿಂದಾಗಿ ಈ ನಿಯಮವು ಪರಮ ವ್ಯವಸ್ಥೆ ಮತ್ತು ಸಾಮರಸ್ಯದ ನಿಯಮವಾಗಿರುತ್ತದೆ.

ಆಗ ವ್ಯಕ್ತಿಯು ಅಹಂಕಾರದಿಂದ ಕೂಡಿದ ಉದ್ದೇಶಗಳ, ನಿಯಮಗಳ, ಪದ್ಧತಿಗಳ ಮಾರ್ಗದರ್ಶನದಿಂದ ವಿಮುಖನಾಗಿ ತನ್ನೆಲ್ಲಾ ಸ್ವಾರ್ಥಪರ ಗುರಿಗಳನ್ನು ತ್ಯಜಿಸುತ್ತಾನೆ. ಅವನ ನಿಯಮವು ಪರಿಪೂರ್ಣ ನಿರಾಸಕ್ತ ಭಾವದಿಂದ ಕೂಡಿರುತ್ತದೆ. ಜಗತ್ತಿನಲ್ಲಾಗಲಿ ಅಥವಾ ಅದರಾಚೆಯಲ್ಲಾಗಲಿ ವೈಯಕ್ತಿಕ ಲಾಭದ ದೃಷ್ಟಿಯಿಂದ ಕ್ರಿಯೆಮಾಡುವುದು ಯೋಚಿಸಲಾಗದ ಅಸಾಧ್ಯತೆಯಾಗುತ್ತದೆ. ದೈವೀ ನಿಯಮದಿಂದ ಸ್ಫೂರ್ತಿಗೊಂಡು ಸಂಪೂರ್ಣ ಸರಳ ಆನಂದದಿಂದ ವಿಧೇಯನಾಗಿ ಪ್ರತಿಕ್ರಿಯೆಯನ್ನು ಮಾಡಲಾಗುವುದು. ಯಾವುದೇ ಪ್ರಶಸ್ತಿ ಅಥವಾ ಪರಿಣಾಮವನ್ನು ಹುಡುಕದೇ ಆ ಸ್ಫೂರ್ತಿಯ ಅಡಿಯಲ್ಲಿ ಆನಂದದಿಂದ ಕ್ರಿಯೆ ಮಾಡುವುದೇ ಪರಮ ಪ್ರಶಸ್ತಿಯಾಗಿದೆ. ನಮ್ಮ ಅಂತರಂಗದಲ್ಲಿರುವ ದೈವೀ ತತ್ತ್ವದಲ್ಲಿ ನಮ್ಮ ಸಂಕಲ್ಪ ಪ್ರಜ್ಞೆಯೊಡನೆ ತಾದಾತ್ಮ್ಯ ಹೊಂದುವುದಾಗಿದೆ. ಮತ್ತು ಈ ತಾದಾತ್ಮ್ಯತೆಯಲ್ಲಿ ಅತಿಮಾನವನು ಸಾಮಾಜಿಕ ಮಾನದಂಡವನ್ನು ಕಂಡುಕೊಳ್ಳುವನು. ತನ್ನೊಳಗೆ ದೈವೀ ನಿಯಮವನ್ನು ಆವಿಷ್ಕಾರ ಮಾಡಿಕೊಳ್ಳುವದರಿಂದ ಅದೇ ದೈವೀ ನಿಯಮವನ್ನು ಎಲ್ಲರಲ್ಲಿ ಗುರುತಿಸುವನು.

ಮತ್ತು ತನ್ನೊಳಗೆ ಅದರ ಜೊತೆಗೆ ತಾದಾತ್ಮ್ಯಗೊಳ್ಳುವದರಿಂದ ಅದನ್ನು ಎಲ್ಲರಲ್ಲಿಯೂ ತಾದಾತ್ಮ್ಯ ಭಾವದಿಂದ ನೋಡುವನು. ಆಗ ಎಲ್ಲರೊಳಗಿರುವ ಐಕ್ಯತೆಯ ಅರಿವು ಬರುವುದು. ಅದು ಕೇವಲ ಸಾರ ಮತ್ತು ವಸ್ತುವಿನಲ್ಲಿ ಅಷ್ಟೇ ಅಲ್ಲದೇ ಬಹಿರಂಗದ ಪ್ರಾಣ ಮತ್ತು ರೂಪದಲ್ಲಿಯೂ ಕಂಡುಕೊಳ್ಳುವನು. ಅದು ಕೇವಲ ಮನ ಪ್ರಾಣ ದೇಹವಾಗಿರದೆ ಆತ್ಮದ ತಿಳುವಳಿಕೆ ಮತ್ತು ಆಧಾರವಾಗಿರುವನು, ನಿಶ್ಚಲ ನೀರವತೆ ಶಾಂತ ಶಾಶ್ವತತೆಯಾಗಿದ್ದುಕೊಂಡು ಅವುಗಳನ್ನು ತನ್ನ ಒಡೆತನದಲ್ಲಿಟ್ಟುಕೊಂಡಿರುವನು; ಮತ್ತು ಈ ಆತ್ಮವು ಎಲ್ಲಾ ಜೀವಿಗಳ ಮನಸ್ಸುಗಳ ಮತ್ತು ದೇಹಗಳ ಆಧಾರವಾಗಿ, ತಿಳುವಳಿಕೆಯಾಗಿ ಮತ್ತು ಒಡೆತನದಲ್ಲಿಟ್ಟುಕೊಂಡಿರುವನು. ಈ ಆತ್ಮವು ದೈವೀ ಸೃಷ್ಟಿಕರ್ತನಾಗಿ ಮತ್ತು ಎಲ್ಲಾ ಕರ್ಮಗಳ ಕರ್ತೃವಾಗಿ ಎಲ್ಲಾ ಅಸ್ತಿತ್ವಗಳಲ್ಲಿ ಏಕನಾಗಿರುವ ಎಂಬ ಅರಿವಿನಿಂದ ಅವನು ಇರುತ್ತಾನೆ; ವಿಶ್ವಾತ್ಮಕ ಪ್ರಕಟಣೆಯಲ್ಲಿರುವ ಅನೇಕ ಆತ್ಮಗಳು ಆ ಏಕಮಾತ್ರ ದೈವತ್ವದ ಮುಖಗಳಾಗಿವೆ. ಪ್ರತಿಯೊಂದು ಸತ್ತೆಯ ವಿಶ್ವಾತ್ಮಕ ದೈವತ್ವವನ್ನು ಪ್ರತಿನಿಧಿಸುವ ಅನೇಕ ಮುಖಗಳೆಂದು ಅವನು ತಿಳಿಯುವನು. ಅವನು ಅದರಲ್ಲಿ ಲೀನವಾಗುವನು. ಮತ್ತು ತನ್ನ ಮನ ಪ್ರಾಣ ದೇಹವನ್ನು ಆ ಆತ್ಮದ ಒಂದು ಪ್ರತಿನಿಧಿಯೆಂದು ತಿಳಿಯುವನು. ಪ್ರಸ್ತುತ ಯಾರನ್ನು ನಾವು ಬೇರೆಯವರು ಎಂದು ತಿಳಿದಿದ್ದೇವೆಯೋ ಆತನ ಪ್ರಜ್ಞೆಗೆ ತನ್ನದೇ ಆತ್ಮವು ಬೇರೆಯವರ ಮನ ಪ್ರಾಣ ದೇಹದಲ್ಲಿ ಇರುವುದ ಎಂದು ನೋಡುತ್ತಾನೆ. ಎಲ್ಲರ ದೇಹಗಳನ್ನು ತನ್ನದೇ ದೇಹವೆಂದು ಭಾವಿಸುತ್ತಾನೆ. ಏಕೆಂದರೆ ಅವನು ಎಲ್ಲಾ ಭೌತಿಕ ವಸ್ತುವಿನ ಸತತ ಐಕ್ಯದಲ್ಲಿರುತ್ತಾನೆ; ಎಲ್ಲಾ ಅಸ್ತಿತ್ವದೊಡನೆ ಐಕ್ಯ ಹೊಂದುವನು; ಸಂಕ್ಷಿಪ್ತವಾಗಿ ಎಲ್ಲಾ ವ್ಯಕ್ತಿಗಳಲ್ಲಿ ತನ್ನನ್ನು ನೋಡುವನು. ಮತ್ತು ಭಾವಿಸುವನು. ಹಾಗಾಗಿ ಪರಿಪೂರ್ಣತೆಯ ಐಕ್ಯತೆಯಲ್ಲಿ ಒಗ್ಗಟ್ಟನ್ನು ಕಾಣುವನು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/167–68**

ನಾವು ವಿಶ್ವಾತ್ಮಕ ಅಸ್ತಿತ್ವದ ವಿಶೇಷವಾಗಿ ಅನುಕೂಲಕರ ಕ್ಷಣದಲ್ಲಿದ್ದೇವೆ. ಒಂದು ಹೊಸ ಸೃಷ್ಟಿಗಾಗಿ ಭೂಮಿಯ ಮೇಲೆ ಈ ಕ್ಷಣ ಎಲ್ಲವೂ ತಯಾರಾಗುತ್ತಿದೆ. ಅಥವಾ ಶಾಶ್ವತ ಸೃಷ್ಟಿಯಲ್ಲಿ ಒಂದು ಹೊಸ ಪ್ರಕಟಣೆಯಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/353 – ಶ್ರೀಮಾತೆ**

# ನವ ಜನಾಂಗದ ಹೊಳಹುಗಳು

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಮಾನವನೊಬ್ಬ ಬದಲಾವಣೆ/ಪರಿವರ್ತನೆ ಹೊಂದುವಂಥ ಜೀವಿ; ಆತ ಈಗಿರುವ ಹಂತ ಕೊನೆಯ ಹಂತವಲ್ಲ. ಅದು ಆತನಿಂದ ಪ್ರಾರಂಭವಾಗಲಿಲ್ಲ, ಅಥವಾ ಅದು ಆತನಿಂದ ಕೊನೆಗೊಳ್ಳುವುದಿಲ್ಲ. ಆತ ಅದರ ಸ್ಪಷ್ಟ ಶಿಖರವಲ್ಲ (ಕೊನೆಯ ಅತ್ಯುನ್ನತ ಹಂತವಲ್ಲ), ಅದರ ಅತ್ಯುನ್ನತ ಪರಿಣಾಮವಲ್ಲ, ಪ್ರಕೃತಿಯ ಕೊನೆಯ ಸ್ಪಷ್ಟ ತಾತ್ಪರ್ಯವಲ್ಲ. ಪ್ರಕೃತಿಯು ಮನುಷ್ಯನಲ್ಲಿನ ತನ್ನ ಅತ್ಯುನ್ನತ ಸಾಧ್ಯತೆಗಳನ್ನು ಹೊರ ತಂದಿಲ್ಲ; ಅವಳು ಆತನಲ್ಲಿ ಪ್ರಜ್ಞೆಯ ಮತ್ತು ಇರುವಿಕೆಯ ಪರಮ ಔನ್ನತ್ಯಗಳನ್ನು ತಲುಪಿಲ್ಲ; ಆತನಿಗಿಂತ ಮೊದಲು ನಿಮ್ನ ಮಾನವ, ಕ್ರಿಮಿ, ಪಶು ಇದ್ದುದರಿಂದ ಆತನ ನಂತರ ಅತಿಮಾನವ, ಶ್ರೇಷ್ಠ ಮಾನವ ಕುಲವು ಬರಬಹುದು.

ಮನುಷ್ಯ ತನ್ನಷ್ಟಕ್ಕೆ ತಾನು ಶ್ರೇಷ್ಠ ಮಾನವನಾಗಬಹುದು, ತಾನು ಈಗ ಏನಾಗಿಲ್ಲವೊ ಅದೆಲ್ಲವೂ ಆತ ಆಗಬಹುದು; ಅದಕ್ಕಾಗಿ ಆತ ಈಗಿರುವ (ತನ್ನ ಸಾಧ್ಯತೆಗಳ) ಮಿತಿಯನ್ನು ದಾಟಬೇಕು. ತನ್ನ ವರ್ತಮಾನದ ಪರಿಪೂರ್ಣವಲ್ಲದ ಪ್ರಜ್ಞೆಗೆ ಅಂಟಿಕೊಳ್ಳುವುದರಿಂದ, ವಿಕಸನದಲ್ಲಿ ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳಲಾರ. ಅವನು ತನ್ನಲ್ಲಿರುವ ಆಧ್ಯಾತ್ಮಿಕ ದೈವತ್ವವನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ಬಿಡುಗಡೆಗೊಳಿಸಬೇಕು, ತನ್ನ ದೈವೀ ಸಾಧ್ಯತೆಗಳನ್ನು ಮನಗಾಣಬೇಕು, ತಾನೇ ಮಹಾ ಅಂತಸ್ಸತ್ವವಾಗಬೇಕು, ಪ್ರಕೃತಿಯ ರಹಸ್ಯವು ಪ್ರಾರಂಭವಾದಾಗಿನಿಂದ ಅದನ್ನು ಬಂಧಿಸಲ್ಪಟ್ಟ ಮೂಲ ಜೀವದ್ರವ್ಯದಾಚೆ ಹೊರಹೊಮ್ಮಲು ಪ್ರಯಾಸಪಡುತ್ತಿರುವಂಥ ದೇವನಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/262–65**

ಭೌತಿಕ ಹಾಗೂ ಪ್ರಾಣಿ ಪ್ರಪಂಚದಲ್ಲಿ ಮಾನವನ ಸಾಧ್ಯತೆಯ ನೋಟವು ಮುಂಬರುವ ದೈವೀ ಬೆಳಕಿನ ಮೊದಲ ಹೊಳಪಾಗಿತ್ತು, – ಮೂಲ ದ್ರವ್ಯದಿಂದ ಜನಿಸುವ ದೈವತ್ವದ ಮೊದಲ ದೂರದ ಸೂಚನೆಯಾಗಿತ್ತು. ಮಾನವ ಪ್ರಪಂಚದಲ್ಲಿ, ಅತಿಮಾನವನೊಬ್ಬನ ಆವಿರ್ಭಾವವು ದೂರದ ಹೊಳೆಯುವ ಭರವಸೆಯ ನೆರವೇರಿಕೆಯಾಗುವುದು.

ಮಾನವ ಹಾಗೂ ಅತಿಮಾನವನ ನಡುವಿನ ವ್ಯತ್ಯಾಸವು ಮನಸ್ಸಿನ ಹಾಗೂ ಪ್ರಜ್ಞೆಯ ನಡುವಿನ ವ್ಯತ್ಯಾಸವಾಗಿದೆ, ಅದೆಷ್ಟೆಂದರೆ, ಯೋಚಿಸುವ ಮನಸ್ಸು ಸಸ್ಯ ಹಾಗೂ ಪ್ರಾಣಿಗಳ ಪ್ರಜ್ಞೆಯನ್ನು ಮೀರಿದಷ್ಟು; ಮನುಷ್ಯನನ್ನು ಪ್ರತ್ಯೇಕಿಸುವ ಸಾರವೆಂದರೆ ಮನಸ್ಸು, ಹಾಗೆಯೆ ಅತಿಮಾನವನನ್ನು ಪ್ರತ್ಯೇಕಿಸುವ ಸಾರವೆಂದರೆ ಅತಿ–ಮನಸ್ಸು ಅಥವಾ ದೈವೀ ಜ್ಞಾನ.

*

ಅತಿಮಾನವನು ತನ್ನ ಸ್ವಂತ ಸಹಜ ಪರಾಕಾಷ್ಠೆಯನ್ನು ತಲುಪಿದ ಮನುಷ್ಯನಲ್ಲ, ಮಾನವ ಶ್ರೇಷ್ಠತೆಯ ಉನ್ನತ ಪದವಿಯಲ್ಲ, ಮಾನವ ಶ್ರೇಷ್ಠತೆ, ಜ್ಞಾನ, ಶಕ್ತಿ, ಬುದ್ಧಿವಂತಿಕೆ, ಇಚ್ಛೆ, ಶೀಲ, ಪ್ರತಿಭೆ, ಕ್ರಿಯಾತ್ಮಕ ಶಕ್ತಿ, ಸಾಧುತ್ವ, ಪ್ರೀತಿ, ಶುದ್ಧತೆ ಅಥವಾ ಪರಿಪೂರ್ಣತೆಯ ಉನ್ನತ ದರ್ಜೆಯಲ್ಲ. ಅತಿಮಾನಸ ಎನ್ನುವುದು ಮಾನಸಿಕ ಮನುಷ್ಯನ ಮತ್ತು ಆತನ ಮಿತಿಗಳ ಆಚೆ ಇರುವಂಥದ್ದು, ಮಾನವ ಸ್ವಭಾವಕ್ಕೆ ಸೂಕ್ತವಾದ ಅತ್ಯುನ್ನತ ಪ್ರಜ್ಞೆಗಿಂತ ಹೆಚ್ಚಿನ ಪ್ರಜ್ಞೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/157–58 – ಶ್ರೀ ಅರವಿಂದರು**

## ಮಾನವ ಮತ್ತು ಅತಿ–ಮಾನವನ ನಡುವೆ ಬರುವ ಮಾನವನ ಹಂತ

*ಪ್ರೀತಿಯ ಶ್ರೀಮಾತೆಯವರೆ, ಮಾನವ ಮತ್ತು ಅತಿ–ಮಾನವನ ಮಧ್ಯೆ ಬರುವ ಮಾನವನ ಹಂತಗಳಿವೆಯೆ?*

ಬಹುಶಃ ಅನೇಕ ಹಂತಗಳಿರಬಹುದು.

ಮಾನವ ಮತ್ತು ಅತಿ–ಮಾನವ? ಹೊಸ ಅತಿ–ಮಾನಸ ಕುಲದ ಬಗ್ಗೆ ನೀನು ಮಾತನಾಡುತ್ತಿರುವೆಯಾ? ನೀನು ನಿಜವಾಗಿಯೂ, ನಾವು ಅತಿ–ಮಾನವನೆಂದು ಕರೆಯುವ ಮಾನವನ ಬಗ್ಗೆ ಮಾತನಾಡುತ್ತಿರುವೆಯಾ, ಅಂದರೆ, ಎಲ್ಲ ಮನುಷ್ಯರು ಜನಿಸುವ ರೀತಿಯಲ್ಲಿ ಜನಿಸಿ ತನ್ನ ಹುಟ್ಟಿನಿಂದ ಪಡೆದುಕೊಂಡ ಭೌತಿಕ ಪುರುಷನನ್ನು ಪರಿವರ್ತಿಸಲು ಪ್ರಯತ್ನಿಸುತ್ತಿರುವ ಮಾನವನೆ? ಅಲ್ಲಿ ಹಂತಗಳಿರುವವೆ? – ಅಲ್ಲಿ ನಿಶ್ಚಿತವಾಗಿಯೂ ಅನಂತ ಅರೆ–ಸಾಕ್ಷಾತ್ಕಾರಗಳಿರಬಹುದು. ಪ್ರತಿಯೊಬ್ಬರ ಶಕ್ತ್ಯಾನುಸಾರವಾಗಿ, ರೂಪಾಂತರಣದ ಪ್ರಮಾಣವು ಭಿನ್ನವಾಗಿರುತ್ತದೆ, ಮತ್ತು ಅಲ್ಲಿ ನಿಶ್ಚಿತವಾಗಿ ಗಣನೀಯವಾದ ಪ್ರಯತ್ನಗಳಿರುತ್ತವೆ, ಅವು ಹೆಚ್ಚು–ಕಡಿಮೆ ಫಲಪ್ರದ ಅಥವಾ ಫಲ ನೀಡದ ಪ್ರಯತ್ನಗಳು (ಅತಿ–ಮಾನವನೆಂದು ಕರೆಯುವ ಹಂತಕ್ಕೆ

ಬರುವ ಮೊದಲು), ಅವುಗಳೂ ಸಹ ಹೆಚ್ಚು–ಕಡಿಮೆ ಯಶಸ್ವಿ ಪ್ರಯತ್ನಗಳಾಗಿರುತ್ತವೆ.

ತಮ್ಮ ಸಾಧಾರಣ ಸ್ವಭಾವವನ್ನು ಜಯಿಸಲು ಪ್ರಯತ್ನಿಸುವವರೆಲ್ಲರೂ, ದಿವ್ಯ ಸತ್ಯದ ಸ್ಪರ್ಶದಲ್ಲಿ ತಂದಂಥ ಗಹನವಾದ ಅನುಭವವನ್ನು ಪ್ರಾಪಂಚಿಕವಾಗಿ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಿರುವವರೆಲ್ಲರೂ, ಅತ್ಯುನ್ನತದೆಡೆಗೆ ಅಥವಾ ಅದರಾಚೆ ಹೊರಳುವ ಬದಲು, ತಮ್ಮೊಳಗೆ ಸಾಕ್ಷಾತ್ಕರಿಸಿಕೊಂಡಂಥ ಪ್ರಜ್ಞೆಯ ಬದಲಾವಣೆಯನ್ನು ಭೌತಿಕವಾಗಿ, ಬಾಹ್ಯವಾಗಿ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುವವರು – ಎಲ್ಲರೂ ಅಭ್ಯಾಸಿ (apprentice) (ಕಲಿಕೆಯ) ಅತಿ ಮಾನವರು. ಮತ್ತು ಅವರ ಪ್ರಯತ್ನಗಳ ಯಶಸ್ಸಿನಲ್ಲಿ ಲೆಕ್ಕವಿಲ್ಲದಷ್ಟು ವ್ಯತ್ಯಾಸಗಳಿವೆ. ಪ್ರತಿಬಾರಿಯೂ ನಾವು ಸಾಮಾನ್ಯ ಮನುಷ್ಯನಾಗದಿರಲು, ಸಾಮಾನ್ಯ ಜೀವನವನ್ನು ನಡೆಸದೆ, ನಮ್ಮ ಚಲನೆಗಳಲ್ಲಿ, ನಮ್ಮ ಕ್ರಿಯೆಗಳಲ್ಲಿ ಮತ್ತು ಪ್ರತಿಕ್ರಿಯೆಗಳಲ್ಲಿ ದೈವೀ ಸತ್ಯವನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತೇವೆ, ಸಾಮಾನ್ಯ ಅಜ್ಞಾನದಿಂದ ನಿಯಂತ್ರಿಸಲ್ಪಡುವ ಬದಲು ಆ ಸತ್ಯದಿಂದ ನಾವು ನಿಯಂತ್ರಿಸಲ್ಪಟ್ಟಾಗ, ನಾವು ಅಭ್ಯಾಸಿ ಅತಿ ಮಾನವರು, ಮತ್ತು ನಮ್ಮ ಪ್ರಯತ್ನಗಳ ಯಶಸ್ಸಿನ ಪ್ರಕಾರ, ನಾವು ಹೆಚ್ಚು ಅಥವಾ ಕಡಿಮೆ ಶಕ್ತ (able) ಅಭ್ಯಾಸಿಗಳು, ಆ ಮಾರ್ಗದಲ್ಲಿ ಹೆಚ್ಚು–ಕಡಿಮೆ ಮುಂದುವರೆದವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/410**

**ಪರಿವರ್ತನೆಯತ್ತ ಓಟ**

ಇವೆಲ್ಲವುಗಳು ಹಂತಗಳಾಗಿವೆ, ಆದ್ದರಿಂದ ... ವಾಸ್ತವದಲ್ಲಿ, ಪರಿವರ್ತನೆ ಹೊಂದುವ ಈ ಓಟದಲ್ಲಿ, ಪ್ರಶ್ನೆ ಏನೆಂದರೆ, ಇವೆರಡರಲ್ಲಿ ಮೊದಲು ಬರುವುದು ಯಾವುದು ಎನ್ನುವುದನ್ನು ತಿಳಿದುಕೊಳ್ಳವುದು: ತನ್ನ ದೇಹವನ್ನು ದೈವೀ ಸತ್ಯದ ಸ್ವರೂಪದಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕೆಂದಿರುವವನನ್ನು, ಅಥವಾ ದೇಹದ ಹಳೆಯ ಅಭ್ಯಾಸವು ಅದರ ಬಾಹ್ಯ ಅಖಂಡತೆಯಲ್ಲಿ ಮುಂದುವರೆಯದೆ ಇರುವಷ್ಟು ವಿರೂಪಗೊಳ್ಳುವವರೆಗೆ ವಿಘಟಿಸುತ್ತ ಹೋಗುವುದನ್ನು. ಇದು ರೂಪಾಂತರದ ಮತ್ತು ಅವನತಿಯ ನಡುವಿನ ಓಟವಾಗಿದೆ. ಕೇವಲ ಎರಡು ನಿಲುಗಡೆ ಸ್ಥಳಗಳಿರುವುದರಿಂದ, ನಾವು ಎಷ್ಟು ಯಶಸ್ವಿಯಾಗಿದ್ದೇವೆ ಎಂಬುದನ್ನು ಎರಡು ವಿಷಯಗಳು ಸೂಚಿಸಬಹುದು: ಒಂದೋ ಯಶಸ್ಸು, ಅಂದರೆ ಅತಿ

ಮಾನವನಾಗುವುದು – ಆಗ ಖಂಡಿತವಾಗಿಯೂ ನಾವು ಹೇಳಬಹುದು, "ಈಗ ನಾನು ಗುರಿಯನ್ನು ತಲುಪಿದ್ದೇನೆ" ... ಇಲ್ಲದಿದ್ದರೆ ಸಾವು. ಅಲ್ಲಿಯವರೆಗೆ, ಸಾಮಾನ್ಯವಾಗಿ, ನಾವು ಆ "ದಾರಿಯಲ್ಲಿ" ಇರುವವರು ಮಾತ್ರ.

ಅದು ಈ ಎರಡು ಸಂಗತಿಗಳಲ್ಲಿ ಒಂದಾಗಿದೆ – ಒಂದೋ ಗುರಿಯನ್ನು ತಲುಪುವುದು ಇಲ್ಲವೆ ಬದುಕು ಹಠಾತ್ತನೆ ಛಿದ್ರವಾಗುವುದು – ಇದು ಮುನ್ನಡೆಗೆ ಪೂರ್ಣ ವಿರಾಮವನ್ನಿಡುತ್ತದೆ. ಮತ್ತು ಆ ರಸ್ತೆಯುದ್ದಕ್ಕೂ ಪ್ರತಿಯೊಬ್ಬರೂ ಹೆಚ್ಚು –ಕಡಿಮೆ ದೂರ ಸಾಗಿದ್ದಾರೆ, ಆದರೆ ನಾವು ಅಂತ್ಯವನ್ನು ತಲುಪುವವರೆಗೆ ನಾವು ಯಾವ ಹಂತದಲ್ಲಿದ್ದೇವೆ ಎಂದು ಹೇಳಲಾಗುವುದಿಲ್ಲ. ಅದನ್ನು ನಿರ್ಧರಿಸುವುದು ಅಂತಿಮ ಹೆಜ್ಜೆಯಾಗಿದೆ. ಆದ್ದರಿಂದ ಕೆಲವು ನೂರು ಅಥವಾ ಸಾವಿರ ವರ್ಷಗಳ ನಂತರ ಬಂದು ಹಿಂತಿರುಗಿ ನೋಡುವವರು ಮಾತ್ರ "ಅಲ್ಲಿ ಈ ಹಂತವಿತ್ತು, ಆ ಹಂತವಿತ್ತು, ಈ ಸಾಕ್ಷಾತ್ಕಾರ, ಆ ಸಾಕ್ಷಾತ್ಕಾರ...." ಎಂದು ಹೇಳಲು ಸಾಧ್ಯವಾಗುತ್ತದೆ: ಅದು ಇತಿಹಾಸ, ಅದು ಘಟನೆಯ ಒಂದು ಐತಿಹಾಸಿಕ ಅನುಭವವಾಗುತ್ತದೆ. ಅಲ್ಲಿಯವರೆಗೆ ನಾವೆಲ್ಲರೂ ಚಲನೆಯಲ್ಲಿ ಮತ್ತು ಕಾರ್ಯದಲ್ಲಿರುವೆವು.

ನಾವು ಎಷ್ಟು ದೂರ ಸಾಗಿದ್ದೇವೆ ಮತ್ತು ನಾವು ಎಷ್ಟು ದೂರ ಸಾಗಬೇಕು? ಅದರ ಬಗ್ಗೆ ಅಷ್ಟೊಂದು ಚಿಂತೆ ಮಾಡದಿರುವುದೇ ಉತ್ತಮ, ಏಕೆಂದರೆ ಅದು ನಿಮ್ಮನ್ನು ದುರ್ಬಲಗೊಳಿಸುತ್ತದೆ ಮತ್ತು ನೀವು ಆ ಮಾರ್ಗದಲ್ಲಿ ಚೆನ್ನಾಗಿ ಓಡಲು ಸಾಧ್ಯವಿಲ್ಲ. ಉತ್ತಮ ಸಂಗತಿ ಏನೆಂದರೆ, ಓಟದ ಬಗ್ಗೆ ಮಾತ್ರ ಯೋಚಿಸುವುದು, ಮತ್ತ್ಯಾವುದರ ಬಗ್ಗೆಯೂ ಅಲ್ಲ. ಚೆನ್ನಾಗಿ ಓಡಲು ಇರುವುದು ಅದೊಂದೇ ದಾರಿ. ನೀವು ಎಲ್ಲಿಗೆ ಹೋಗಬೇಕೆಂದುಕೊಂಡಿರುವಿರೊ, ಆ ಕಡೆ ನೋಡಿ ನೀವು ನೋಡುತ್ತೀರಿ ಮತ್ತು ಮುಂದೆ ಹೋಗಲು ನಿಮ್ಮ ಎಲ್ಲಾ ಪ್ರಯತ್ನಗಳನ್ನು ಆ ಕಾರ್ಯದಲ್ಲಿ ಹಾಕಿರಿ. ನೀವು ಎಷ್ಟು ದೂರ ಹೋಗಿದ್ದೀರಿ ಎಂಬುದು ನಿಮ್ಮ ಗೊಡವೆಯಲ್ಲ. ನಾನು ಹೇಳುತ್ತೇನೆ, "ಇದು ಇತಿಹಾಸ", ಅದು ನಂತರ ಬರುತ್ತದೆ. ನಮ್ಮ ಪ್ರಯತ್ನದ ಇತಿಹಾಸಕಾರರು ನಮಗೆ ಹೇಳುತ್ತಾರೆ – ಏಕೆಂದರೆ ಬಹುಶಃ ನಾವು ಇನ್ನೂ ಅಲ್ಲಿಯೇ ಇರುತ್ತೇವೆ – ನಾವು ಏನು ಮಾಡಿದ್ದೇವೆ, ಹೇಗೆ ಮಾಡಿದ್ದೇವೆ ಎನ್ನುವುದನ್ನು ಹೇಳುತ್ತಾರೆ. ಸದ್ಯಕ್ಕೆ ಏನು ಅವಶ್ಯವಿದೆಯೊ ಅದನ್ನು ಮಾಡುವುದು; ಇದು ಮುಖ್ಯವಾದ ಏಕೈಕ ವಿಷಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/411**

**ಅತಿಮಾನವ**

*ಶ್ರೀಮಾತೆಯವರು, ನಂತರ ಯಾವುದನ್ನು ಅತಿಮಾನವ ಪ್ರಜ್ಞೆ ಎಂದು ಗುರುತಿಸಿದರೋ, ಅದರ ಅವರೋಹಣದ ಬಗ್ಗೆ.*

ರಾತ್ರಿಯಲ್ಲಿ ಅದು ನಿಧಾನವಾಗಿ ಬಂದಿತು ಮತ್ತು ಇಂದು ಬೆಳಿಗ್ಗೆ ಎದ್ದಾಗ, ಸುವರ್ಣ ಉದಯ ಕಾಲ ಇದ್ದಂತೆ ಇತ್ತು ಮತ್ತು ವಾತಾವರಣವು ತೇಜಸ್ಸಿನಿಂದ ತುಂಬಿತ್ತು. ದೇಹವು ಭಾವಿಸಿತು: "ಇದು ನಿಜವಾಗಿಯೂ, ನಿಜವಾಗಿಯೂ ಹೊಸದು." ಅದು ಹೊನ್ನಿನ, ಸ್ಪಷ್ಟ, ಮತ್ತು... ದಯಾಮಯ ಬೆಳಕು. ಒಂದು ಖಚಿತ ಅರ್ಥದಲ್ಲಿ – ಸಾಮರಸ್ಯದ ಖಚಿತತೆಯಲ್ಲಿ ಹೇಳಬೇಕೆಂದರೆ ಅದು "ಕರುಣಾಮಯಿ" ಬೆಳಕು. ಅದು ನವೀನವಾಗಿತ್ತು.

ನಿನಗೆ ಬೇಕಾಗಿದ್ದು ಇದು.

ನಾನು ಜನರಿಗೆ "ಹೊಸ ವರುಷದ ಶುಭಾಶಯಗಳು" ಎಂದು ಹೇಳಿದಾಗ, ನಾನವರಿಗೆ ವರ್ಗಾಯಿಸುತ್ತಿದ್ದದ್ದು ಇದನ್ನು. ಮತ್ತು ಈ ಬೆಳಿಗ್ಗೆ, ನಾನು ನನ್ನ ಸಮಯವನ್ನು, "ಹೊಸ ವರುಷದ ಶುಭಾಷಯಗಳು, ಹೊಸ ವರುಷದ ಶುಭಾಷಯಗಳು" ಎಂದು ಹೇಳುತ್ತ ಕಳೆದಿದ್ದೇನೆ. ಅದಕ್ಕಾಗಿ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/148**

ಅದು ಕಾಂತಿಯುತವಾಗಿತ್ತು, ನಗುತಲಿತ್ತು, ಮತ್ತು ಪ್ರಭಾವದ ಮೂಲಕ ಉದಾರವಾಗಿತ್ತು; ಅಂದರೆ, ಸಾಮಾನ್ಯವಾಗಿ ಮನುಷ್ಯರಲ್ಲಿ ಉದಾರತೆ ಎನ್ನುವುದು ದುರ್ಬಲವಿರುವಂಥ ಸಂಗತಿಯಾಗಿದೆ, ಈ ಅರ್ಥದಲ್ಲಿ ಅದು ಕದನವನ್ನು ಇಷ್ಟಪಡುವುದಿಲ್ಲ, ಕಾಳಗವನ್ನು ಇಷ್ಟಪಡುವುದಿಲ್ಲ; ಆದರೆ ಇದು ಅಂತಹದ್ದೇನೂ ಅಲ್ಲ! ಇದು, ತನ್ನಷ್ಟಕ್ಕೆ ತಾನು ಬಲವಂತವಾಗಿ ಹೇರಿಕೊಳ್ಳುವಂಥ ಒಂದು ಉದಾರತೆ *(ಶ್ರೀಮಾತೆಯವರು ತಮ್ಮ ಮುಷ್ಟಿಯನ್ನು ತಮ್ಮ ಕುರ್ಚಿಯ ತೋಳುಗಳ ಮೇಲೆ ತರುತ್ತಾರೆ).*

ಇದು ನನಗೆ ಆಸಕ್ತಿಯನ್ನುಂಟುಮಾಡಿದೆ, ಏಕೆಂದರೆ ಇದು ಸಂಪೂರ್ಣವಾಗಿ ಹೊಸದು. ಮತ್ತು ವಾಸ್ತವಿಕ! ವಾಸ್ತವಿಕವೆಂದರೆ, ಈ ರೀತಿಯಲ್ಲಿ *(ಶ್ರೀಮಾತೆಯವರು ತಮ್ಮ ಕುರ್ಚಿಯ ತೋಳುಗಳನ್ನು ಮುಟ್ಟುತ್ತಾರೆ)*, ಭೌತಿಕ

ಪ್ರಜ್ಞೆಯು ಸಾಮಾನ್ಯವಾಗಿ ಏನನ್ನು "ಇತರರು" ಎಂದು ಪರಿಗಣಿಸುತ್ತದೆಯೊ, ಅದರ ಹಾಗೆ ವಾಸ್ತವಿಕ. ಅಂದರೆ, ಅದು ಅಂತರಂಗದ ಪುರುಷನ ಮೂಲಕ ಹಾದುಹೋಗಲಿಲ್ಲ, ಅತೀಂದ್ರಿಯದ ಮೂಲಕ ನೇರವಾಗಿ ದೇಹದ ಮೇಲೆ ಬಂದಿತು.

ಅದೇನು?... ಹೌದು, ಬಹುಶಃ ಅದು ಇದಾಗಿದೆ... ಅದು ಬಂದಾಗಿನಿಂದ ದೇಹದ ಅನುಭವವು ಒಂದು ರೀತಿಯ ಭರವಸೆಯಾಗಿದೆ, ಈಗ ಅದು ಆತಂಕದಲ್ಲಿ ಇಲ್ಲವೇನೊ ಎಂಬ ಒಂದು ಭರವಸೆ ಅಥವಾ ತಿಳಿದುಕೊಳ್ಳುವ ಸಂದಿಗ್ಧತೆಯಾಗಿದೆ. "ಅದು ಏನಾಗುತ್ತದೆ? ಅತಿಮಾನಸವು ಯಾವ ರೀತಿ ಇರುತ್ತದೆ? ಭೌತಿಕವಾಗಿ, ಅದು ಭೌತಿಕವಾಗಿ ಏನಾಗಿರುತ್ತದೆ? ದೇಹವು ತನ್ನನ್ನು ತಾನೇ ಹೀಗೆ ಕೇಳಿಕೊಳ್ಳುತ್ತಿತ್ತು. ಈಗ ಅದರ ಬಗ್ಗೆ ಯಾವತ್ತಿಗೂ ಯೋಚಿಸುವುದಿಲ್ಲ, ಅದು ತೃಪ್ತವಾಗಿದೆ."

*ಇದು (ಅತಿಮಾನಸಕೆ) ಸಿದ್ಧವಾಗಿರುವ ದೇಹಗಳನ್ನು ಆವರಿಸುವಂಥ ಸಂಗತಿಯಾಗಿದೆಯೆ?*

ಹೌದು, ನಾನು ನಂಬುತ್ತೇನೆ, ಹೌದು. ದೇಹಗಳಲ್ಲಿ... ಪ್ರವೇಶಿಸಲು, ತನ್ನನ್ನು ತಾನು ಪ್ರಕಟಪಡಿಸಿಕೊಳ್ಳಲು – ಪ್ರವೇಶಿಸಲು ಮತ್ತು ತನ್ನನ್ನು ತಾನು ಪ್ರಕಟಪಡಿಸಿಕೊಳ್ಳಲು ಹೋಗುವ ಅದು ಸುಪ್ರಮಾನಸದ ದೇಹವಾಗಿರುತ್ತದೆ ಎಂಬ ಭಾವನೆ ನನ್ನಲ್ಲಿದೆ.

ಅಥವಾ ಬಹುಶಃ ... ಬಹುಶಃ ಅತಿಮಾನವ, ನನಗೆ ಗೊತ್ತಿಲ್ಲ. ಇಬ್ಬರ ನಡುವಿನ ಹಂತ (ಪುರುಷ) ಇದ್ದರೂ ಇರಬಹುದು. ಬಹುಶಃ ಅತಿಮಾನವ: ಅದು ಅತಿಮಾನವ, ಆದರೆ ದೈವೀ ಅನುಪಾತದಲ್ಲಿರುವ ಒಬ್ಬ ಮಾನವನೆಂದು ನಾನು ಹೇಳಲೇಬೇಕು.

ದೌರ್ಬಲ್ಯಗಳಿಲ್ಲದ ಮತ್ತು ಭ್ರಮೆಗಳಿಲ್ಲದ ಮನುಷ್ಯ (ಅತಿಮಾನವ): ಅದೆಲ್ಲವೂ ಬೆಳಕಾಗಿತ್ತು – ಇದು ಎಲ್ಲವೂ ಬೆಳಕು– ಎಲ್ಲವೂ ಬೆಳಕು ಮತ್ತು ಆನಂದ ಮತ್ತು ... ಅದೇ ಸಮಯದಲ್ಲಿ ಮಧುರತೆ.

ಹೌದು, ಬಹುಶಃ ಅತಿಮಾನವ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/151**

## ವಿಶ್ವ ವ್ಯಕ್ತಿತ್ವ

*“ವಿಶ್ವ–ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳು ಯಾವುವು?”*

ಅತ್ಯಂತ ವಿಶಿಷ್ಟ ಲಕ್ಷಣವೆಂದರೆ, ನಿಖರವಾಗಿ ಹೇಳಬೇಕೆಂದರೆ, ಈ ಪ್ರಜ್ಞೆಯ ಬದಲಾವಣೆ ಸಾಧಾರಣವೆಂಬಂತೆ, ಪ್ರತ್ಯೇಕಿಸಲ್ಪಟ್ಟ ವ್ಯಕ್ತಿಯಂತೆ, ಬೇರೆಯವರಿಂದ ಬೇರ್ಪಡಿಸಲ್ಪಟ್ಟವನಂತೆ ಭಾವಿಸುವ ಬದಲು, ಬೇರೆಯವರೆಲ್ಲರನ್ನೂ ಒಳಗೊಂಡ ಮತ್ತು ಇತರರೊಂದಿಗೆ ನಿಕಟವಾಗಿ ಸೇರಿದ ಹಾಗೂ ಗುರುತಿಸಿಕೊಂಡ ನಾನೊಬ್ಬ ವಿಶ್ವ ವ್ಯಕ್ತಿ ಎಂದು ಭಾವಿಸಬೇಕು.

*“ಈ ವ್ಯಕ್ತಿಯು ಹೇಗೆ ಮಾತನಾಡುತ್ತಾನೆ ಮತ್ತು ವರ್ತಿಸುತ್ತಾನೆ?”*

ಮಾತನಾಡುವುದೆಂದರೆ!... ಪ್ರಶ್ನೆಯನ್ನು ಸರಿಯಾಗಿ ಹಾಕಲಾಗಿಲ್ಲ, ಏಕೆಂದರೆ ಅವನು ಹೇಗೆ ಮಾತನಾಡುತ್ತಾನೆ ಎಂದು ನೀವು ಕೇಳಿದರೆ, ಉತ್ತರ ಹೀಗಿರುತ್ತದೆ; ಎಲ್ಲರೂ ಮಾತನಾಡುವಂತೆ ಅವನು ತನ್ನ ಧ್ವನಿಯಿಂದ, ತನ್ನ ನಾಲಿಗೆಯಿಂದ, ತನ್ನ ಬಾಯಿಯಿಂದ ಮತ್ತು ಶಬ್ದಗಳಿಂದ ಮಾತನಾಡುತ್ತಾನೆ! ಅವನು ಏನು ಹೇಳುತ್ತಾನೆ ಎಂಬುದರ ಸ್ವರೂಪ ಏನು ಎಂದು ನೀವು ಕೇಳಿದರೆ ... ನಿಸ್ಸಂಶಯವಾಗಿ, ಅವನು ತಾನಿರುವಂಥ ಪ್ರಜ್ಞೆಯ ಸ್ಥಿತಿಯನ್ನು ವ್ಯಕ್ತಪಡಿಸಿದರೆ, ಅವನು ವಿಶ್ವ ಪ್ರಜ್ಞೆಯ ಸ್ಥಿತಿಯನ್ನು ವ್ಯಕ್ತಪಡಿಸುತ್ತಾನೆ ಮತ್ತು ಸಾಮಾನ್ಯ ಮನುಷ್ಯರಿಗಿಂತ ವಿಭಿನ್ನ ರೀತಿಯಲ್ಲಿ ವಿಷಯಗಳನ್ನು ನೋಡುವುದರಿಂದ, ತಾನು ಏನನ್ನು ನೋಡುತ್ತಾನೊ ಮತ್ತು ಅನುಭವಿಸುತ್ತಾನೊ ಅದಕ್ಕನುಗುಣವಾಗಿ ಅವುಗಳನ್ನು ವಿಭಿನ್ನವಾಗಿ ವ್ಯಕ್ತಪಡಿಸುತ್ತಾನೆ. ಆತನ ಕ್ರಿಯೆಗೆ ಸಂಬಂಧಿಸಿದಂತೆ... ಒಂದು ವೇಳೆ ಆತನ ಎಲ್ಲಾ ಅಂಗಗಳು ಸಾಮರಸ್ಯದಲ್ಲಿದ್ದರೆ, ಅವನ ಕ್ರಿಯೆಯು ಅವನ ಪ್ರಜ್ಞೆಯ ಸ್ಥಿತಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ.

ಈಗ, ತಮ್ಮ ಇರುವಿಕೆಯ ಒಂದು ಭಾಗದಲ್ಲಿ ನಿರ್ಣಾಯಕ ಅನುಭವಗಳನ್ನು ಹೊಂದಿರುವ ಜನರಿದ್ದಾರೆ, ಆದರೆ ಇವುಗಳನ್ನು ಅಗತ್ಯವಾಗಿ ಅಥವಾ ತಕ್ಷಣವೇ ಅವರ ಇರುವಿಕೆಯ ಇತರ ಭಾಗಗಳಲ್ಲಿ ರೂಪಾಂತರಗೊಳಿಸಲಾಗಿಲ್ಲ. ಸಾಧನೆಯ ಅಥವಾ ಏಕಾಗ್ರತೆಯ ಅಥವಾ ಅನುಗ್ರಹದ ಮೂಲಕ ವಿಶ್ವ ವ್ಯಕ್ತಿತ್ವವನ್ನು ಕೆಲವರು ಪಡೆದುಕೊಂಡಿರುವ ಸಾಧ್ಯತೆ ಇದೆ, ಆದರೆ ಆತ ಬಹಳೇ ಸಾಧಾರಣ, ಅಪೂರ್ಣ ರೀತಿಯಲ್ಲಿ ಭೌತಿಕವಾಗಿ ವರ್ತಿಸುವುದನ್ನು ಮುಂದುವರೆಸುತ್ತಾನೆ, ಏಕೆಂದರೆ ಆತ

ತನ್ನ ಸಂಪೂರ್ಣ ಇರುವಿಕೆಯನ್ನು ವಿಲೀನಗೊಳಿಸಲು ಗಮನವನ್ನು ಹರಿಸಿಲ್ಲ ಮತ್ತು ಆತನ ಇರುವಿಕೆಯ ಒಂದು ಭಾಗವು ವಿಶ್ವಾತ್ಮಕವಾಗಿ ಅರಿವನ್ನು ಹೊಂದಿದ್ದರೂ, ಆತ ತಿನ್ನಲು, ಮಲಗಲು, ನಡೆದಾಡಲು, ಕೆಲಸ ಮಾಡಲು ಪ್ರಾರಂಭಿಸಿದರೆ ಆತ ಇದನ್ನು ಎಲ್ಲ ಮನುಷ್ಯ ಪ್ರಾಣಿಗಳಂತೆ ಮಾಡುತ್ತಾನೆ. ಅದು ಸಂಭವಿಸಬಹುದು. ಆದ್ದರಿಂದ, ಇದು ಸಂಪೂರ್ಣವಾಗಿ ವೈಯಕ್ತಿಕ ಪ್ರಶ್ನೆಯಾಗಿದೆ, ಇದು ಪ್ರತಿಯೊಬ್ಬರ ಮೇಲೆ ಅವಲಂಬಿತವಾಗಿರುತ್ತದೆ, ಅವನ ಅಭಿವೃದ್ಧಿಯ ಹಂತದ ಮೇಲೆ ಅವಲಂಬಿತವಾಗಿರುತ್ತದೆ.

ಆದರೆ ಆತ ತನ್ನ ಅಸ್ತಿತ್ವವನ್ನು ಏಕೀಕರಿಸಲು, ಅದರ ಎಲ್ಲಾ ಭಾಗಗಳನ್ನು ಮೂಲ ಸತ್ಯದೊಂದಿಗೆ ಗುರುತಿಸಲು ಕಾಳಜಿ ವಹಿಸಿದರೆ, ಅವನು ಸ್ವಾಭಾವಿಕವಾಗಿ ಅಹಂಕಾರದ ಸಂಪೂರ್ಣ ಅನುಪಸ್ಥಿತಿಯಲ್ಲಿ, ಇತರರ ತಿಳುವಳಿಕೆಯೊಂದಿಗೆ, ಇತರರೊಂದಿಗೆ ತನ್ನ ಗುರುತಿಸಿಕೊಳ್ಳುವಿಕೆಯಿಂದ ಬರುವಂಥ ತಿಳುವಳಿಕೆಯಿಂದ ವರ್ತಿಸುತ್ತಾನೆ – ಮತ್ತು ಆದ್ದರಿಂದ ಅವನು ಋಷಿಯಂತೆ ವರ್ತಿಸುತ್ತಾನೆ. ಆದರೆ ಅದು ಮೂಲ ಪ್ರಜ್ಞೆಯ ಸುತ್ತ ತನ್ನ ಸಂಪೂರ್ಣ ಅಸ್ತಿತ್ವವನ್ನು ಏಕೀಕರಿಸಲು ಅವನು ತೆಗೆದುಕೊಂಡ ಕಾಳಜಿಯನ್ನು ಅವಲಂಬಿಸಿರುತ್ತದೆ.

ಉದಾಹರಣೆಗೆ, ಆಹಾರ ಮತ್ತು ನಿದ್ರೆಯಂತಹ ಅತ್ಯಂತ ಧನಾತ್ಮಕ ಭೌತಿಕ ವಸ್ತುಗಳನ್ನು ತೆಗೆದುಕೊಳ್ಳಲು: ಅವನು ತನ್ನ ದೇಹದೊಳಕ್ಕೆ ತನ್ನ ಹೊಸ ಪ್ರಜ್ಞೆಯನ್ನು (ಅದು ಇರುವಂತೆ) ತುಂಬಲು ಕಾಳಜಿ ವಹಿಸದಿದ್ದರೆ, ಆಹಾರ ಮತ್ತು ನಿದ್ರೆಯ ಆತನ ಬೇಡಿಕೆಯು ಬಹುತೇಕ (ಮೊದಲಿನಂತೆ) ಉಳಿಯುವ ಸಾಧ್ಯತೆಯಿದೆ ಇದೇ ಮತ್ತು ಆತ ಅವುಗಳ ಮೇಲೆ ಹೆಚ್ಚು ನಿಯಂತ್ರಣವನ್ನು ಹೊಂದಿರುವುದಿಲ್ಲ. ಮತ್ತೊಂದೆಡೆ, ಆತ ತನ್ನ ಅಸ್ತಿತ್ವವನ್ನು ಏಕೀಕರಿಸಲು ಕಾಳಜಿ ವಹಿಸಿದ್ದರೆ ಮತ್ತು ಆತನ ದೇಹವನ್ನು ರೂಪಿಸಿದ ಅಂಶಗಳಲ್ಲಿ ಪ್ರಜ್ಞೆಯನ್ನು ತುಂಬಿದ್ದರೆ, ಅವನ ನಿದ್ರೆಯು ಜಾಗೃತ ನಿದ್ರೆಯಾಗಿರುತ್ತದೆ ಮತ್ತು ಸರ್ವ ಸಾಮಾನ್ಯ ರೀತಿಯದ್ದಾಗಿರುತ್ತದೆ; ಇಲ್ಲಿಯಾಗಲಿ ಅಥವಾ ಇನ್ನೆಲ್ಲೆಯಾಗಲಿ, ಈ ವ್ಯಕ್ತಿಯಲ್ಲಿ ಅಥವಾ ಬೇರೆ ವ್ಯಕ್ತಿಯಲ್ಲಿ, ಪ್ರಪಂಚದ ಈ ಮೂಲೆಯಲ್ಲಿ ಅಥವಾ ಇನ್ನಾವುದೇ ಮೂಲೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಆತ ತನ್ನ ಇಚ್ಛೆಯಂತೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ; ಮತ್ತು ಅವನ ಪ್ರಜ್ಞೆಯು ವಿಶ್ವವ್ಯಾಪಿಯಾಗಿರುವುದರಿಂದ ಅವನು ತಿಳಿದುಕೊಳ್ಳಲು ಬಯಸುವ ಎಲ್ಲಾ ವಿಷಯಗಳೊಂದಿಗೆ ಸ್ವಾಭಾವಿಕವಾಗಿ ಅವನನ್ನು ಸಂಪರ್ಕದಲ್ಲಿ

ಇರಿಸುತ್ತದೆ. ಪ್ರಜ್ಞಾಹೀನ ಮತ್ತು ನಿಷ್ಪ್ರಯೋಜಕವಾದ ನಿದ್ರೆಯನ್ನು ಹೊಂದುವ ಬದಲು (ಸಂಪೂರ್ಣವಾಗಿ ಭೌತಿಕ ದೃಷ್ಟಿಕೋನದಿಂದ ಹೊರತುಪಡಿಸಿ) ಆತ ಉತ್ಪಾದಕ ಮತ್ತು ಸಂಪೂರ್ಣ ಜಾಗೃತ ನಿದ್ರೆಯನ್ನು ಹೊಂದುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/380–81 – ಶ್ರೀಮಾತೆ**

**ಜ್ಞಾತ ಪುರುಷ**

ಜ್ಞಾತ ಜೀವನವು ಅಸ್ತಿತ್ವದಲ್ಲಿರುವುದು ಮತ್ತು ತನ್ನಲ್ಲಿ ಹಾಗೂ ಜಗತ್ತಿನಲ್ಲಿನ ದೈವೀಕತೆಗಾಗಿ, ಎಲ್ಲರಲ್ಲಿರುವ ದೈವೀಕತೆಗಾಗಿ ಕಾರ್ಯನಿರ್ವಹಿಸುತ್ತದೆ; ದೈವೀ ಉಪಸ್ಥಿತಿ, ಬೆಳಕು, ಶಕ್ತಿ, ಪ್ರೀತಿ, ಆನಂದ, ಸೌಂದರ್ಯದಿಂದ ವ್ಯಕ್ತಿ ಮತ್ತು ಪ್ರಪಂಚದ ಹೆಚ್ಚುತ್ತಿರುವ ಸ್ವಾಮ್ಯವು ಜ್ಞಾತ ಪುರುಷನಿಗೆ ಜೀವನದ ವಿವೇಕವಾಗಿರುತ್ತದೆ.....

ಭೌತ ವಸ್ತುವನ್ನು ಬಳಸುವ ಆದರೆ ಪ್ರಾಪಂಚಿಕ ಅಥವಾ ಪ್ರಾಣಿಕ ಬಂಧನ ಅಥವಾ ಬಯಕೆ ಇಲ್ಲದೆ ಬಳಸುವ ಜ್ಞಾತ ಪುರುಷನು ಚೇತನವನ್ನು ಈ ರೂಪದಲ್ಲಿ, ಅದರ ಅನುಮತಿಯೊಂದಿಗೆ ಮತ್ತು ತನ್ನದೇ ಸ್ವ–ಉದ್ದೇಶಕ್ಕೆ ಸಮ್ಮತಿಯೊಂದಿಗೆ ಬಳಸುತ್ತಿದ್ದಾನೆ ಎಂದು ಭಾವಿಸುತ್ತಾನೆ. ಅವನಲ್ಲಿ ಭೌತಿಕ ವಸ್ತುಗಳಿಗಾಗಿ ಒಂದು ಸ್ಪಷ್ಟವಾದ ಗೌರವವಿರುತ್ತದೆ, ಅವುಗಳಲ್ಲಿರುವ ನಿಗೂಢ ಪ್ರಜ್ಞೆಯ ಒಂದು ಅರಿವು, ಅದರ ಉಪಯುಕ್ತತೆ ಮತ್ತು ಸೇವೆಯ ಮೌನ ಸಂಕಲ್ಪದ, ದೈವೀ ಆರಾಧನೆಯ, ತಾನು ಬಳಸುವುದರಲ್ಲಿನ ಬ್ರಹ್ಮನ್ ಬಗ್ಗೆ ಅರಿವಿರುತ್ತದೆ, ತನ್ನ ದೈವೀ ವಸ್ತುವಿನ ಪರಿಪೂರ್ಣ ಮತ್ತು ದೋಷರಹಿತ ಬಳಕೆಗಾಗಿ, ನೈಜ ಲಯಕ್ಕಾಗಿ, ಕ್ರಮಬದ್ಧವಾದ ಸಾಮರಸ್ಯಕ್ಕಾಗಿ, ಜೀವ ಹಾಗೂ ಭೌತದಲ್ಲಿನ ಸೌಂದರ್ಯಕ್ಕಾಗಿ, ವಸ್ತುವಿನ ಬಳಕೆಯಲ್ಲಿ ... ಕಾಳಜಿ ಇರುತ್ತದೆ.

*

**ಅತಿಮಾನಸ ಜ್ಞಾತ ವ್ಯಕ್ತಿ**

ಅತಿಮಾನಸ ಜ್ಞಾತ ವ್ಯಕ್ತಿಯು ಒಬ್ಬ ಆಧ್ಯಾತ್ಮಿಕ ವ್ಯಕ್ತಿಯಾಗಿರುತ್ತಾನೆ, ಆದರೆ ಸ್ಥಿರ ಗುಣಧರ್ಮಗಳ, ನಿಶ್ಚಿತ ಪಾತ್ರದ ಒಂದು ಸ್ಥಿರಗೊಳಿಸಿದ ಸಂಯೋಜನೆಯಿಂದ ಗುರುತಿಸಲಾದ ಮಾದರಿಯ ಅರ್ಥದಲ್ಲಿ ವ್ಯಕ್ತಿಯಲ್ಲ; ಅವನು ವಿಶ್ವವ್ಯಾಪಿ–ಯಾಗಿರುವುದರಿಂದ ಮತ್ತು ಅತೀಂದ್ರಿಯದ ಅರಿವಿನ ಅಭಿವ್ಯಕ್ತಿಯಾಗಿರುವುದರಿಂದ

ಆತ ಅದಾಗಿರಲಾರ. ಆದರೆ ಅವನ ಅಸ್ತಿತ್ವವು ವಿವಿಧ ರೂಪಗಳ ಗೊತ್ತುಗುರಿ ಇಲ್ಲದ ತೆರೆಗಳೆಡೆಗೆ ಎಸೆಯುತ್ತಿರುವ ಅಸಹಜವಾದ ನಿರಾಕಾರ ನಿರಂತರ ಪರಿವರ್ತನೆಯಾಗಲಿ (flux) ಅಥವಾ ಸಮಯದ ಮುಖಾಂತರ ಹೊರ ಹೊಮ್ಮುವ ವ್ಯಕ್ತಿತ್ವದ ತೆರೆಗಳಾಗಲಿ ಅಲ್ಲ. ತಮ್ಮ ಆಳದಲ್ಲಿ ಬಲವಾದ ಕೇಂದ್ರೀಕರಿಸುವ ವ್ಯಕ್ತಿಯನ್ನು ಹೊಂದಿರದ ಆದರೆ ಆ ಸಮಯದಲ್ಲಿ ಅವರಲ್ಲಿರುವ ಯಾವುದೇ ಒಂದು ಅಂಶದ ಪ್ರಕಾರ ಒಂದು ರೀತಿಯ ಬಹು–ವ್ಯಕ್ತಿತ್ವದಿಂದ ವರ್ತಿಸುವ ಮನುಷ್ಯನಲ್ಲಿ ಈ ರೀತಿಯ ಅನುಭವವಾಗಬಹುದು; ಆದರೆ ಜ್ಞಾತ ಪ್ರಜ್ಞೆಯು ಸಾಮರಸ್ಯ, ಸ್ವಯಂ ಜ್ಞಾನ ಮತ್ತು ಸ್ವಯಂ ಪಾಂಡಿತ್ಯದ ಪ್ರಜ್ಞೆಯಾಗಿದೆ ಮತ್ತು ಅದು ಅಂತಹ ಅಶಿಸ್ತನ್ನು ಪ್ರಸ್ತುತಪಡಿಸುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1020–1031**

ಶ್ರೀ ಅರವಿಂದರ ಕನಸಿಗೊಂದು ಮೂರ್ತರೂಪವನ್ನು ಕೊಡುವ ಕಾರ್ಯವನ್ನು ಶ್ರೀಮಾತೆಯವರಿಗೆ ವಹಿಸಲಾಯಿತು. ಶ್ರೀಮಾತೆಯವರು ಕೈಗೆತ್ತಿಗೊಂಡ ಕಾರ್ಯಗಳು – ಒಂದು ಹೊಸ ಪ್ರಪಂಚದ ರಚನೆ, ಒಂದು ಹೊಸ ಮಾನವ ಕುಲದ ರಚನೆ, ಹೊಸ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುವ ಮತ್ತು ಒಳಗೊಂಡಿರುವ ಒಂದು ಹೊಸ ಸಮಾಜದ ನಿರ್ಮಾಣ. ಸಂಗತಿಗಳ ಸಹಜ ಸ್ವಭಾವದಿಂದ, ಒಂದು ಸಾಮೂಹಿಕ ಪ್ರಯತ್ನಕ್ಕೆ ಕರೆಗೊಡುವ ಇದು ಒಂದು ಸಾಮೂಹಿಕ ಕಲ್ಪನೆಯಾಗಿದೆ, ಇದರಿಂದಾಗಿ ಅದನ್ನು ಸಮಗ್ರ ಮಾನವ ಪರಿಪೂರ್ಣತೆಯ ಪರಿಭಾಷೆಯಲ್ಲಿ ಅರಿತುಕೊಳ್ಳಬಹುದು.

ಶ್ರೀಮಾತೆಯವರು ಸ್ಥಾಪಿಸಿದ ಮತ್ತು ನಿರ್ಮಿಸಿದ ಆಶ್ರಮವು ಈ ಗುರಿಯ ಸಾಧನೆಯೆಡೆಗಿನ ಮೊದಲ ಹೆಜ್ಜೆಯಾಗಿದೆ. ಮಾನವ ಕುಲದ ಸಾಮೂಹಿಕ ಜೀವನದಲ್ಲಿ ಆತ್ಮ ಹಾಗೂ ದೇಹ, ಆತ್ಮ ಹಾಗೂ ಪ್ರಕೃತಿ, ಸ್ವರ್ಗ ಹಾಗೂ ಭೂಮಿ, ಇವುಗಳ ನಡುವೆ ಸಾಮರಸ್ಯವನ್ನು ಸ್ಥಾಪಿಸುವ ಈ ಪ್ರಯತ್ನದ ನೆಲೆಯನ್ನು ವಿಸ್ತರಿಸಲು ಪ್ರಯತ್ನಿಸುವಂಥ, ಹೆಚ್ಚು ಬಾಹ್ಯವಾದ ಅರೋವಿಲ್ಲೆ ಯೋಜನೆಯು ಇದರ ಮುಂದಿನ ಹಂತವಾಗಿದೆ.[1]

---

1. ಶ್ರೀಮಾತೆಯವರು 1972 ರಲ್ಲಿ ಈ ಪಠ್ಯವನ್ನು ಪುನಃ ಓದಿದಾಗ, ಅವರು ಕೊನೆಯ ವಾಕ್ಯದಲ್ಲಿ "ಹೆಚ್ಚು ಬಾಹ್ಯ" ಎನ್ನುವ ಪದಗಳನ್ನು ಸೇರಿಸಿದರು.

## ದೈವೀ ದೇಹ

ಹೊಸ ಬಗೆಯ, ದೈವೀ ದೇಹವು ಈಗಾಗಲೆ ವಿಕಾಸಗೊಂಡ ವಿಕಾಸಾತ್ಮಕ ರೂಪವನ್ನು ಮುಂದುವರೆಸಲೇಬೇಕು; ಪ್ರಕೃತಿಯು ಅಭಿವೃದ್ಧಿ ಹೊಂದುತ್ತಿರುವ ಬಗೆಯಿಂದ ಮುಂದುವರಿಕೆ ಇರಲೇಬೇಕು, ಮಾನವ ದೇಹದಿಂದ ದೈವೀ ದೇಹಕ್ಕೆ ನಿರಂತರತೆ, ಯಾವುದೊ ಒಂದು ಗುರುತಿಸಲಾರದೆಡೆಗೆ ಪ್ರತ್ಯೇಕಗೊಳ್ಳುವುದಲ್ಲ, ಆದರೆ ಈಗಾಗಲೆ ಸಾಧಿಸಲ್ಪಟ್ಟಿದ್ದಕ್ಕೆ ಮತ್ತು ಭಾಗಶಃ ಪರಿಪೂರ್ಣಗೊಳಿಸಿದ್ದಕ್ಕೆ ಒಂದು ವಿಶೇಷ ಮುಂದುವರಿಕೆ. ಮಾನವ ದೇಹವು ದೈವೀ ಜೀವನವನ್ನು ಉಪಚರಿಸಲು ಸಾಕಷ್ಟು ವಿಕಸನಗೊಂಡ ಭಾಗಗಳನ್ನು ಮತ್ತು ಸಾಧನಗಳನ್ನು ಹೊಂದಿದೆ; ಅವುಗಳು ಇನ್ನೂ ಹೆಚ್ಚು ಪರಿಪೂರ್ಣವಾಗಬೇಕು, ಅವುಗಳ ವ್ಯಾಪ್ತಿ ಮತ್ತು ಬಳಕೆಯ ಮಿತಿಗಳನ್ನು ತೆಗೆದುಹಾಕಬೇಕು, ದೋಷ ಮತ್ತು ರೋಗ ಮತ್ತು ದುರ್ಬಲತೆಗೆ ಅವುಗಳ ಬಾಧ್ಯತೆಯನ್ನು ತೆಗೆದುಹಾಕಬೇಕು, ಅವುಗಳ ಅರಿವಿನ ಸಾಮರ್ಥ್ಯ ಮತ್ತು ಕ್ರಿಯಾತ್ಮಕ ಕ್ರಿಯೆಯನ್ನು ಪ್ರಸ್ತುತ ಮಿತಿಗಳನ್ನು ಮೀರಿ ಸಾಗಿಸಬೇಕಾಗಿದೆ, ಆದರೂ ಇವುಗಳು ತಮ್ಮ ರೂಪದಲ್ಲಿ ಬದುಕಿರಬೇಕು. ನಮ್ಮ ಈಗಿನ ಮಾನವೀಯತೆಯು ಅರಿತುಕೊಳ್ಳಲು ಆಶಿಸಲು ಸಾಧ್ಯವಾಗದ, ಕನಸು ಕಾಣಲು ಅಥವಾ ಊಹಿಸಲು ಸಹ ಸಾಧ್ಯವಾಗದ ಹೊಸ ಶಕ್ತಿಗಳನ್ನು ದೇಹವು ಪಡೆದುಕೊಳ್ಳಬೇಕಾಗಿದೆ. ಆವಿಷ್ಕರಿಸಿದ ಉಪಕರಣಗಳು ಮತ್ತು ಯಂತ್ರೋಪಕರಣಗಳ ಬಳಕೆಯಿಂದ ಈಗ ಮಾತ್ರ ತಿಳಿದುಕೊಳ್ಳಬಹುದಾದ, ನಿರ್ಣಯ ಮಾಡಬಹದಾದ ಅಥವಾ ರಚಿಸಬಹುದಾದ ಹೆಚ್ಚಿನದನ್ನು ಹೊಸ ದೇಹವು ತನ್ನದೇ ಆದ ಶಕ್ತಿಯಿಂದ ಅಥವಾ (ವಾಸಿಸಿರುವ) ಆತ್ಮನಿಂದ ತನ್ನದೇ ಆದ ನೇರ ಆಧ್ಯಾತ್ಮಿಕ ಶಕ್ತಿಯ ಮೂಲಕ ಸಾಧಿಸಬಹುದು. ದೇಹವು, ಇತರ ದೇಹಗಳೊಂದಿಗೆ ಸಂವಹನದ ಹೊಸ ವಿಧಾನಗಳನ್ನು ಮತ್ತು ವ್ಯಾಪ್ತಿಯನ್ನು, ಜ್ಞಾನವನ್ನು ಪಡೆಯುವ ಹೊಸ ಪ್ರಕ್ರಿಯೆಗಳನ್ನು, ಹೊಸ ಅನುಭವಗಳನ್ನು, ಸ್ವತಃ ಮತ್ತು ವಸ್ತುಗಳ ಕುಶಲ ನಿರ್ವಹಣೆಯ ಹೊಸ ಸಾಮರ್ಥ್ಯಗಳನ್ನು ತನ್ನಷ್ಟಕ್ಕೆ ತಾನು ಪಡೆದುಕೊಳ್ಳಬಹುದು. ದೂರವನ್ನು ಸನಿಹ ಮಾಡಲು ಮತ್ತು ದೂರವನ್ನು ಅಳಿಸಲು, ದೇಹದ ಅರಿವಿನಾಚೆ ಇರವಂಥದ್ದನ್ನು ಗ್ರಹಿಸಲು, ತನ್ನ ನಿಲುಕಿನಾಚೆ ಇರುವ ಅಥವಾ ತನ್ನ ಕ್ಷೇತ್ರದಾಚೆ ಇರುವಲ್ಲಿ ಕ್ರಿಯೆಯನ್ನು ಪ್ರದರ್ಶಿಸಲು, ಪ್ರಸ್ತುತ ಪರಿಸ್ಥಿತಿಗಳಲ್ಲಿ ಅನುಮತಿ ಇರದಂಥ ಪ್ರಾಪಂಚಿಕ ಚೌಕಟ್ಟಿನ ದೃಢತೆಗೆ ಬೇಕಾದಂಥ ಚಾತುರ್ಯಗಳನ್ನು ಮತ್ತು

ನಮ್ಯತೆಗಳನ್ನು ಬೆಳೆಸಲು ಅದು ತನ್ನದೇ ಆದ ಸಂವಿಧಾನಕ್ಕೆ, ವಸ್ತುಗಳಿಗೆ ಅಥವಾ ಸಹಜ ಸಾಧನಗಳಿಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಹೊಂದಲು ಅಥವಾ ಬಹಿರಂಗಪಡಿಸಲು ಅದಕ್ಕೆ ಅಸಾಧ್ಯವಾಗಬಹುದು. ಇವುಗಳು ಮತ್ತು ಇಂತಹ ಇತರ ಹಲವಾರು ಸಂಭಾವ್ಯತೆಗಳು ಕಾಣಿಸಿಕೊಳ್ಳಬಹುದು ಮತ್ತು ದೇಹವು ನಾವು ಈಗ ಸಾಧ್ಯವಾದಷ್ಟು ಕಲ್ಪಿಸಿಕೊಳ್ಳುವುದಕ್ಕಿಂತ ಅಗಾಧವಾದ ಸಾಧನವಾಗಿ ಹೊರ ಹೊಮ್ಮಬಹುದು. ಮೊದಲು ಗ್ರಹಿಸುವ ಸತ್ಯ ಪ್ರಜ್ಞೆಯಿಂದ ಹಿಡಿದು ಅತಿಮಾನಸದ ಆರೋಹಣ ಶ್ರೇಣಿಗಳ ಅತ್ಯುನ್ನತ ಎತ್ತರದವರೆಗೆ ಒಂದು ವಿಕಸನವಿರಬಹುದು ಮತ್ತು ಅದು ಅತಿಮಾನಸ ಗಡಿಗಳನ್ನು ದಾಟಬಹುದು, ಅಲ್ಲಿ ಅದು ನೆರಳನ್ನು ಹೊಯ್ಯಲು, ಬೆಳೆಸಲು, ಪರಮ ಶುದ್ಧ ಅಸ್ತಿತ್ವದಿಂದ, ಇರುವಿಕೆಯ ಅತ್ಯುನ್ನತ ಸತ್ಯದ ಪ್ರಪಂಚಗಳನ್ನು, ತಪಸ್ಸಿನ ಚೈತನ್ಯವನ್ನು, ಅತ್ಯಾನಂದದ ವೈಭವ ಹಾಗೂ ಮಧುರತೆಯನ್ನು, ಸರ್ವವನ್ನೂ ನಿರ್ಮಿಸುವ ಆನಂದದ ಸ್ಪಷ್ಟ ಸಾರವನ್ನು ಮತ್ತು ತೀವ್ರತೆಯನ್ನು ಒಳಗೊಂಡ ಪ್ರಜ್ಞೆಯಿಂದ ಮತ್ತು ಅತ್ಯಾನಂದದಿಂದ ಸ್ಪರ್ಶಿಸಲ್ಪಟ್ಟ ಜೀವನದ ಅಭಿವ್ಯಕ್ತ ರೂಪಗಳನ್ನು ಚಿತ್ರಿಸಲು ಪ್ರಾರಂಭಿಸುತ್ತದೆ. ಭೌತಿಕ ಪುರುಷನ ರೂಪಾಂತರಣವು ಈ ನಿರಂತರ ಪ್ರಗತಿಯ ಪಥವನ್ನು ಅನುಸರಿಸಬಹುದು ಮತ್ತು ಭೂಮಿಯ ಮೇಲಿನ ಈ ದೈವೀ ಜೀವನದಲ್ಲಿ ಅತ್ಯುನ್ನತವಾದ ಶ್ರೇಷ್ಠತೆಯ ಹಾಗೂ ಸ್ವ–ಪ್ರಕಟಗೊಳ್ಳುವ ಆತ್ಮನ ವೈಭವವನ್ನು ಪ್ರತಿಫಲಿಸುತ್ತದೆ ಅಥವಾ ಪ್ರತಿರೂಪಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/556–57 – ಶ್ರೀ ಅರವಿಂದರು**

ಆ ಮನುಷ್ಯನು ವ್ಯರ್ಥವಾಗಿ ತಿಳಿಯಲು ಬಯಸಿದ ಈ ಸತ್ಯವು ಹೊಸ ಜನಾಂಗದ, ಅತಿಮಾನವನ ಜನ್ಮಸಿದ್ಧ ಹಕ್ಕು.

ಸತ್ಯದ ಪ್ರಕಾರ ಬದುಕುವುದು ಅವನ ಜನ್ಮಸಿದ್ಧ ಹಕ್ಕು.

ಹೊಸ ಪುರುಷನ ಆಗಮನವನ್ನು ಸಿದ್ಧಪಡಿಸಲು ನಾವು ನಮ್ಮ ಕೈಲಾದಷ್ಟು ಮಾಡೋಣ. ಮನಸ್ಸು ಮೌನವಾಗಬೇಕು ಮತ್ತು ಸತ್ಯ–ಪ್ರಜ್ಞೆಯಿಂದ ಬದಲಾಯಿಸಲ್ಪಡಬೇಕು – ವಿವರಗಳ ಪ್ರಜ್ಞೆಯು ಸಂಪೂರ್ಣ ಪ್ರಜ್ಞೆಯೊಂದಿಗೆ ಸಮನ್ವಯಗೊಂಡ ಪ್ರಜ್ಞೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/438 – ಶ್ರೀಮಾತೆ**

# ಮಾನವೀಯತೆ ಮತ್ತು ನವ ಜನಾಂಗ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

**ಸುಪ್ರಮಾನಸದ ನೌಕೆ**

ವಿಶಾಲವಾದ ನೌಕೆಯೊಂದರೊಳಗೆ ನಾನು ಪಯಣಿಸುತ್ತಿದ್ದೆ, ಈ ನೌಕೆಯು ಮಾನವತೆ ಮತ್ತು ನವ್ಯ ಸೃಷ್ಟಿಯ ಕಾರ್ಯವನ್ನು ಆರಂಭಿಸಲಿರುವ ಸಾಂಕೇತಿಕ ಪ್ರತಿಮೆಯಾಗಿತ್ತು. ಈ ನೌಕೆಯು ಒಂದು ನಗರದಷ್ಟು ವಿಶಾಲವಾಗಿದ್ದು, ಈ ಕಾರ್ಯವನ್ನು ಸಂಪನ್ನಗೊಳಿಸಲೆಂದೇ ಅದು ಪೂರ್ಣ ರೂಪದಲ್ಲಿ ಸುಸಜ್ಜಿತವಾಗಿ ರೂಪುಗೊಂಡಿತ್ತು. ಅದು ಈಗಾಗಲೇ ತನ್ನ ಕಾರ್ಯವನ್ನು ನಿರ್ವಹಿಸುತ್ತಾ ಸಾಗುತ್ತಿತ್ತು. ಅದರಲ್ಲಿ ಪಯಣಿಸುತಿರುವ ಜನಾಂಗವು ಬರಲಿರುವ ನವ್ಯ ಸೃಷ್ಟಿಯೊಂದರ ಜೀವನಕ್ಕಾಗಿ ಅದಾಗಲೇ ತರಬೇತಿಯನ್ನು ಪಡೆದುಕೊಳ್ಳುತ್ತಿತ್ತು. ಹೀಗಾಗಿ ಈ ಜನಾಂಗವು ಪೂರ್ಣ ರೂಪದಲ್ಲಿ ಅಲ್ಲದಿದ್ದರೂ ತಮ್ಮ ಅಸ್ತಿತ್ವದ ಒಂದು ಭಾಗದಲ್ಲಾದರೂ ಅವರು ಈಗಾಗಲೇ ಸುಪ್ರಮಾನಸದ ರೂಪಾಂತರಣದ ಪ್ರಕ್ರಿಯೆಗೆ ಒಳಗಾಗಿದ್ದರು. ಏಕೆಂದರೆ ನೌಕೆ ಮತ್ತು ಅದರಲ್ಲಿ ಅಡಕವಾಗಿರುವ ಎಲ್ಲಾ ದ್ರವ್ಯಗಳು ಜಡಚೇತನವಾಗಿರಲಿಲ್ಲ, ಸೂಕ್ಷ್ಮ–ಭೌತಿಕ ಹಂತದ್ದಾಗಿರಲಿಲ್ಲ, ವೈಚಾರಿಕ ಅಥವಾ ಮಾನಸಿಕ ಹಂತದ ವಸ್ತುವಾಗಿರಲಿಲ್ಲ. ಬದಲಿಗೆ ಅವೆಲ್ಲವೂ ಸುಪ್ರಮಾನಸದ ಸ್ತರಕ್ಕೆ ಸೀಮಿತವಾದ ದಾಸ್ತಾನುಗಳಾಗಿದ್ದವು. ಈ ಸುಪ್ರಮಾನಸದ ದ್ರವ್ಯಗಳು ಭೌತಿಕ ಪ್ರಪಂಚಕ್ಕೆ ತೀರಾ ಹತ್ತಿರದಲ್ಲಿದ್ದು, ಜಡ ಲೋಕದಲ್ಲಿ ಪ್ರಕಟಗೊಂಡ ಪ್ರಥಮ ದ್ರವ್ಯವು ಇದೆಂದು ಹೇಳಬಹುದು. ಇದರ ಅವತರಣಿಕೆಯ ಸಂದರ್ಭದಲ್ಲಿ ಮೊದಲು ಕೆಂಪು ಮತ್ತು ಚಿನ್ನದ ಬಣ್ಣದ ಎರಡು ಬೆಳಕಿನ ಪುಂಜಗಳು ಸಂಯೋಜನೆಗೊಂಡು ಪ್ರಕಾಶಮಾನವಾದ ಕಿತ್ತಳೆ ಬಣ್ಣದ ದ್ರವ್ಯವೊಂದನ್ನು ಸೃಷ್ಟಿಸುತ್ತವೆ. ನೌಕೆಯಲ್ಲಿರುವ ಎಲ್ಲಾ ದ್ರವ್ಯಗಳೂ, ಜನರೂ, ಬೆಳಕಿನ ಕಿರಣಗಳೂ ಈ ಕಿತ್ತಳೆ ಬಣ್ಣದಿಂದಲೇ ಹೊಳೆಯುತ್ತಿದ್ದವು. ಯಾವುದೇ ನೆರಳಿನ ಛಾಯೆಗಳಿರದೆ ಏಕ ವರ್ಣದಿಂದ ಕಂಗೊಳಿಸುತ್ತಿದ್ದ ಎಲ್ಲಾ ವಸ್ತುಗಳು ನೋಡಲು ಒಂದೇ ರೀತಿಯಲ್ಲಿ ಕಂಡುಬಂದರೂ, ಅವುಗಳನ್ನು ಪ್ರತ್ಯೇಕಿಸುವ ಸೂಕ್ಷ್ಮತೆಯೊಂದು ಅಲ್ಲಿ ಅಸ್ತಿತ್ವದಲ್ಲಿತ್ತು. ಒಟ್ಟಿನಲ್ಲಿ ಛಾಯೆಗಳಿರದ ಆ ಪ್ರಪಂಚವು ಕ್ರಮಬದ್ಧತೆಯಿಂದ ಕೂಡಿದ್ದು ಶಾಂತಿ ಮತ್ತು ಸಂತೋಷಗಳ ಆಗರವಾಗಿತ್ತು. ಅಲ್ಲಿ ಸರ್ವ ಕಾರ್ಯಗಳೂ ಅಡೆತಡೆಗಳಿರದೆ ಮುಕ್ತವಾಗಿ–ಮೌನವಾಗಿ ನಡೆಯುತ್ತಿದ್ದವು. ಇದೆಲ್ಲವನ್ನೂ ನೋಡುತ್ತ

ನಿಂತಿದ್ದ ನಾನು ಅಲ್ಲಿ ತರಬೇತಿಗೊಳಪಟ್ಟು ಶಿಕ್ಷಿತರಾಗುತ್ತಿದ್ದ ಜನಾಂಗದ ಶಿಕ್ಷಣದ ರೀತಿ–ನೀತಿಗಳನ್ನು ಅವಲೋಕಿಸುತ್ತಿದ್ದೆ.

ಆ ವಿಶಾಲವಾದ ನೌಕೆಯು ಸುಪ್ರಮಾನಸ ಲೋಕದ ದಡಕ್ಕೆ ಬರುತ್ತಿದ್ದಂತೆ ಆ ಲೋಕದ ಭವಿಷ್ಯದ ನಿವಾಸಿಗಳಾಗಿ ಬದುಕಲೆಂದು ನಿರ್ದೇಶಿಸಲಾದ ಮೊದಲ ಹಂತದ ಜನಾಂಗವು ನೌಕೆಯಿಂದಿಳಿಯುತ್ತಿತ್ತು. ಹೀಗೆ ಇಳಿದ ಜನಾಂಗದ ಜೀವನಕ್ಕಾಗಿ ಅಲ್ಲಿ ಸರ್ವ ರೀತಿಯ ವ್ಯವಸ್ಥೆಗಳೂ ಪೂರ್ಣಗೊಂಡಿದ್ದವು. ಅದರಂತೆ ಬಂದರಿನ ಮೇಲೆ ನಿರ್ಧಿಷ್ಟ ಸಂಖ್ಯೆಯಲ್ಲಿ ವಿಶಾಲ ಕಾಯರಾದ ಕೆಲ ಜೀವಿಗಳನ್ನು ಮೊದಲಿಗರಾಗಿ ಇಳಿಸಲಾಯಿತು. ಆದರೆ ಈ ಜೀವಿಗಳು ಮಾನವರಾಗಿರಲಿಲ್ಲ. ಅಥವಾ ಮರ್ತ್ಯ ನೆಲೆಯ ಭೂತ ಕಾಲದಲ್ಲಿ ಬದುಕಿದ್ದ ಜನಾಂಗವಾಗಿರಲಿಲ್ಲ. ಅಲ್ಲದೆ ಸುಪ್ರಮಾನಸದ ನೆಲೆಯ ಪ್ರಭೃತಿಗಳೂ ಆಗಿರಲಿಲ್ಲ. ಬದಲಿಗೆ ಅವರುಗಳೆಲ್ಲ ಮೇಲಿನ ಲೋಕದ ನಿವಾಸಿಗಳಾಗಿದ್ದು, ಸುಪ್ರಮಾನಸದ ಲೋಕವನ್ನು ವ್ಯವಸ್ಥಿತಗೊಳಿಸಲೆಂದೂ, ಬೇರೆ ಲೋಕಗಳಿಂದ ನೌಕೆಯನ್ನೇರಿ ಅಲ್ಲಿಗೆ ಬರುವ ಜನಾಂಗಗಳನ್ನು ಸುಪ್ರಮಾನಸದ ಜೀವನಕ್ಕೆ ರೂಪಾಂತರಿಸುವ ಮಹತ್ಕಾರ್ಯದಲ್ಲಿ ಮೇಲ್ವಿಚಾರಣೆ ಮಾಡಲೆಂದೂ ಅವರನ್ನು ಅಲ್ಲಿ ನಿಯೋಜಿಸಲಾಗಿತ್ತು. ಮತ್ತು ನಿಯುಕ್ತಗೊಂಡ ಆ ತಂಡದಲ್ಲಿ ಓರ್ವ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದ ನಾನೂ ಸಹ ಪ್ರಾರಂಭದಿಂದಲೂ ಎಲ್ಲಾ ಕಾರ್ಯಗಳ ಉಸ್ತುವಾರಿಯನ್ನು ನಿಭಾಯಿಸಿದ್ದೇನೆ. ನಾನೇ ಮುಂದಾಗಿ ಎಲ್ಲಾ ಗುಂಪುಗಳನ್ನು ಪ್ರತ್ಯೇಕಿಸಿ ಹಡಗಿನ ಸೇತುವೆಯ ಮೇಲೆ ನಿಂತು ಒಂದೊಂದೇ ಗುಂಪುಗಳನ್ನು ಮುಂದೆ ತಂದು ದಡಕ್ಕೆ ಇಳಿಸುತ್ತಿದ್ದೇನೆ. ಎಲ್ಲರಿಗೂ ಮುಂದಾಗಿ ದಡಕ್ಕಿಳಿದ ಎತ್ತರದ ಜೀವಿಗಳು ನಾನು ಕೆಳಗಿಳಿಸುತ್ತಿದ್ದ ಪ್ರತಿಯೊಂದು ಗುಂಪುಗಳನ್ನು ಪರೀಕ್ಷಿಸುತ್ತಿದ್ದರು. ದಡಕ್ಕಿಳಿಯಲು ಸಿದ್ಧರಾದವರನ್ನು ಇಳಿಸುತ್ತ, ಕೆಳಗಿಳಿಯಲು ಸಿದ್ಧರಿಲ್ಲದವರನ್ನು ಮರಳಿ ನೌಕೆಯೊಳಗೆ ಏರಿಸುತ್ತ, ಇನ್ನೂ ತರಬೇತಿಯಾಗದೇ ಇಳಿಯಲು ಪ್ರಯತ್ನಿಸುತ್ತಿದ್ದವರನ್ನು ಇಳಿಸದೇ ತರಬೇತಿಯನ್ನು ಮುಂದುವರೆಸಲು ಸೂಚಿಸುತ್ತ ಆ ಎತ್ತರದ ಜೀವಿಗಳು ತಮ್ಮ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದವು. ಅವರ ಈ ಅಚ್ಚುಕಟ್ಟಿನ ನಿರ್ವಹಣೆಯನ್ನು ನೋಡುತ್ತ ನಿಂತಿದ್ದ ನನಗೆ ಅವರ ಕಾರ್ಯದ ಬಗೆಗೆ ಇನ್ನೂ ಹೆಚ್ಚಿನದನ್ನು ತಿಳಿದುಕೊಳ್ಳಬೇಕೆಂಬ ಬಯಕೆಯಾಯಿತು. ‘ಅವರುಗಳು ಹೇಗೆ ಓರ್ವ ವ್ಯಕ್ತಿಯನ್ನು ಸುಪ್ರಮಾನಸದ ಲೋಕಕ್ಕೆ ಸಿದ್ಧನಾಗಿದ್ದಾನೆ ಎಂದು ತಿಳಿದು ಅವನನ್ನು ಮುಂದಕ್ಕೆ ಕಳಿಸುತ್ತಾರೆ? ಮತ್ತೆ ಕೆಲವರನ್ನು ಹೇಗೆ ಅವರು ಇನ್ನೂ ಈ

ಸುಪ್ರಮಾನಸದ ಜೀವನಕ್ಕೆ ಸಿದ್ಧರಾಗಿಲ್ಲವೆಂದು ಬಗೆದು ಅವರನ್ನು ಮರಳಿ ನೌಕೆಗೆ ಕಳಿಸುತ್ತಾರೆ? ಮತ್ತು ತರಬೇತಿಯನ್ನೂ ಪೂರ್ಣಗೊಳ್ಳದ ಜನಾಂಗವನ್ನು ಅವರುಗಳು ಹೇಗೆ ಪತ್ತೆ ಹಚ್ಚುತ್ತಾರೆ?' ಇವೆ ಮೊದಲಾದ ನನ್ನ ಗೊಂದಲಗಳನ್ನು ಪರಿಹರಿಸಿಕೊಳ್ಳಲೆಂದು ನಾನು ತದೇಕ ಚಿತ್ತನಾಗಿ ಪರಿಶೀಲಿಸುತ್ತ ನಿಂತಿರುವಾಗಲೇ ಒಮ್ಮಿಂದೊಮ್ಮೆಗೇ ನನ್ನನ್ನು ಯಾರೋ ಜೋರಾಗಿ ಹಿಂದಕ್ಕೆ ಎಳೆಯಲ್ಪಟ್ಟಂತೆ ಭಾಸವಾಗಿ ನಾನು ಹಿಂದಕ್ಕೆ ಚಲಿಸಿದೆ. ಅದಾವುದೋ ಪ್ರಜ್ಞೆ ನನ್ನನ್ನು ನನ್ನ ಪ್ರಶ್ನೆಗಳ ಸರಮಾಲೆಯಿಂದ ಹಿಂಸರಿಯುವಂತೆ ಹಿಡಿದು ಜಗ್ಗುತ್ತಿತ್ತು. ಆದರೂ ನನ್ನ ಪ್ರಜ್ಞೆಯು ಮಾತ್ರ, 'ಇಲ್ಲ, ಇನ್ನೂ ಇಲ್ಲ, ನಾನು ಅಲ್ಲಿ ಯಾರಿದ್ದಾರೆ ಎಂಬುದನ್ನು ತಿಳಿದುಕೊಳ್ಳಲೇಬೇಕು. ಅದರ ಮೂಲವನ್ನು ನಾನು ಅರಿತುಕೊಳ್ಳಲೇಬೇಕು' ಎಂದು ತೀವ್ರತರವಾಗಿ ಆ ಎಳೆತವನ್ನು ಪ್ರತಿರೋಧಿಸುತ್ತಿದ್ದೆ. ಆದರೆ ಇದ್ದಕ್ಕಿದ್ದಂತೆ ಇಲ್ಲಿ ಗಡಿಯಾರವು ಹೊಡೆದುಕೊಳ್ಳಲಾರಂಭಿಸಿತು. ಮೂರುಬಾರಿ ಅರಚಿಕೊಂಡ ಅದರ ಶಬ್ದದಿಂದ ಅದು ನನ್ನನ್ನು ಒತ್ತಾಯಪೂರ್ವಕವಾಗಿ ಹಿಂದಕ್ಕೆಳೆದು ತಳ್ಳಿತು. ತೋಲನ ತಪ್ಪಿದಂತಾದ ನನ್ನ ದೇಹವು ಜಾರಿಬಿದ್ದಂತೆ ಭಾಸವಾಯಿತು. ಹೀಗೆ ಆಘಾತವನ್ನು ಹೊತ್ತು ನಾನು ಹಿಂತಿರುಗಿದೆ. ನನ್ನನ್ನು ಒತ್ತಾಯಪೂರ್ವಕವಾಗಿ ಹಿಂದಕ್ಕೆಳೆದದ್ದರಿಂದ ಅಲ್ಲಿ ನಾನು ಕಂಡ ಕಾಣ್ಕೆಗಳೆಲ್ಲವೂ ನನ್ನ ಸ್ಮೃತಿಯಲ್ಲಿ ಅಚ್ಚಳಿಯದೇ ನಿಂತಿದ್ದವು. ಆದರೂ ಅವುಗಳನ್ನು ಕ್ರಮವಾಗಿ ನೆನೆಪಿನಲ್ಲಿಟ್ಟು–ಕೊಳ್ಳಲೆಂದು ನಾನು ಕೆಲಘಳಿಗೆ ಶಾಂತವಾಗಿ–ನಿಶ್ಚಲವಾಗಿ ನಿಂತಿದ್ದೆ.

ನೌಕೆಯಲ್ಲಿದ್ದ ವಸ್ತುಗಳು ಈ ಭೂಮಿಯ ಮೇಲೆ ನಾವು ಕಂಡ ಯಾವುದೇ ವಸ್ತುಗಳನ್ನೂ ಹೋಲುವದಿಲ್ಲ. ಹಾಗಾಗಿ ಅವುಗಳ ಸ್ವರೂಪವನ್ನು ನಾವಿನ್ನೂ ಅರಿತಿಲ್ಲ. ಉದಾಹರಣೆಗೆ ಬಟ್ಟೆಯನ್ನು ತೆಗೆದುಕೊಂಡರೆ. ಅಲ್ಲಿಯ ಬಟ್ಟೆಗಳನ್ನು ಬಟ್ಟೆಗಳಿಂದ ಮಾಡಿಯೇ ಇಲ್ಲ. ಅಥವಾ ಬಟ್ಟೆಯಂತೆ ಹೋಲುವ ಬೇರೆಯಾವುದೇ ವಸ್ತುವಿನಿಂದಲೂ ತಯಾರಿಸಿಲ್ಲ. ಅಲ್ಲಿಯ ಬಟ್ಟೆಯು ಒಂದು ವಸ್ತುವಾಗಿರದೆ ಅದು ಅದನ್ನು ತೊಟ್ಟ ವ್ಯಕ್ತಿಯ ದೇಹದ ಒಂದು ಅವಿಭಾಜ್ಯ ಅಂಗವೇ ಆಗಿತ್ತು. ಅದು ಅವನ ಜನ್ಮತಃ ಬಂದಿದ್ದು, ಅದನ್ನು ಬದಲಾಯಿಸುವ ವಿಧಾನವೂ ನಮ್ಮಂತೆ ಇರದೆ. ಅದೂ ಸಹ ಒಂದು ವಿಶಿಷ್ಟ ವಿಧಾನವೇ ಆಗಿದೆ. ಅದು ನಮ್ಮಂತೆ ಬಾಹ್ಯ ವಿಧಾನವಾಗಿರದೇ ಆಂತರ್ಯದ ವಿಧಾನವಾಗಿದೆ. ಹೇಗೆಂದರೆ, ಅದನ್ನು ಬದಲಿಸಬೇಕೆಂಬ ವಿಚಾರವು ಬಂದ ಕೂಡಲೇ ಅದು ತನ್ನ ಕಾರ್ಯವನ್ನು ಮುಗಿಸಿರುತ್ತದೆ. ಮತ್ತು ಆ ಪ್ರಜ್ಞೆಯೇ ಅದಕ್ಕೆ ಬೇಕಿರುವ ಬಣ್ಣ–ಆಕಾರಗಳನ್ನು

ನೀಡುತ್ತದೆ. ಈ ಬದಲಾವಣೆಯು ಆ ವ್ಯಕ್ತಿಯ ಬೇಡಿಕೆಗೆ ತಕ್ಕಂತೆ ಸೂಸುವ ಕಂಪನಗಳಿಂದ ನಿರ್ದೇಶಿತವಾಗುತ್ತದೆ.

ಹೆಚ್ಚಿನ ತರಬೇತಿಗಾಗಿ ಹಿಂದಕ್ಕೆ ಕಳಿಸಲ್ಪಟ್ಟವರು ಏಕರೂಪದ ಬಣ್ಣವನ್ನು ಹೊಂದಿರಲಿಲ್ಲ. ಅವರ ದೇಹದ ಮೇಲೆ ಅಸ್ಪಷ್ಟವಾದ ಬೂದು ವರ್ಣದ ತೇಪೆಗಳಿದ್ದವು. ಆ ತೇಪೆಗಳು ಭೂಮಿಯ ಮೇಲಿರುವ ವಸ್ತುವಿನಂತೆ ಕಂಡುಬರುತ್ತಿತ್ತು. ಅವುಗಳು ಪೂರ್ಣ ರೂಪದಲ್ಲಿ ಬೆಳಕಿನಿಂದ ಕೂಡಿರದೆ, ರೂಪಾಂತರಣದ ಪೂರ್ಣ ಮಟ್ಟವನ್ನೇರದೆ ಮಂದವಾಗಿ ಕಾಣುತ್ತಿದ್ದವು. ಅವರು ಎಲ್ಲರೂ ಒಂದೇ ತೆರನಾಗಿರಲಿಲ್ಲ. ಇನ್ನು ತೀರದಲ್ಲಿ ನಿಂತು ಗುಂಪುಗಳನ್ನು ನಿರ್ದೇಶಿಸುತ್ತಿದ್ದ ಎತ್ತರದ ಜೀವಿಗಳೂ ಸಹ ಒಂದೇ ರೀತಿಯ ಬಣ್ಣವನ್ನು ಹೊಂದಿರಲಿಲ್ಲ. ಕಡೆ ಪಕ್ಷ ಅವರುಗಳು ನೌಕೆಯಲ್ಲಿದ್ದಂತೆ ಕಿತ್ತಳೆ ಬಣ್ಣವನ್ನೂ ಹೊಂದಿರಲಿಲ್ಲ. ಅವರುಗಳು ತುಂಬಾ ಎತ್ತರವಾಗಿಯೂ, ತೆಳುವಾಗಿಯೂ ಇದ್ದು ಅವರ ದೇಹವು ಹೆಚ್ಚು ಪಾರದರ್ಶಕವಾಗಿತ್ತು. ಆದರೆ ಅವರ ಶರೀರದ ರಚನೆಯಲ್ಲಿ ಅಸ್ಥಿಪಂಜರವೇ ಇರಲಿಲ್ಲ. ಹಾಗೂ ಅವರುಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ತಮಗೆ ಬೇಕಾದ ರೂಪವನ್ನು ಧಾರಣೆ ಮಾಡುವ ಶಕ್ತಿಯನ್ನು ಹೊಂದಿದ್ದರು. ಅವರ ದೇಹದಲ್ಲಿ ಸೊಂಟದಿಂದ ಹಿಡಿದು ಪಾದಗಳವರೆಗಿನ ಭಾಗವು ಮಾತ್ರ ಶಾಶ್ವತವಾದ ಸಾಂದ್ರತೆಯನ್ನು ಹೊಂದಿತ್ತು. ಈ ಭಾಗವನ್ನು ಬಿಟ್ಟರೆ ಬೇರೆಯಾವ ಭಾಗವೂ ಈ ರೀತಿಯಾಗಿರಲಿಲ್ಲ. ಆ ಭಾಗವು ಹೆಚ್ಚು ತೆಳುವಾಗಿದ್ದು ಬಣ್ಣದಲ್ಲಿ ಅತ್ತ ಬಿಳುಪೂ ಅಲ್ಲದ ಇತ್ತ ಚಿನ್ನದ ಬಣ್ಣವೂ ಅಲ್ಲದ ತೆಳುವಾದ ಕೆಂಪು ವರ್ಣದಿಂದ ಕೂಡಿತ್ತು. ಅವುಗಳಲ್ಲಿ ಬಿಳಿ ಬೆಳಕಿನ ಭಾಗವು ಸಂಪೂರ್ಣವಾಗಿ ಅಲ್ಲದಿದ್ದರೂ ಅರೆಪಾದರ್ಶಕವಾಗಿದ್ದು, ಕಿತ್ತಳೆ ವರ್ಣದ ಭಾಗಗಳಿಗಿಂತಲೂ ಕಡಿಮೆ ಸಾಂದ್ರವಾಗಿಯೂ ಅಧಿಕ ಸೂಕ್ಷ್ಮವಾಗಿಯೂ ಇತ್ತು.

ಯಾವಾಗ ನಾನು ಅದೆಲ್ಲವನ್ನು ನೋಡುತ್ತ ನಿಂತಿರುವಾಗ ಅದಾವುದೋ ಅದೃಶ್ಯ ಶಕ್ತಿಯು ನನ್ನನ್ನು ಹಿಂದಕ್ಕೆಳೆಯುತ್ತಿತ್ತೋ ಅದೇ ಸಂದರ್ಭದಲ್ಲಿ ನನ್ನೆದುರಿಗೆ ನನ್ನದೇ ರೂಪವನ್ನು ಹೊತ್ತು ನಿಂತಿದ್ದ ನನ್ನದೇ ಸುಪ್ರಮಾಸದ ದೇಹವೊಂದನ್ನು ಕಂಡೆ. ಸುಪ್ರಮಾನಸ ರೂಪದ ನನ್ನ ಶರೀರವು, ಎತ್ತರವಾಗಿದ್ದ ಜೀವಿಗಳು ಮತ್ತು ನೌಕೆಯಲ್ಲಿದ್ದ ಇನ್ನುಳಿದ ಜನಾಂಗದ ಮಿಶ್ರಣವಾಗಿ ರೂಪುಪಡೆದಿತ್ತು. ಆ ನನ್ನ ದೇಹದ ಮೇಲಿನ ಭಾಗಗಳು, ವಿಶೇಷವಾಗಿ ನನ್ನ ತಲೆಯು ಕಿತ್ತಳೆ ಬಣ್ಣದ

ಅಂಚಿನೊಂದಿಗೆ ಬಿಳಿ ಬಣ್ಣಗಳಿಂದ ರೂಪುಗೊಂಡಿತ್ತು. ಇನ್ನೂ ತಲೆಯಿಂದ ಕಾಲಡಿಗೆ ಇಳಿದಂತೆ ಸೊಂಟದ ಕೆಳಗಿನ ಭಾಗಗಳೆಲ್ಲವೂ ನೌಕೆಯಲ್ಲಿದ್ದ ಜನಾಂಗದ ಬಣ್ಣದಂತಿದ್ದು, ಕಿತ್ತಳೆ ಬಣ್ಣದಿಂದ ಕೂಡಿತ್ತು. ಕಾಲಿನಿಂದ ಮೇಲೆ ಹೋದಂತೆ ಅವುಗಳು ಹೆಚ್ಚು ಪಾರದರ್ಶಕವಾಗಿದ್ದವು. ನನ್ನ ತಲೆಯು ಒಂದು ಸಿಲೋಯಿಟ್ ಆಗಿದ್ದು, ಅದರ ಮಧ್ಯೆ ಸೂರ್ಯನ ಸ್ಥಾನವಿತ್ತು. ಆ ಸೂರ್ಯನಿಂದ ಹೊರಡುವ ಕಿರಣಗಳು ನನ್ನ ಇಚ್ಛೆಯನ್ನು ಕ್ರಿಯೆಯ ರೂಪದಲ್ಲಿ ಪ್ರಸ್ತುತಪಡಿಸುತ್ತಿದ್ದವು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 3 ಫೆಬ್ರವರಿ, 1958**

## ನಾವಿರುವ ಲೋಕ ಮತ್ತು ಸುಪ್ರಮಾನಸದ ಮಧ್ಯೆ ಇರುವ ವ್ಯತ್ಯಾಸಗಳು

ಇಲ್ಲಿ ನಿಮಗೆಲ್ಲ ನಾನೊಂದು ಮುಖ್ಯವಾದ ವಿಷಯವನ್ನು ಹೇಳಲು ಇಚ್ಛಿಸುತ್ತೇನೆ. ಅದುವೇ ನಮ್ಮ ಲೋಕ ಮತ್ತು ಸುಪ್ರಮಾನಸದ ಮಧ್ಯೆ ಇರುವ ವ್ಯತ್ಯಾಸ. (ಪ್ರಜ್ಞೆಯ ಮೂಲಕ ಆ ಲೋಕಕ್ಕೆ ಹೋದ ನಂತರ. ಇಲ್ಲಿಯ ನಮ್ಮ ಚಟುವಟಿಕೆಗಳು ಪ್ರಜ್ಞಾಪೂರ್ವಕವಾಗಿ ಕಾರ್ಯನಿರ್ವಹಿಸುವದನ್ನು ಕಂಡುಕೊಂಡ ನನಗೆ ಈ ಎರಡೂ ಲೋಕಗಳ ನಡುವಿನ ವ್ಯತ್ಯಾಸವು ಬಹಳ ಅಗಾಧವಾಗಿ ಕಂಡುಬಂದಿತು.) ಇಲ್ಲಿ ನಡೆಯುವ ಒಳಮಟ್ಟದ ಮತ್ತು ಅತ್ಯಂತ ಆಳವಾದ ಮಟ್ಟದ ಕಾರ್ಯಗಳನ್ನು ಹೊರತು ಪಡಿಸಿದರೆ ಉಳಿದೆಲ್ಲವೂ ನನಗೆ ಕೃತಕದಂತೆ ಕಂಡುಬರುತ್ತದೆ. ಇಲ್ಲಿನ ಭೌತಿಕ ಮಟ್ಟದ ಜೀವನದಲ್ಲಿ ಋತ–ಸತ್ಯಗಳ ಮೌಲ್ಯವೇ ಇಲ್ಲ. ಉದಾಹರಣೆಗೆ ಬಟ್ಟೆಯನ್ನು ಬೇರೆಬೇರೆಯಾಗಿ ಖರೀದಿಸಿ ಅವುಗಳನ್ನು ಒಟ್ಟಿಗೆ ಹೊಲಿಯಬೇಕು. ಕೊನೆಗೆ ಅವುಗಳನ್ನು ನಮ್ಮ ದೇಹದ ಮೇಲೆ ಹಾಕಿಕೊಳ್ಳಬೇಕು. ಹೀಗೆ ನಮಗೆ ಬೇಕಿರುವ ಎಲ್ಲವನ್ನೂ ನಾವು ಹೊರಗಿನಿಂದ ತೆಗೆದುಕೊಂಡು ಅದನ್ನು ನಮ್ಮ ದೇಹದ ಒಳ–ಹೊರಗೆ ತುಂಬಿಕೊಳ್ಳಬೇಕು. ಸುಪ್ರಮಾನಸದ ದೃಷ್ಟಿಯಲ್ಲಿ ಇದು ತೀರಾ ಕೃತಕವಾಗಿತೋರುತ್ತದೆ.

ಆದರೆ ಸುಪ್ರಮಾಸದಲ್ಲಿರುವ ಸತ್ಯವೂ, ಸಹಜವೂ, ಪ್ರಾಮಾಣಿಕವೂ ಆದ ದಿವ್ಯ ಜೀವನದಲ್ಲಿ ಬದುಕುತ್ತಿರುವ ಜೀವಿಗಳು ಕೇವಲ ಇಚ್ಛೆಯ ಮೂಲಕವೇ ತಮ್ಮ ಬಯಕೆಗಳನ್ನು ಪೂರೈಸಿಕೊಳ್ಳುತ್ತಾರೆ. ಅದಕ್ಕೆ ಅಲ್ಲಿ ಹೊರಗಿನ ದ್ರವ್ಯಗಳ ಅವಶ್ಯಕತೆ ಇಲ್ಲ. ಆ ಜೀವಿಗಳಿಂದ ಹೊರಡುವ ಇಚ್ಛೆಯ ಕಂಪನಗಳಿಂದಲೇ ಅವು ತಮಗೆ ಬೇಕಿರುವ ರೂಪದಲ್ಲಿ ವಸ್ತುಗಳನ್ನು ಸೃಷ್ಟಿಸಿಕೊಳ್ಳುವ ಶಕ್ತಿಯನ್ನು ಹೊಂದಿವೆ.

ಆದರೆ ಭೂಮಿಯ ಸಾಮಾನ್ಯ ಜೀವನದಲ್ಲಿ ಎಲ್ಲವೂ ಕೃತಕವಾಗಿದೆ. ಇಲ್ಲಿ ನಮ್ಮ ಬದುಕು ನಮ್ಮ ಜನ್ಮ ಮತ್ತು ನಮ್ಮ ಸುತ್ತಮುತ್ತಲಿನ ವಾತಾವರಣದ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಉತ್ತಮ ಸ್ಥಾನದ ಕುಟುಂಬದಲ್ಲಿ ಜನಿಸಿದವರ ಬೇಕು ಬೇಡಿಕೆಗಳು ಬಯಸಿದ ತಕ್ಷಣ ಪೂರೈಕೆಯಾಗುತ್ತವೆ. ಅವರ ಜೀವನವೂ ಆರಾಮದಾಯಕವಾಗಿರುತ್ತದೆ. ಅದೇ ಸಾಧಾರಣ ಸ್ಥಿತಿಯಲ್ಲಿ ಜನಿಸಿದವರಿಗೆ ಅವರ ಬಯಕೆಗಳನ್ನು ಪೂರೈಸುವ ದಾಸ್ತಾನು ವಿರಳವಾಗಿರುತ್ತವೆ. ಒಟ್ಟಿನಲ್ಲಿ ಇಲ್ಲಿ ಜೀವನವು ಅದೃಷ್ಟದ ಮೇಲೆ ಅವಲಂಬಿತವಾಗಿರುತ್ತದೆ. ಸಂಪೂರ್ಣವಾಗಿ ನಿಷ್ಪ್ರಯೋಜಕನಾದ ವ್ಯಕ್ತಿಯು ಅತ್ಯಂತ ಉನ್ನತ ಸ್ಥಾನದಲ್ಲಿ ಮೆರೆಯುತ್ತಿರಬಹುದು. ಹಾಗೆಯೇ ಸೃಷ್ಟಿ–ಸಂಘಟನೆಗಳ ಸಾಮರ್ಥ್ಯವನ್ನು ಹೊಂದಿದ ವ್ಯಕ್ತಿಯು ತೀರಾ ಸೀಮಿತವಾದ ಅಥವಾ ಕೆಳಮಟ್ಟದ ಸ್ಥಾನದಲ್ಲಿ ಶ್ರಮಿಸುತ್ತಿರಬಹುದು.

ಈ ಕೃತಕವಾದ, ಅಪ್ರಬುದ್ಧತೆಯಿಂದ ಕೂಡಿದ, ಸತ್ಯದ ಸ್ವಲ್ಪಾಂಶವೂ ಇಲ್ಲದ ಜೀವನವನ್ನು ಕಂಡು ನನಗೆ ಆಘಾತವೆನಿಸುತ್ತಿದೆ. ಸತ್ಯದ ಮುಖವಾಡವನ್ನು ಹಾಕಿಕೊಂಡ ಈ ಸುಳ್ಳಿನ ಲೋಕದಲ್ಲಿ ಸತ್ಯವನ್ನು ಒರೆಗೆ ಹಚ್ಚುವ ಬಗೆಯನ್ನು ತಿಳಿಯದೆ ನಾವುಗಳು ಆಶ್ಚರ್ಯಕ್ಕೊಳಗಾಗಿದ್ದೇವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 3 ಫೆಬ್ರವರಿ, 1958**

**ಮಾನವೀಯ ಪದರುಗಳು ಮತ್ತು ಸುಪ್ರಮಾನಸದ ಸೃಷ್ಟಿ**

ಶ್ರೀ ಅರವಿಂದರು ಬೆಳಿಗ್ಗೆಯಿಂದ ಸಂಜೆಯವರೆಗೂ ಅಲ್ಲಿಯೇ ಇದ್ದರು.

ಶ್ರೀ ಅರವಿಂದರು ನನ್ನ ಪಾಲಿಗೆ ಬೇರೆಯದೇ ಮಾನವೀಯ ಮೌಲ್ಯಗಳನ್ನು ಹೊಂದಿದ್ದ ಸುಪ್ರಮಾನಸದ ಸ್ತರದಲ್ಲಿ ನನ್ನನ್ನು ಒಂದು ಗಂಟೆಗೂ ಹೆಚ್ಚಿನ ಕಾಲ ಬದುಕುವಂತೆ ಮಾಡಿದ್ದರು. ಇದರಿಂದಾಗಿ ನಾನೂ ಸಹ ಆ ಲೋಕದ ದರ್ಶನವನ್ನು ಪಡೆಯುವಂತಾಯಿತು. ಅಲ್ಲಿನ ಎಲ್ಲವೂ ಸುಸ್ಪಷ್ಟವಾಗಿದ್ದೂ ವಾಸ್ತವಿಕತೆಯಿಂದ ಕೂಡಿತ್ತು. ಅಲ್ಲಿಯ ಜೀವನವು ಮಾನಸ ಹಂತವನ್ನೂ ಮೀರಿದ ನೆಲೆಯಲ್ಲಿ ಸೃಷ್ಟಿಯಾಗಿರುವದರಿಂದ ಅಲ್ಲಿನ ಬದುಕು ಸಾಮರಸ್ಯದಿಂದ ಕೂಡಿತ್ತು. ಕಲೆ ಮತ್ತು ವೈಚಾರಿಕತೆಗಳಿಂದ ಕೂಡಿದ ಆ ಸ್ತರದಲ್ಲಿ ಬದುಕುತ್ತಿದ್ದ ಜೀವಿಗಳು ಸುಸಂಸ್ಕೃತರೂ, ಸಂಸ್ಕಾರಯುತವಾದ ಅಭಿರುಚಿಗಳನ್ನು ಹೊಂದಿರುವವರೂ, ನಾಗರೀಕತೆಯಿಂದ

ಕೂಡಿದ ಅಭ್ಯಾಸಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವವರೂ ಆಗಿದ್ದರು. ಅಲ್ಲಿನ ಜೀವನವು ಸಹಜ ಸುಂದರವಾಗಿದ್ದು, ಯಾವುದೋ ದುರ್ಘಟನೆಯೊಂದು ಎರಗಿ ಅವರ ಬದುಕನ್ನು ಕೆಡಿಸುವದಿಲ್ಲವೋ ಅಲ್ಲಿಯವರೆಗೂ ಅವರ ಬದುಕು ಹೀಗೆಯೇ ಸುಂದರಯುತವಾಗಿ ಸಾಗುತ್ತಿತ್ತು. ಅವರುಗಳು ಸಂತೋಷ ಮತ್ತು ಸಂತೃಪ್ತತೆಯನ್ನು ಅನುಭವಿಸುತ್ತಿದ್ದರು. ಬೌದ್ಧಿಕವಾಗಿ ಅಭಿವೃದ್ಧಿ ಹೊಂದಿ ಉತ್ತಮ ಅಭಿರುಚಿಗಳನ್ನು ಮೈಗೂಡಿಸಿಕೊಂಡ ಅಲ್ಲಿನ ನಿವಾಸಿಗಳು ಬರಲಿರುವ ನವ್ಯ ಶಕ್ತಿಗಳಿಗೆ, ನವೀನ ವಿಷಯಗಳಿಗೆ, ಭವಿಷ್ಯದ ಜೀವನಕ್ಕೆ ಆಕರ್ಷಿತರಾಗಬಹುದು. ಉದಾಹರಣೆಗೆ ಅವರು ಮಾನಸಿಕವಾಗಿ, ಬೌದ್ಧಿಕವಾಗಿ ಶ್ರೀ ಅರವಿಂದರ ಶಿಷ್ಯರಾಗಬಹುದು. ಆದರೆ ಅವರಿಗೆ ಭೌತಿಕ ರೂಪದಲ್ಲಿ ಪರಿವರ್ತನೆಯಾಗುವ ಅಗತ್ಯತೆಯಿಲ್ಲ. ಒಂದು ವೇಳೆ ಅವರು ಒತ್ತಾಯಪೂರ್ವಕವಾಗಿ ಬದಲಾಗಲು ಪ್ರಯತ್ನಿಸಿದ್ದೇ ಆದಲ್ಲಿ ಅದು ಆ ಸ್ತರದಲ್ಲಿ ಅನ್ಯಾಯ, ಅಕಾಲಿಕತೆ ಮತ್ತು ಅಸ್ವಸ್ಥತೆಗಳನ್ನು ಸೃಷ್ಟಿಸುತ್ತದೆ. ಇದರಿಂದ ಅಲ್ಲಿಯ ಜೀವನದಲ್ಲಿ ಬಹುದೊಡ್ಡ ಗಂಡಾಂತರವು ಸಂಭವಿಸಿ ಅಲ್ಲಿಯ ಬದುಕೇ ನಿಷ್ಪ್ರಯೋಜಕವಾಗಿ ಬಿಡುತ್ತದೆ.

ಇದು ಬಹಳ ಸ್ಪಷ್ಟವಾಗಿದೆ.

ಆದರೆ ಅಪರೂಪವೆಂಬಂತೆ ಅಲ್ಲಿಯ ಕೆಲ ನಿವಾಸಿಗಳು ಸಾಹಸದಲ್ಲಿ ಪಾಲ್ಗೊಂಡು ನವ್ಯ ಶಕ್ತಿಯೊಂದರ ಅವತರಣಿಕೆಗೆ ಕಾರಣವಾಗಿ ತಮ್ಮನ್ನು ತಾವು ಭೂಮಿಯ ಭೌತಿಕತೆಗೆ ಪರಿವರ್ತಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶ್ರೀ ಅರವಿಂದರ ಯೋಗದ ಮೂಲಕ ಅವರು ಈ ಸಾಹಸದಲ್ಲಿ ತೊಡಗಿ ತಮ್ಮ ಸುಂದರವಾದ ಜೀವನದಿಂದ ಕಠಿಣ ಮತ್ತು ನೋವಿನಿಂದ ಕೂಡಿದ ಮರ್ತ್ಯದ ಬದುಕಿಗೆ ಇಳಿಯುವ ತ್ಯಾಗಕ್ಕೆ ಮುಂದಾಗುತ್ತಾರೆ. ಅವರು ಪ್ರಜ್ಞಾಪೂರ್ವಕವಾಗಿಯೇ ಈ ಬಲಿದಾನಕ್ಕೆ ಸಿದ್ಧವಾದರೂ ಅವರ ಸ್ತರವು ಮಾತ್ರ ಇಂತಹ ಸಂದಿಗ್ಧಗಳಿಗೆ ಅನುವು ಮಾಡಿಕೊಡುವುದಿಲ್ಲ. ಅದು ಯಾರನ್ನೂ ಪರಿವರ್ತನೆಗೆ ಸಹಕರಿಸುವದಿಲ್ಲ. ಮತ್ತು ಯಾರನ್ನೂ ಬೇರೊಬ್ಬರನ್ನೂ ಈ ಪರಿವರ್ತನೆಗೆ ಒಳಪಡುವಂತೆ ಪ್ರಭಾವಿಸದಂತೆ ನೋಡಿಕೊಳ್ಳುತ್ತದೆ. ಹಾಗೊಂದು ವೇಳೆ ಈ ಪರಿವರ್ತನೆಯು ಕಾರ್ಯರೂಪಕ್ಕೆ ಬಂದಿದ್ದೇ ಆದಲ್ಲಿ ಅದು ಕೇವಲ ಅನ್ಯಾಯ–ಅಸಮರ್ಪಕತೆಗಳನ್ನು ಸೃಷ್ಟಿಸುವದಲ್ಲದೇ ಅದು ಸಾರ್ವತ್ರಿಕತೆಯ ಚಲನೆಯ ಗತಿಯನ್ನೇ ಬದಲಿಸುತ್ತದೆ. ಇದರ ಆರಂಭವೆಂಬಂತೆ ಅದು ಮೊದಲು ನಮ್ಮ ಭೂಮಿಯ ಚಲನೆಯ ಗತಿಯನ್ನು

ಬದಲಿಸುತ್ತದೆ. ಇನ್ನೂ ಮುಂದುವರಿದು ಅದು ಲೋಕಗಳೆರಡರ ಮಧ್ಯೆ ಸಂಘರ್ಷಗಳನ್ನು ಸೃಷ್ಟಿಸುತ್ತದೆ.

ಅದು ಬಹಳ ಜೀವಂತಿಕೆಯಿಂದ ಕೂಡಿದ್ದ ಲೋಕವಾಗಿತ್ತು. ಅದನ್ನು ಹೇಗೆ ವರ್ಣಿಬೇಕೆಂದು ತಿಳಿಯುತ್ತಿಲ್ಲ. ಅಲ್ಲಿ ನನ್ನ ವರ್ತನೆ ಮತ್ತು ನನ್ನ ಕಾರ್ಯಕ್ಷಮತೆಗಳೆಲ್ಲವೂ ಸಂಪೂರ್ಣವಾಗಿ ಬದಲಾದವು. ಇದರಿಂದಾಗಿ ನನ್ನಲ್ಲಿ ಶಾಂತಿಯ ಅನುಭೂತಿಯೊಂದು ನೆಲೆಸಿ, ನನ್ನ ಸಾಮರ್ಥ್ಯಗಳು ಹೆಚ್ಚಿದವು. ಅಲ್ಲದೆ ಈ ಹಿಂದೆ ನನ್ನಲ್ಲಿದ್ದ ಹಠಮಾರಿತನ, ಅಪ್ರಬುದ್ಧತೆ, ಕೀಳರಿಮೆಗಳೆಲ್ಲವೂ ಮಾಯವಾದವು. ಮತ್ತು ಕಳೆದುಹೋದ ಕುಬ್ಜ ಭಾವನೆಯ ಸ್ಥಾನವನ್ನು ಉನ್ನತ ವಿಚಾರಗಳು ತುಂಬಿಕೊಂಡವು. ಅಲ್ಲಿ ಭೌತಿಕಕ್ಕೆ ಇಳಿಯುವ ಪರಿವರ್ತನೆಯ ನಿಯಮವನ್ನು ಕಡಿಮೆ ಮಾಡಿ ದಿವ್ಯ ಜೀವನಕ್ಕೆ ಆರೋಹಿಸುವ ಪರಿವರ್ತನೆಯ ನಿಯಮವನ್ನು ಹೆಚ್ಚಿಸಲಾಗುತ್ತದೆ. ಮತ್ತು ಮರ್ತ್ಯ ನೆಲೆಯಲ್ಲಿ ನಮಗೆ ಉನ್ನತ ವಿಚಾರಗಳಂತೆ ಕಂಡುಬರುವ ಹರಡುವಿಕೆ, ಸಿದ್ಧತೆ ಅಥವಾ ವಿಷಯ ಮಂಥನಗಳೆಲ್ಲವೂ ಅಲ್ಲಿ ತೀರಾ ಬಾಲಿಶವಾಗಿ ಕಂಡುಬರುತ್ತವೆ.

ಅಲ್ಲಿನ ಸೌಂದರ್ಯದ ದರ್ಶನವು ಅತ್ಯಂತ ಭವ್ಯವಾಗಿಯೂ, ಶಾಂತವಾಗಿಯೂ, ಸಂತೋಷವಾಗಿಯೂ ಇರುತ್ತದೆ. ಅಲ್ಲದೇ ಅದು ಪರಿಪೂರ್ಣವಾಗಿದ್ದು, ದಿವ್ಯ ಪ್ರೇಮದ ಸತ್ಯ ಸ್ವರೂಪವನ್ನು ಪ್ರಚುರಪಡಿಸುತ್ತದೆ. ಭೂಮಿಯಲ್ಲಿರುವಂತೆ ಕ್ಷಮೆಯನ್ನು ಬಯಸುವ ದಿವ್ಯ ಪ್ರೇಮವಾಗಿರದೇ ಅದು ಸರ್ವವನ್ನೂ ತುಂಬಿಕೊಂಡ ದಿವ್ಯ ಪ್ರೇಮವಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/24–25**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

## 25

## ಅಧ್ಯಾಯ – 20
## ಸಮತ್ವ ಮತ್ತು ಜ್ಞಾನ (20/2)

ತತ್ತ್ವಜ್ಞಾನಿಯ ನಿಜವಾದ ಜ್ಞಾನವೆಂದರೆ ವಿಶ್ವದ ಅಸ್ತಿತ್ವದ ನೈಜ ಸ್ವಭಾವದ ಸ್ಪಷ್ಟ ಅರಿವು, ಕಣ್ಣಿಗೆ ಕಾಣುವ ವಸ್ತುಗಳ ನಶ್ವರತೆ, ಅವುಗಳ ನಡುವಿನ ಭೇದದ ಮಿಥ್ಯತ್ವ ಮತ್ತು ಆಂತರಿಕ ಶಾಂತಿ, ಮೌನ, ಜ್ಞಾನ, ಆತ್ಮ–ನಿರ್ಭರತೆ ಇವುಗಳ ಮಹತ್ವದ ಸ್ಪಷ್ಟ ಅರಿವು. ಇದು ತಾತ್ವಿಕ ನಿರಾಸಕ್ತಿ ಅಥವಾ ಉದಾಸೀನತೆ ಏನೋ ನಿಜ; ಇದರಿಂದ ಹಿರಿದಾದ ಶಾಂತಿ–ಸಮಾಧಾನ ಸಿಕ್ಕಬಹುದೇ ಹೊರತು ಉನ್ನತವಾದ ಆಧ್ಯಾತ್ಮಿಕ ದಿವ್ಯ ಆನಂದವು ಸಿಕ್ಕಲಾರದು. ಇದು ಒಂದು ರೀತಿ ವಿಭಕ್ತ ಅಥವಾ ಏಕಾಕಿತನದ ಸ್ವಾತಂತ್ರ್ಯ ಇದ್ದ ಹಾಗೆ. ಲ್ಯುಕ್ರಿಶಿಯಸ್ ಸಂತನ (ಲ್ಯುಕ್ರಿಶಿಯಸ್ ಎಂಬುದು ಓರ್ವ ರೋಮನ್ ತತ್ತ್ವಜ್ಞಾನಿ ಹಾಗೂ ಕವಿಯ ಹೆಸರು) ಸಂತೋಷ ಕೂಡ ಇದೇ ರೀತಿಯದೇ ಆಳವಾದ, ಭೀಕರವಾದ ಸಮುದ್ರದ ಅಲೆಗಳಿಂದ ಹೇಗೋ ಪಾರಾಗಿ, ತಾನೊಬ್ಬನೇ ಎತ್ತರದ ಶಿಖರವನ್ನೇರಿ ನಿಂತು, ಕೆಳಗೆ ಒದ್ದಾಡುವ ಜನರನ್ನು ನೋಡಿ ನಿರಾಸಕ್ತಿ ಭಾವದಿಂದ ಉಸಿರೆಳೆದುಕೊಳ್ಳುವ ರೀತಿ ಇದು. ಇಲ್ಲಿ ಎತ್ತರ ಏರಿದ್ದರೂ ಸಹ ಅವನು ಏಕಾಕಿಯಾಗಿಯೇ ಇರುತ್ತಾನೆ. ಎಲ್ಲರಿಂದ ಬೇರ್ಪಟ್ಟು ಭಿನ್ನನಾಗಿಯೇ ಇರುತ್ತಾನೆ. ಗೀತೆಯು ಇಂಥ ನಿರಾಸಕ್ತ ಮನಃಸ್ಥಿತಿಯ ತಾತ್ವಿಕ ಉದ್ದೇಶವನ್ನೇನೋ ಒಪ್ಪಿಕೊಳ್ಳುತ್ತದೆಯಾದರೂ ಅದನ್ನು ಆರಂಭಿಕ ಚಲನೆ, ಆರಂಭಿಕ ನಡೆ ಎಂದೇ ಹೇಳುತ್ತದೆ. ಗೀತೆಯು ಹೇಳುವ "ಅನಾಸಕ್ತಿ" ಯೋಗವನ್ನು – ಅನಾಸಕ್ತಿ ಎಂಬುದು ಸರಿಯಾದ ಶಬ್ದವಾಗಲಿಕ್ಕಿಲ್ಲವಾದರೂ, ಶಬ್ದದ ಕೊರತೆಯಿಂದ ಅದೇ ಶಬ್ದ ಬಳಸಲಾಗಿದೆ – ಇಂಥ ತಾತ್ವಿಕ, ತತ್ವ ಜ್ಞಾನಿಯ ಏಕಾಕಿತನ ಸ್ವಾತಂತ್ರ್ಯದ ಜೊತೆ ಹೋಲಿಸಲಿಕ್ಕಾಗದು – ಅದು ಸಂಪೂರ್ಣ ಭಿನ್ನವಾಗಿದೆ. ಅಂಥ ಅನಾಸಕ್ತಿಯನ್ನು ಹೀಗೆ ವರ್ಣಿಸಬಹುದು, ಭಗವಂತನು ವಿಶ್ವೋತ್ತರ ಸ್ಥಿತಿಯಲ್ಲಿ "ಉದಾಸೀನವತ್" ಕುಳಿತಿರುವುದು ನಿಜ, ಅವನು ಯಾವ ಕರ್ಮಗಳನ್ನೂ, ಕ್ರಿಯೆಗಳನ್ನೂ ಮಾಡಬೇಕಿಲ್ಲವೆಂಬುದೂ ನಿಜ, ಜಗತ್ತಿನಲ್ಲಿ ಅವನಿಗೆ ಬೇಕಾದುದು "ಪ್ರಾಪ್ಯ"ವೆಂಬುದೇನೂ ಇಲ್ಲ, ಆದರೂ ಅವನು ನಿರಂತರ

ಕಾರ್ಯ ಮಾಡುತ್ತಲೇ ಇರುತ್ತಾನೆ, ಪ್ರಪಂಚದ ಸಕಲ ಜೀವಿಗಳ ಕಾರ್ಯದಲ್ಲಿ ಸಹಾಯ ಮಾಡುತ್ತ ಮಾರ್ಗದರ್ಶನ ಮಾಡುತ್ತ, ಅವರಿಗೆಲ್ಲ ಆಧಾರವಾಗಿ ನಿಂತಿರುತ್ತಾನೆ. ಇಂಥ ಸಮತೆಯು ಎಲ್ಲ ಜೀವರಾಶಿಗಳ ಜೊತೆ ಏಕತೆಯನ್ನು ಅನುಭವಿಸಿದಾಗ ಮಾತ್ರ ಬರುತ್ತದೆ. ತಾತ್ವಿಕ ಸಮತೆಯಲ್ಲಿ ಏನು ಕೊರತೆಯಿದೆಯೋ ಅದನ್ನು ಇಂಥ ಸಮತೆ ತುಂಬುತ್ತದೆ. ಏಕೆಂದರೆ ಅಂಥ ದೈವೀ ಉದಾಸೀನತೆಯಲ್ಲಿ ಆತ್ಮವೆಂದರೆ ಶಾಂತಿಯ ಆತ್ಮವೇ, ಅಲ್ಲಿ ಶಾಂತಿಯೂ ಇದೆ, ಪ್ರೀತಿಯೂ ಇದೆ; ಶಾಂತ ಪ್ರೀತಿಯೇ ದೈವೀ ಅನಾಸಕ್ತ ಯೋಗದ ಆತ್ಮವಾಗಿದೆ. ಇದು ಎಲ್ಲ ಜೀವರಾಶಿಗಳನ್ನು ವಸ್ತುಗಳನ್ನು, ಎಲ್ಲವನ್ನೂ ಭಗವಂತನಲ್ಲಿಯೇ ಕಾಣುತ್ತದೆ. ಅದು ಸಮಸ್ತ ಅಸ್ತಿತ್ವದ ಜೊತೆ ಒಂದಾಗಿ ಏಕೀಭವಿಸಿರುತ್ತದೆ, ಹೀಗಾಗಿ ಸಕಲ ಜೀವಿಗಳ ಮೇಲೆ ಅಲ್ಲಿ ಪರಮ ಕರುಣೆ, ಪ್ರೀತಿ ತುಂಬಿರುತ್ತದೆ. ಯಾವುದು ಒಳ್ಳೆಯದೋ, ಚೆನ್ನಾಗಿದೆಯೋ, ಸಂತೋಷ ನೀಡುವುದೋ ಅದನ್ನು ಮಾತ್ರವಲ್ಲ ಎಲ್ಲವನ್ನೂ – ಅಶೇಷೀಣ – ಪ್ರೀತಿಸುತ್ತದೆ. ಯಾರೇ ಆಗಿರಲಿ, ಎಷ್ಟೇ ಆಗಿರಲಿ, ದುಷ್ಟ, ಭ್ರಷ್ಟ, ಪತಿತ, ಅಪರಾಧಿ ಏನೇ ಆಗಿರಲಿ ಎಲ್ಲರನ್ನೂ, ಎಲ್ಲವನ್ನೂ ಬಿಡದೇ ಪ್ರೀತಿಸುತ್ತದೆ. ಯಾರನ್ನೂ, ಯಾವುದನ್ನೂ ಬಿಡುವುದಿಲ್ಲ. ಈ ಸಂಪೂರ್ಣ ಆಧ್ಯಾತ್ಮಿಕ ಕರುಣೆಗೆ, ಆಧ್ಯಾತ್ಮಿಕ ಏಕತೆಗೆ ಯಾರೂ ಹೊರತಲ್ಲ, ಹೊರಗಲ್ಲ, ಇಲ್ಲಿ ಕೇವಲ ದ್ವೇಷ, ಕ್ರೋಧ, ಘೃಣಾ, ತ್ವೇಷಗಳಿಗೆ ಅವಕಾಶವೇ ಇಲ್ಲ; ಏಕಾಂತತೆ, ಏಕಾಕಿತನ, ನಿರಾಶೆ, ಉಚ್ಚ–ನೀಚ ಭಾವ, ಹೆಮ್ಮೆ, ಕೀಳರಿಮೆಗಳಿಗೆ ಸ್ಥಾನವಿಲ್ಲ. ಹೋರಾಡುವ, ಪ್ರಯತ್ನ ಮಾಡುವ ಅಜ್ಞಾನದ ಮನಸ್ಸಿನ ಬಗ್ಗೆ ಇಲ್ಲಿ ಮರುಕವಿದೆ, ಕರುಣೆ ಇದೆ; ಅದರ ಅಜ್ಞಾನದ ಮೇಲೆ ಬೆಳಕು, ಶಕ್ತಿ, ಆನಂದಗಳನ್ನು ಚೆಲ್ಲಬೇಕೆಂಬ ದಿವ್ಯ ಸಂಕಲ್ಪವಿದೆ, ಸಾಮಾನ್ಯ ಮಾನವನ ಮೇಲೆ ಇವೆಲ್ಲವನ್ನೂ ಸುರಿಯಬೇಕೆಂಬ ದಿವ್ಯ ಇಚ್ಛೆ ಇದೆ. ಅಂತರಂಗದಲ್ಲಿರುವ ದೈವೀ ಅಂಶವಾಗಿರುವ ಆತ್ಮದಲ್ಲಿ ಆರಾಧನೆ, ಭಕ್ತಿ, ಪ್ರೇಮಗಳನ್ನೂ ತುಂಬಿಸುವ ದಿವ್ಯ ಬಯಕೆ ಇದೆ. ಏಕೆಂದರೆ, "ಯಾರೇ ಇರಲಿ, ಚಾಂಡಾಲನೇ ಇರಲಿ, ಪತಿತ ಸ್ತ್ರೀ ವೇಶ್ಯೆಯೇ ಇರಲಿ, ಸಾಧು–ಸಂತ ಯಾರೇ ಇರಲಿ ಅವರೊಳಗಿನ ಭಗವಂತನೇ ಕೂಡಿ ಕೂಗಿ ಹೇಳುತ್ತಾನೆ 'ನಾನಿಲ್ಲಿ ಇದ್ದೇನೆ', ಯಾರು ನನ್ನನ್ನು ಎಲ್ಲ ಜೀವಿಗಳಲ್ಲೂ ಕಂಡು ಪ್ರೀತಿಸುತ್ತಾರೋ" ಈ ರೀತಿಯ ಅಸಾಮಾನ್ಯ ಮಾತು ನಮಗೆ ಗೀತೆಯಲ್ಲಿ ಸಿಕ್ಕುತ್ತದೆ. ಇದಕ್ಕಿಂತಲೂ ಅಧಿಕ ಸಾಮರ್ಥ್ಯವುಳ್ಳ ಶಬ್ದಗಳಲ್ಲಿ ಹೇಳಿದ ಯಾವ ವಾಕ್ಯಗಳೂ ಬೇರೆ ಯಾವ ಆಧ್ಯಾತ್ಮಿಕ ಗ್ರಂಥದಲ್ಲೂ ಸಿಗುವುದಿಲ್ಲ.

ಎಲ್ಲವನ್ನೂ ತ್ಯಾಗ ಮಾಡುವುದು ಒಂದು ರೀತಿಯಲ್ಲಿ ಧಾರ್ಮಿಕ ಸಮತೆಯೇ ಸರಿ; ಎಲ್ಲವನ್ನೂ ದೈವೀ ಸಂಕಲ್ಪಕ್ಕೆ ಒಪ್ಪಿಸಿ ಬಿಡುವುದು, ಸಮಾಧಾನದಿಂದ, ತಾಳ್ಮೆಯಿಂದ ಶಿಲುಬೆಗೇರುವುದು, ಎಲ್ಲವನ್ನೂ ಭಗವಂತನಿಗೆ ಒಪ್ಪಿಸಿ ಸಹಿಸಿಕೊಳ್ಳುವುದು ಎಲ್ಲವೂ ಒಂದೇ ವರ್ಗದ ಸಮತೆಗಳೇ ಗೀತೆಯಲ್ಲಿ ಈ ಅಂಶವು ತನ್ನ ಇಡೀ ಸತ್ತೆಯನ್ನು ಭಗವಂತನಿಗೆ ಸಮಗ್ರವಾಗಿ ಸಮರ್ಪಿಸಿ ಬಿಡುವ ರೂಪ ತಾಳುತ್ತದೆ. ಅದೇನೂ ನಿಷ್ಕ್ರಿಯವಾದ, ಪ್ರತಿಕ್ರಿಯಾರಹಿತವಾದ ಸಮರ್ಪಣೆಯಲ್ಲ, ಬದಲಾಗಿ ಗೀತೆಯು ಕ್ರಿಯಾಶೀಲವಾದ ಸಮರ್ಪಣೆಯನ್ನು ಹೇಳುತ್ತದೆ. ಎಲ್ಲದರಲ್ಲೂ, ಎಲ್ಲ ಸಂಗತಿಗಳಲ್ಲೂ ಭಗವಂತನ ಇಚ್ಛೆಯನ್ನೇ ಕಾಣುತ್ತ ಅದನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳುವುದು ಮಾತ್ರವಲ್ಲ. ಅದಕ್ಕಿಂತ ಹೆಚ್ಚಾಗಿ ಸರ್ವ ಕರ್ಮಾಧ್ಯಕ್ಷನಾದ ಭಗವಂತನ ಉಪಕರಣ ಮಾತ್ರವಾಗಲು ತನ್ನ ವೈಯಕ್ತಿಕ ಇಚ್ಛೆಯನ್ನು ತ್ಯಜಿಸುವುದು ಸಮರ್ಪಣ ಎನಿಸುತ್ತದೆ; ಇದು ಕೇವಲ ಭಗವಂತನ ಸೇವಕನಾಗಿ ಕಾರ್ಯ ಮಾಡುವ ಪರಿಕಲ್ಪನೆಯಲ್ಲ, ಅದಕ್ಕಿಂತ ಹೆಚ್ಚಾಗಿ ಕನಿಷ್ಠ ಪಕ್ಷ ತನ್ನ ಸಂಪೂರ್ಣ ಪ್ರಜ್ಞೆಯನ್ನು ಸಮರ್ಪಿಸುವುದು ಹಾಗೂ ಜೊತೆಗೆ ಎಲ್ಲ ಕಾರ್ಯಗಳನ್ನು, ಚಟುವಟಿಕೆಗಳನ್ನು ಈಶ್ವರ ಪ್ರತಿ ಸಮರ್ಪಣೆ ಮಾಡುವುದು, ಇದರಿಂದ ಈಶ್ವರನ ಜೊತೆ ಒಂದಾಗುವ, ತನ್ನ ನಿರ್ವೈಯಕ್ತಿಕವಾದ ಸ್ವಭಾವವನ್ನು ಕೇವಲ ಈಶ್ವರನ ಉಪಕರಣವನ್ನಾಗಿ ಮಾಡುವ ಅಪೂರ್ವ ಪರಿಕಲ್ಪನೆ ಇದೆ. ಪರಿಣಾಮ ಅಥವಾ ಪ್ರತಿಫಲ ರೂಪವಾಗಿ ಏನೇ ಬರಲಿ, ಒಳ್ಳೆಯದೇ ಆಗಲಿ, ಕೆಟ್ಟದೇ ಆಗಲಿ, ಶುಭಾಶುಭ, ಮಂಗಳ ಅಮಂಗಳ, ತೃಪ್ತಿಕರ–ಅತೃಪ್ತಿಕರ ಏನೇ ಆಗಲಿ ಎಲ್ಲವನ್ನೂ ಸಮಾನ ಭಾವದಿಂದ ಕರ್ಮಾಧ್ಯಕ್ಷನಾದ ಈಶ್ವರನ ಕೊಡುಗೆ ಎಂದು ತೃಪ್ತಿಯಿಂದ ಸ್ವೀಕರಿಸುವ, ಇದರಿಂದಾಗಿ ದುಃಖ, ಕಷ್ಟ ಏನೇ ಬರಲಿ ಅವುಗಳ ಬಾಧೆಯಾಗುವುದಿಲ್ಲ, ಅವುಗಳನ್ನು ತೊಡೆದು ಹಾಕುವ ಸಾಮರ್ಥ್ಯ ಬರುವುದು ಹಾಗೂ ಇದರಿಂದ ಭಾವನಾತ್ಮಕ ಮನಸ್ಸಿನ ಪರಿಪೂರ್ಣ ಸಮತ್ವ ಸಿದ್ಧಿಸುವುದು, ಉಪಕರಣದಲ್ಲಿ ಯಾವುದೇ ವಿಧದ ವೈಯಕ್ತಿಕ ಇಚ್ಛೆ ಇರುವುದಿಲ್ಲ, ಎಲ್ಲವೂ ಆ ಸರ್ವಜ್ಞ – ಪೂರ್ವ ಜ್ಞಾನದಲ್ಲಿ, ಸರ್ವಶಕ್ತ ಪರಿಣಾಮಕಾರಿಯಾದ ಸಾಮರ್ಥ್ಯದಲ್ಲಿ, ಆ ಈಶ್ವರನ ಸಂಕಲ್ಪದಂತೆ ತಾನಾಗಿ ನಡೆದುಕೊಂಡು ಹೋಗುವುದು; ಮಾನವನ ವೈಯಕ್ತಿಕ ಅಹಂ ಮಧ್ಯೆ ಪ್ರವೇಶಿಸಿ ಅದನ್ನು ಬದಲಿಸುವ ಪ್ರಶ್ನೆಯೇ ಇರುವುದಿಲ್ಲ, ಆದ್ದರಿಂದ ಆತ್ಯಂತಿಕ ಮನೋಭಾವವೇನೆಂದರೆ, ಹನ್ನೊಂದನೆಯ ಅಧ್ಯಾಯದಲ್ಲಿ ಕೃಷ್ಣನು ಅರ್ಜುನನಿಗೆ ಹೇಳುವಂತೆ "ನಿಮಿತ್ತ

ಮಾತ್ರಂ ಭವ ಸವ್ಯಸಾಚಿನ್" (11.33) ವಾಕ್ಯವೇ ಪರಮ ಆದೇಶವಾಗಿದೆ. ಈ ಮನೋಭಾವವೇ ಮುಂದೆ ವೈಯಕ್ತಿಕ ಇಚ್ಛೆಯನ್ನೂ ಭಗವಂತನ ಸಂಕಲ್ಪಕ್ಕೆ ಜೋಡಿಸಿ ಒಂದಾಗಿಸುವುದು, ಜ್ಞಾನವೃದ್ಧಿಯಾದಂತೆ ದೈವೀ ಶಕ್ತಿಯ ಮತ್ತು ದೈವೀ ಜ್ಞಾನಕ್ಕೆ ಮಾನವನ ಕಾರ್ಯವು ಕೇವಲ ಪರಿಪೂರ್ಣವಾದ ಉಪಕರಣದಂತೆ ಪ್ರತಿಕ್ರಿಯೆ ನೀಡುವುದು. ಪರಿಪೂರ್ಣವಾದ, ಆತ್ಮ ಸಮರ್ಪಣೆ, ಸಮಗ್ರ ಸಮತ್ವ, ದೈವೀ ಪ್ರಕಾಶ ಮತ್ತು ಶಕ್ತಿಗಳಿಗೆ ಕ್ರಿಯಾಶೀಲವಾದ ಉಪಕರಣವಾಗಿ ರೂಪಗೊಳ್ಳುವ ಮನೋಭಾವ ಪ್ರತಿಕ್ರಿಯಾರಹಿತ ಸಹಭಾಗಿತ್ವ, ಪರಮಾತ್ಮನ ಸಂಕಲ್ಪವನ್ನು ನೆರವೇರಿಸುವ ಸಮರ್ಥ, ಶಕ್ತಿಶಾಲಿ ಸಾಧನ ಇವುಗಳೇ ವಿಶ್ವಾತ್ಮಕ, ವಿಶ್ವಾತೀತ ಹಾಗೂ ವೈಯಕ್ತಿಕನೂ ಆಗಿರುವ ಪರಮಾತ್ಮನ ಜೊತೆ ಪರಮೋಚ್ಚ ಏಕತೆಯನ್ನು ಸಾಧಿಸುವ ಉಪಾಯಗಳಾಗಿವೆ.

ನಮ್ಮ ಜೊತೆ ಬೇರೆಯವರು ವ್ಯವಹರಿಸುವುದರಲ್ಲಿ, ಕಾರ್ಯದಲ್ಲಿ ಕೂಡ ಸಾಪೇಕ್ಷ ಸಮತೆ ಇದ್ದೇ ಇರುತ್ತದೆ. ಬೇರೆಯವರು ಏನೇ ಮಾಡಲಿ, ಅದರಿಂದ ನಮ್ಮ ಅಂತರಂಗದಲ್ಲಿನ ಏಕತೆ, ಪ್ರೀತಿ, ಅನುಕಂಪ ಇವಾವೂ ಬದಲಾಗುವುದಿಲ್ಲ. ಏಕೆಂದರೆ ಈ ಗುಣಗಳು ಇಲ್ಲಿ ಎಲ್ಲರಲ್ಲೂ ಅದ್ವಯವಾಗಿರುವ ಆತ್ಮ, ಎಲ್ಲರಲ್ಲೂ ಎಲ್ಲದರಲ್ಲೂ ಇರುವ ಪರಮಾತ್ಮನ ಮೇಲೆ ಆಧಾರಿತವಾಗಿರುತ್ತವೆ. ಆದರೆ ಎಲ್ಲವನ್ನೂ ಬಿಟ್ಟುಕೊಡುವ ಅಥವಾ ತ್ಯಾಗ ಮಾಡುವ ಸಹನೆ ಹಾಗೂ ಬೇರೆಯವರ ಕೆಲಸ ಕಾರ್ಯಗಳಿಗೆ ಅನಾಯಾಸವಾಗಿ ಶರಣಾಗಿ ಬಿಡುವ ಪ್ರವೃತ್ತಿ, ತಟಸ್ಥ ಧೋರಣೆಯ ಅಪ್ರತಿರೋಧ ಪ್ರದರ್ಶನ ಇವುಗಳಿಂದ ಉಪಯೋಗವಿಲ್ಲ, ಇವು ನಾವು ಮಾಡಬೇಕಾದ ಕೆಲಸದ ಭಾಗಗಳಲ್ಲ. ಏಕೆಂದರೆ, ದೈವೀ ಮತ್ತು ವಿಶ್ವ ವಿಶ್ವಾತ್ಮಕ ಸಂಕಲ್ಪಕ್ಕೆ ನಿರಂತರ ಉಪಕರಣಾತ್ಮಕ ಧೋರಣೆಯ ವಿಧೇಯತನವು ಇದರಿಂದ ಸಿದ್ಧಿಸುವುದಿಲ್ಲ. ಏಕೆಂದರೆ ಇಂಥ ವಿಧೇಯ ಸಮರ್ಪಣೆಯು ಅನೇಕ ಪ್ರತಿರೋಧಕ ಶಕ್ತಿಗಳ ಮಧ್ಯೆ ಹಾಯ್ದು ಬರಬೇಕಾಗುತ್ತದೆ; ಅಂಥ ಪ್ರತಿರೋಧಕ ಶಕ್ತಿಗಳು ದೊಡ್ಡ ಯದ್ಧವನ್ನೇ ಬೇಡುತ್ತವೆ, ತಮ್ಮ ತಮ್ಮ ಅಹಂಕಾರದ ತೃಪ್ತಿಗಾಗಿ ಅವು ಮಾಡುವ ಸಂಘರ್ಷವನ್ನು ತಡೆದು, ವಿರೋಧಿಸಿ ನಿಲ್ಲಬೇಕಾಗುತ್ತದೆ. ಅಂತೆಯೇ ಅರ್ಜುನನಿಗೆ ದುಷ್ಟ ಶಕ್ತಿಗಳನ್ನು ಮೆಟ್ಟಿ ನಿಲ್ಲಲು, ಅವುಗಳ ಜಯ ಸಾಧಿಸಲು ಶ್ರೀಕೃಷ್ಣ ಆದೇಶ ನೀಡುತ್ತಾನೆ. ಆದರೆ ಇಂಥ ಯುದ್ಧವು ದ್ವೇಷದಿಂದಾಗಲಿ, ಸೇಡಿನಿಂದಾಗಲಿ, ಯಾವುದೇ ವ್ಯಕ್ತಿಗತ ಲಾಭದಿಂದಾಗಲಿ, ವ್ಯಕ್ತಿಗತ ಮತ್ಸರ, ತ್ವೇಷಗಳಿಂದಾಗಲಿ ಪ್ರೇರಿತವಾಗಿರಬಾರದು. ಏಕೆಂದರೆ ಜೀವನ್ಮುಕ್ತನಾದ ವ್ಯಕ್ತಿಗೆ

(ಸಾಧಕನಿಗೆ) ಇಂಥ ಭಾವಗಳಿರಬಾರದು. ಅಂಥವನು ಲೋಕ ಸಂಗ್ರಹಕ್ಕಾಗಿ ವೈಯಕ್ತಿಕತೆ, ಸ್ವಾರ್ಥ ಭಾವ ಎಲ್ಲವನ್ನೂ ತೊರೆದು, ಜನರನ್ನೂ ಕೂಡ ಪರಮಾತ್ಮನೆಡೆಗೆ ಕರೆದೊಯ್ಯಬಹುದಾದ ದಿವ್ಯ ಮಾರ್ಗದಲ್ಲಿ ನಡೆಯುವಂತೆ ಮಾಡಲೆತ್ನಿಸುವ ದೈವೀ ಕಾರ್ಯವು ಹುಟ್ಟುವುದೇ ಪರಮಾತ್ಮನ ಜೊತೆ, ವಿಶ್ವಾತ್ಮಕನಾದ ವಿರಾಟ ಪುರುಷನ ಜೊತೆ ಒಂದಾಗುವ ದೃಢ ಭಾವದಿಂದ. ಇದೇ ನಿಜವಾಗಿ ವಿಶ್ವಾತ್ಮಕ ಕಾರ್ಯದ ವ್ಯಾಖ್ಯಾನ ಅಥವಾ ವಿವರಣೆಯಾಗಿದೆ. ಇದರಿಂದ ಪ್ರಪಂಚದ ಸಮಗ್ರ ಜೀವಿಗಳ ಜೊತೆ ಒಂದಾಗುವ, ನಮಗೆ ವಿರೋಧ ಮಾಡುವ ವೈರಿಗಳ, ಶತ್ರುಗಳ ಜೊತೆ ಕೂಡ ಒಂದಾಗುವ ಕ್ರಿಯೆಯಲ್ಲಿ ಯಾವ ಬಾಧೆಯೂ ಬರುವುದಿಲ್ಲ. ಏಕೆಂದರೆ ಅವರ ಗುರಿಯು ಪರಮಾತ್ಮನ ಇಚ್ಛಾ ಶಕ್ತಿಯ ಜೊತೆ ಸೇರಿಕೊಂಡು ಏಕೀಕೃತಗೊಂಡು ಅದೇ ಆಗಿ ಬಿಟ್ಟಿರುತ್ತದೆ. ದೈವೀ ಸಂಕಲ್ಪ ಅಥವಾ ಇಚ್ಛಾ ಶಕ್ತಿಯೆಂಬುದೇ ನಮ್ಮೆಲ್ಲರ, ಎಲ್ಲ ಜೀವರಾಶಿಗಳ ರಹಸ್ಯ ಇಚ್ಛಾ ಶಕ್ತಿಯಾಗಿದೆ. ಯಾರ ಬಾಹ್ಯ ಮನಸ್ಸು ಅಜ್ಞಾನ ಮತ್ತು ಅಹಂಭಾವದ ಮೂಲಕ ದಾರಿತಪ್ಪಿ ಮನಬಂದಂತೆ ತಿರುಗಾಡುತ್ತ ಹೋದರೂ ಸಹ ಅವರ ಅಂತಿಮ ಗುರಿ ಅದೇ ಆಗಿರುತ್ತದೆ. ಆದ್ದರಿಂದ ಅಂಥವರನ್ನು ಎದುರಿಸಿ ಸೋಲಿಸುವುದೇ ನಿಜವಾಗಿ ಬಾಹ್ಯ ಸೇವೆಯಾಗಿದೆ (ಅವರಿಗೂ, ಪರಮಾತ್ಮನಿಗೂ ಸಲ್ಲುವ ಬಾಹ್ಯ ಸೇವೆಯಾಗಿದೆ). ಇಂಥ ವಿಶಾಲವಾದ ದೃಷ್ಟಿ ಕೋನದ ಮೂಲಕವೇ ಗೀತೆಯು ಸಂಕುಚಿತತೆಯನ್ನು ದೂರ ತಳ್ಳುತ್ತದೆ, ತನ್ನ ಸಿದ್ಧಾಂತವು ಸಂಕುಚಿತಗೊಳ್ಳದಂತೆ ತಡೆಯುತ್ತದೆ; ಅನ್ಯಥಾ ಅದರ ಸಮತ್ವದ ಸಿದ್ಧಾಂತವು ವ್ಯವಹಾರದಿಂದ ದೂರಾಗಿ, ಎಲ್ಲ ಸಂಬಂಧಗಳಲ್ಲಿನ ಪ್ರೀತಿಯನ್ನು ಕಡಿತಗೊಳಿಸಿ, ದುರ್ಬಲಗೊಳಿಸಿ, ಜ್ಞಾನಹೀನಗೊಳಿಸಿ, ಸುಧಾರಿಸಲಾಗದಷ್ಟು ಪರಿಸ್ಥಿತಿಯನ್ನು ಕೆಡಿಸಬಹುದಿತ್ತು. ಎಲ್ಲದರ ಹಾಗೂ ಎಲ್ಲರ ಜೊತೆ ಆಧ್ಯಾತ್ಮಿಕ ಏಕತೆ, ಹೃದಯದಲ್ಲಿ ವಿಶ್ವಾತ್ಮಕವಾದ ಪ್ರೇಮ, ಅನುಕಂಪ, ಕರುಣೆ, ಜೊತೆಗೆ ಯಾರೇ ಇರಲಿ ತಮ ತಮಗೆ ಸಾಧ್ಯವಾದ ರೀತಿಯಲ್ಲಿ ಅದನ್ನು ಅನುಷ್ಠಾನಗೊಳಿಸುವ ಸ್ವಾತಂತ್ರ್ಯ, ನಿರ್ದಿಷ್ಟ ವ್ಯಕ್ತಿಗಳ ಹಿತ ಅಥವಾ ಅಹಿತ ದೃಷ್ಟಿಯಿಂದಾಗಲಿ, ಭಗವಂತನ ಯೋಜನೆಯನ್ನು ಅತಿಕ್ರಮಿಸದೇ ಅದಕ್ಕನುಗುಣವಾಗಿ ಕಾರ್ಯ ಮಾಡುವ ದೈವೀ ಉದ್ದೇಶಕ್ಕೆ ತಕ್ಕಂತೆ ಪ್ರತಿಯೊಬ್ಬ ವ್ಯಕ್ತಿಯ ಕಲ್ಯಾಣ ಹಾಗೂ ಮೋಕ್ಷ ಸಾಧನೆಗೆ ಸಮಗ್ರ ಮನುಕುಲದ ಒಳಿತಿಗಾಗಿ ಶ್ರಮಿಸುವ ದಾರಿಯನ್ನು ಗೀತೆ ಬೋಧಿಸುತ್ತದೆ.

ಭಗವಂತನ ಜೊತೆ ಏಕತೆ, ಸಕಲ ಜೀವರಾಶಿಗಳ ಜೊತೆ ಏಕತೆ, ಎಲ್ಲೆಲ್ಲೂ ಇರುವ ಶಾಶ್ವತವಾದ ದೈವಿಕ ಏಕತೆಯ ಸಾಕ್ಷಾತ್ಕಾರ ಹಾಗೂ ಸಕಲರನ್ನೂ ಈ ಏಕತೆಯೆಡೆಗೆ ಸೆಳೆದು ತರುವುದೇ ಜೀವನದ ನಿಜವಾದ ನಿಯಮವೆಂದು ಗೀತೆ ಹೇಳುತ್ತದೆ. ಯಾರು ಯಾರಿಗಿಂತಲೂ ಶ್ರೇಷ್ಠರಲ್ಲ ಮತ್ತು ಇದಕ್ಕಿಂತ ಆಳವಾದ ಬೋಧನೆಯೂ ಇಲ್ಲ. ತಾನು ಸ್ವತಃ ಮುಕ್ತನಾಗಿ, ಈ ಏಕತೆಯಲ್ಲಿ ಜೀವಿಸುತ್ತ, ಈ ಏಕತೆಯೆಡೆಗೆ ಕರೆದೊಯ್ಯುವ ದಾರಿಯಲ್ಲಿ ಜನರನ್ನು ಪ್ರೇರಿಸುತ್ತ, ಸಹಾಯ ಮಾಡುತ್ತ ಹಾಗೂ ಅದೇ ಕಾಲಕ್ಕೆ ಎಲ್ಲ ಕರ್ತವ್ಯ ಕರ್ಮಗಳನ್ನು ಪರಮಾತ್ಮನ ಸಲುವಾಗಿ ಮಾಡುತ್ತ, ತುಂಬು ಸಂತೋಷದಿಂದ ಜನರಿಗೂ, ಸಕಲ ಜೀವಿಗಳಿಗೂ ಈ ದಾರಿಯಲ್ಲಿ ನಡೆಯಲು ಸಹಾಯ ಮಾಡುತ್ತ ಬದುಕುವುದೇ ಹಿರಿದಾದ ಆದರ್ಶ; ಇದಕ್ಕಿಂತ ಹೆಚ್ಚಿನದಾದ, ಉದಾತ್ತವಾದ ಕರ್ಮ ಯೋಗವನ್ನು ಯಾರೂ ಹೇಳಲಾರರು. ಕೃತ್ಸ್ನ ಕರ್ಮಕೃತ್ ಸರ್ವಕರ್ಮಾಣಿ ಜೋಷಯನ್ (4.18) ಇಂಥ ಅಪೂರ್ವವಾದ ಏಕತೆ ಮತ್ತು ಸ್ವಾತಂತ್ರ್ಯವೇ ನಮ್ಮ ಮಾನವ ಧರ್ಮದ ಮೂಲ ಗುರಿಯಾಗಿದೆ. ಇದೇ ನಮ್ಮ ಅಸ್ತಿತ್ವದ ಮೂಲ ಸಂಕಲ್ಪವೂ ಆಗಿದೆ. ನಿಜವಾದ ಸುಖ ಸಂತೋಷ ಬೇಕಾಗಿದ್ದರೆ ಮಾನವ ಕುಲವು ಈ ಧ್ಯೇಯದ ಕಡೆಗೆ ಸಾಗಬೇಕು ಮಾನವ ಜನಾಂಗವು ತನ್ನ ನಿರರ್ಥಕ, ಸುಖಕ್ಕಾಗಿ ಮಾಡುವ ವ್ಯರ್ಥ ಪ್ರಯತ್ನವನ್ನು ಬಿಟ್ಟು ಈ ಕಡೆಗೆ ಬರಬೇಕು. ಮಾನವನು ತನ್ನ ಕಣ್ಣು ತೆರೆದು, ಹೃದಯ ಬಿಚ್ಚಿ ಭಗವಂತನನ್ನು ತನ್ನಲ್ಲಿ, ಎಲ್ಲರಲ್ಲಿ ಸಕಲ ಜೀವಿಗಳಲ್ಲಿ, ಸುತ್ತಲೂ ಎಲ್ಲೆಲ್ಲೂ ನೋಡಲು ಸಾಧ್ಯವಾದರೆ – "ಸರ್ವೇಷು, ಸರ್ವತ್ರ" ಅದೇ ಪರಿಪೂರ್ಣತೆ. ಎಲ್ಲರೂ ಆ ಭಗವಂತನಲ್ಲಿಯೇ ಜೀವಿಸುತ್ತಿದ್ದಾರೆ, ನಮ್ಮಲ್ಲಿ ಸದ್ಯಕ್ಕೆ ಕಾಣುವ ಭೇದ ಸ್ವಭಾವವು ನಿಮ್ನ ಸ್ತರದ್ದಾಗಿದ್ದು, ಅದೊಂದು ಕೇವಲ ಸೆರೆಮನೆಯ ಗೋಡೆಯಂತಿದೆ. ಅದನ್ನು ಭೇದಿಸಬೇಕು, ಒಡೆದು ಹಾಕಬೇಕು. ಕನಿಷ್ಠ ಪಕ್ಷ ಅಜ್ಞಾನದ ಶೈಶವಾವಸ್ಥೆಯನ್ನು ಮೀರಿ ಬೆಳೆಯಲು ಸನ್ನದ್ಧರಾಗಬೇಕು ಅಂದಾಗ ಮಾತ್ರ ಅವನಲ್ಲಿ (ಅವರಲ್ಲಿ/ಎಲ್ಲರಲ್ಲಿ) ಪ್ರೌಢ ಭಾವ ಬಲಿಯಬಲ್ಲದು. ಅವನ ಆತ್ಮ ಮುಕ್ತಿಯನ್ನು ಪಡೆಯಬಲ್ಲದು. ಮೇಲೆ, ಊರ್ಧ್ವದಲ್ಲಿರುವ ಭಗವಂತನ ಜೊತೆ ಒಂದಾಗುವುದು, ಮಾನವನಲ್ಲಿರುವ ಹಾಗೂ ವಿಶ್ವದಲ್ಲಿ ವಿಶ್ವಾತ್ಮಕನಾಗಿ ಇರುವ ಭಗವಂತನ ಜೊತೆ ತಾದಾತ್ಮ್ಯ ಹೊಂದುವುದು ನಿಜವಾದ ಮುಕ್ತಿಯ ಅಥವಾ ಮೋಕ್ಷದ ಅರ್ಥವಾಗಿದೆ. ಇದೇ ಪರಿಪೂರ್ಣತೆಯ ರಹಸ್ಯಕೂಡ ಆಗಿದೆ.

(ಸಶೇಷ)

## ಶ್ರೀ ಅರವಿಂದರ
# ‘ಪ್ರೇಮ ಮತ್ತು ಮೃತ್ಯು’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

## ದೃಷ್ಟಿ 4
### ಸ್ತರ – (ಮೃತ್ಯುಸದನ)
### ಪ್ರಭೃತಿ – ಯಮ

ಪ್ರವಹಿಸುತಿಹ ಪುಣ್ಯಪುರುಷರ ಪಾಳಯದಿಂದ ಪ್ರಮಾದವೇ ಪ್ರಥಮವಿಹ
ಪ್ರಾಂಗಣದೆಡೆಗೆ ಪಾದವಿರಿಸಿದವನ,
ಮೃತ್ಯುಪೀಠದ ಮಹಾಲಯದೆಡೆಗೆಂದು ನಡೆದು ಸಾವಿನ ಸಿಂಹಾಸನವಿಹ
ಸಭಾಂಗಣವನೇ ಸೇರಿದನವ.
ಸಹಸ್ರಸ್ತಂಭದ ವಾರುಣಮಂದಿರದೊಲು ಓರಣವಿಹ ಸಾರಣಂಗಣದಲಿ ಸಾಲುಸಾಲಾಗಿ
ಸಾಲಂಕೃತಗೊಂಡ ಸಾಲುಗಂಬಗಳ ಮೇಲೆ ಗುಡಿಗೋಪುರದೊಲಿಹ ಗುಮ್ಮಟವೊಂದು
ಮೋಡದೊಲದನು ಮುಚ್ಚಿ ಮಾಳಿಗೆಯಾಗಿಸಿತ್ತು. ಚಿತ್ರವಿಚಿತ್ರವಿಹ ಚಿತ್ತಾರಗಳಿಂದಾದ
ಛಾವಣಿಯಾಗಿಸಿತ್ತು.
ನೆತ್ತಿಮೇಲೆ ಗುಮ್ಮಟವದು ಗೋಚರಿಸಿರಲು, ನೆಲಗಟ್ಟಿನಲಿ ಗುಡಿಚಾಪೆಯದು ಹಾಸಿರಲು,
ಮರಣಮಹಾಲಯದಿ ಮಾರುಗಾಲಿಟ್ಟ ಮಾನವನ ಮೊಗದೆದುರು ಮೂಡಿ
ಮಾತನಾಡಿತ್ತು ಮೇಘದೆತ್ತರವನು ಮುಟ್ಟಿ ಮಡಗಿದ್ದ ಮಹಾದ್ವಾರವೊಂದು.
ಹರಣದ ಹೆಬ್ಬಾಗಿಲಿನಲಿ ಹೇಳದೆ ಹೆಜ್ಜೆಯಿಟ್ಟವನ ಹಿಡಿದೆಳೆದು ಹೊಡೆದಳಿದು
ಹಿರಿದ ಹೆಗ್ಗತ್ತಿಯಲ್ಲವನ ಹೆಗ್ಗತ್ತನೇ ತರಿದೊಗೆದು ತೂಗಾಡಿಸಲೆಂದಲ್ಲಿ
ತಯಾರಿಯಲ್ಲಿಹರು ಶಸ್ತ್ರಸಜ್ಜಿತವಿಹ ಸಿದ್ಧಾಳುಗಳು. ಚಿತ್ರವಿಚಿತ್ರವಿಹ ಚೈತ್ಯಾಳುಗಳು.
ಯಮಕಿಂಕರರಿವರಿಹರು ಭಯಂಕರರೆಂದು ಭವಿಸಿ ಬಂದ ಮಾರ್ಗಕೆ
ಭಾಗ್ಯವಿರದೆಂದು ಭ್ರಮಿಸಿ
ಮರಣದ ಮೂಲವನು ಮಣಿಸುವ ಮಹಾಕಾರ್ಯವನೇ ಮರೆತು ಮುಂದಡಿಯಿಡದ
ಮಾನವಾತ್ಮಗಳು
ಮಾಯಕದ ಮಂದ್ರಮೈದಾನದೆಡೆ ಮರಳುವವು, ಇಲ್ಲದಿರೆ ನೂಕುತಿಹ ನೂರಾತ್ಮಗಳ
ನೀರಿನೊಳು ನರಳುವವು.
ದೆಸೆಯಿರದೆ ದಾರಿಯಿರದೆ ದಿಗ್ಗೇಡಿಯಾದ ದರಿದ್ರಾತ್ಮಗಳಂತೆ ದಣಿಯುವವು.
ದುಃಖದ ದಾವಾನಲದೊಳು ದಹಿಸುವವು.

ಆದರೆ ಮನಸಿಜಾತರನೇ ಮಂತ್ರದೊಲು ಮಣಿಸಿ ಮಬ್ಬಾಗಿಸಿದ ಮನುಕುಲದ
ಮಹಾಪ್ರವರ್ತಕನಿಹನವ ರುರು.
ಧರ್ಮದ ದಾರಿಯನು ದಾಟಿ, ಮೃತ್ಯುವಿನ ಮೆಟ್ಟಿಲನು ಮೀಟಿ, ಮುಂದಡಿಯಿಟ್ಟನವ.
ಮರಣದ ಮಹಾದ್ವಾರವನೇ ಮುಂದಿಕ್ಕಿ, ಹರಣದ ಹೊಸ್ತಿಲನೇ ಹಿಂದಿಕ್ಕಿ
ಹೆಜ್ಜೆಯಿರಿಸಿದನವ.
ವಿನಾಶಕಾರಿಯಾದ ವಿಪತ್ತುಗಳನ್ನೊಡ್ಡಿ ವಿಕ್ರಮಿಸುವ ವಿಚಿತ್ರತಮವಾದ ವಿಕೃತಿಗಳವು
ಕಾಲನರಮನೆಗೆಕಾಲಿಟ್ಟಕಾರ್ಮಣನನೇಕೇಂದ್ರವಾಗಿಸಿಕೊಂಡು ಕೋದಂಡವನೆತ್ತಿ
ಕ್ರಮಿಸಿದವು.
ಶರಸಂಧಾನಗೈಯಲೆಂದವನೆಡೆಗೆ ಧನಸ್ಸನಿಡಿದು ಧೇನಿಸಿದವು. ಭಯಬೆಂಕಿಗಳಿಂದಾದ
ಬಿಲ್ಲನ್ನೆತ್ತಿ ಭ್ರಮಿಸಿದವು.
ಪ್ರಾಣಪ್ರಿಯಳಿಗಾಗಿ ಪರಿತಪಿಸಿ ಪ್ರಾಣಲೋಕದಿಂದಿಳಿದು ಪ್ರವಹಿಸಿದ ಪ್ರೇಮಪುರುಷನವ
ಪ್ರಿಯಹಸ್ತವನೆತ್ತಿ ಪ್ರೇಮಪುಷ್ಪವ ಪ್ರದರ್ಶಿಸಿರಲು ಪ್ರಾಣಾಂತಗೈಯಲೆಂದು ಪ್ರತೀಕ್ಷಿಸಿದ್ದ
ಪ್ರಾಣಘಾತುಕರು ಪರಿಣಾಯತನವನು ಪರಿತ್ಯಜಿಸುತಾ ಪೂರ್ಣಾತ್ಮನಿಗೆ ಪ್ರವೇಶವನಿತ್ತರು.
ಮೌನವೇ ಮಹಾಂತದೊಲು ಮಡಗಿರುವ ಮರಣದ ಮಹಾಲಯದೊಳಗಣ
ಸಾವಿನ ಸಭಾಂಗಣವದು
ಸದ್ದುಗದ್ದಲವೆಲ್ಲ ಸತ್ತು ಸದ್ದಡಗಿ ನಿದ್ದೆಹೋದಂತೆ ನಿಶ್ಯಬ್ದದ ನಿಶಾನಿಲಯವಾಗಿ
ನೆಲೆಸಿತ್ತು,
ಸದ್ದಿರದ ಸಭಾಂಗಣದ ಸುಪ್ಪತ್ತಿಗೆಯಲಿ ಸುಗೋಚರವಿಹುದೊಂದು ಸಾವಿನ ಸಿಂಹಾಸನ,
ಅದನೇರುವ ಮೆಟ್ಟಿಲುಗಳ ಮೇಲೆ ಮಕ್ಕಳೊಲು ಮಲಗಿ ಮೈಮುರಿಯುತಿಹರವರು
ಮಹಾನಾಗರು
ತ್ರಿಕೋನಾಕಾರದಲಿ ಓರಣಿಸಿ ಜ್ವಲಂತವಿಹ ಸೋಪಾನಗಳಲಿ ಸುತ್ತಿಸುರುಳಿಯಲಿ
ಸುಳಿಯುತಿಹರವರು ಮಹೋರಗರು;
ಜರತ್ಕಾರು, ತಕ್ಷಕ, ವಾಸುಕಿ, ಕಾರ್ಕೋಟಕಾದಿಯಾದ ಸರ್ಪಸಂಕುಲವೆಲ್ಲ
ಸಾವಿರಂಗುಲವಿಹ ಸಭಾಂಗಣದ
ಗದ್ದುಗೆಯನೇರಿ ಮಣಿದು ಮುಂದೋಡುತಿಹರು. ನಾಗಲೋಕದ ನಾಯಕರುಗಳೆಲ್ಲ
ನೆಲಹಾಸಿನಲಿ
ನೆರೆದು ನೂರಾವರ್ತದಲಿ ನರ್ತಿಸಿಹರು,ವರ್ತುಲಾಕಾರದಲಿ ವರ್ತಿಸಿಹರು,
ನಾಲಗೆಯಲಿ ನೆತ್ತರಾಗ್ನಿಯನೇ ನೆರೆಸಿಹರು,
ನೋಡುಗರೆದೆಯದು ನಡುಗಿ ನೀರಾಗುವೊಲದನು ಗುಡುಗಿ
ಗುಡಿಚಾಪೆಗಟ್ಟೇಳದಂತದನು ಉಡುಗಿ ಉರಾಚೆಗೆಸೆದಿಹರು.

ನಾಗಕುಲದ ನಿಚ್ಚಣಿಕೆಯದು ನೆಟ್ಟಿರಲು, ಸರ್ಪಮಯದ ಸೋಪಾನವದು ಸುಳಿದಿರಲು
ಮಹೋರಗದ ಮೆಟ್ಟಿಲನೇರಿ ಮುಟ್ಟಿದ ಮಹಾಪೀಠದಲಿ ಮಂಡಿಸಿಹನವ
ಮರಣಾಧಿಪತಿ
ಮುಡಿಗೇರಿ ಮುಡಿಸಿರುವ ಮುಕುಟದಲಿ ಮೂಡಿ ಮೈಮಣಿಸಿಹನವ ಮಹಾಪದ್ಮನೆಂಬ
ಮಹೋರಗನು.
ಕಾಲೋರಗನ ನಗೇಕಿರೀಟದಲಿ ಕುಣಿಸಿರುವ ಕರುಣೆಯಿರದ ಕಂಗಳಿಂದ ಕಾಣುತ
ಕುಳಿತಿಹನಲ್ಲಿ ಕಾಲಕೂಟನು.
ಹತ್ತಾರು ಹೆಸರಿರುವ, ನೂರಾರು ನೇಮಗಳಿರುವ, ಸಾವಿರಾರು ಸ್ವಭಾವಗಳಿರುವ
ಸುಖವಿರದ ಸೂಕ್ಷ್ಮಲೋಕದ
ಸರದಾರನವ,ಯಾತನೆಯನಿಡುವ ಯಮನೆಂಬೊಂದು ಅಭಿದಾನ ಹೊತ್ತು ಹೆಸರಾದ
ಹೇಡೀಸನವ,
ಕಳೆದೋದ ಕಟ್ಟಳೆಗಳ ಕಟ್ಟುಗಳನೆಲ್ಲ ಒಟ್ಟೈಸಿ ದಟ್ಟೈಸಿ ಧರ್ಮದಿ ದಯಪಾಲಿಸುವ
ಧರ್ಮದೇವತೆಯವ,
ಸರ್ವಸ್ವವನೇ ಸಾವಿನಲಿ ಸಮಾಧಿಗೈದು ಕೊನೆಗೊಮ್ಮೆ ಕಾಲನಂಕಿತದಲಿ ತಾನೇ
ಕಾಲವಾಗಳಿವ ಕೃತಾಂತನವ.
ಮರಣದ ಮಹಾರಮನೆಯ ಮಣಿಪೀಠದ ಮೇಲೆ ಮಂಡಿಸಿದ ಮೃತ್ಯುದೇವನ
ಮುಂದೆ ಮಣಿದನವ ಮಾನವ
ಹರಣದ ಹಜಾರದಲಿ ಹಂತಕನೆಂದು ಹೆಸರಾದ ಹೇಡೀಸನ ಬಳಸಿ ಬಳುಕುತ್ತಿದ್ದವೆರಡು
ಬೇಂಟೆನಾಯ್ಗಳು,
ಸೂಜಿತೇಜದೊಲಿಹ ಪಂಜುಗಳ ಪಡೆದ ಮುಂಗಾಲುಗಳ ಮೇಲೆ ಮೊಗವಿಟ್ಟು
ಮುಲುಗುಟ್ಟುತಿಹ
ಶುನಕಗಳ ಮೊಗವೊಂದರ ಮೇಲೆ ಕಂಡರಿಸಿದ ಕೆಂಡದೊಲು ಕಂಡಿಹವವು
ಕೆಂಡಗಂಗಳು ನಾಲ್ಕು.
ನೆತ್ತಿ ಮೇಲೆ ನೆರೆದ ನಾಲ್ಕುನೇತ್ರಗಳ ನಾಯಿಗಳೆರಡು ನಿಗೂಢದ ನೇಮವನಿತ್ತಂತೆ
ನಿರಂತರದಿ ನೂಕಿ ನುಲಿಯುತ್ತಿದ್ದವು.
ಶೈತ್ಯವಿಹ ದೈತ್ಯನ ಚೈತ್ಯದೊಳಗಲ್ಲಿ ಚಕ್ರವಿಕ್ರಮವಾಗಿ ಚಲಿಸುತ್ತಿತ್ತೊಂದು ಕಾಲದಚಕ್ರ,
ಆಯುವಿನ ಆಯತನವದು ಕಳೆದು ಕವಿದಿತ್ತೊಂದು ಕಾಲನ ಕರಾಳಛಾಯೆಯದು
ವಕ್ರ.
ಮರಣಪೀಠದ ಮುಂದೆ ಮುಡಿಪಿಟ್ಟು ಮೈಮಣಿಸಿ ಕೈಮುಗಿಸಿ ಕಾಲಯಮನ
ಕರುಣೆಗಾಗೆಂದು ಕಾದು ಕತ್ತೆತ್ತಿರಲು,

ಪ್ರಾಣವಿರದ ಪ್ರಾಣಾಂತಕನ ಪರಿಧಿಯಲಿ ಪ್ರಾಣಲೋಕದಿಂದಿಳಿದಲ್ಲಿ ಪದವಿರಿಸಿಹ
ಪ್ರಾಣವಿಹ
ಪುರುಷನೋರ್ವನಪ್ರಾಣವಾಯುವಿಗೆ ಪತರುಗುಟ್ಟಿದವೆಲ್ಲ ಪಾಪಾತ್ಮರ ಪಾಳಯದ
ಪದಾರ್ಥಗಳು;
ಹಸಿರಿರದೆ, ಕುಸಿರಿರದೆ, ಬಸಿರಿನೊಂದು ಉಸಿರಿರದೆ ಉರಿದೋದ
ಉರವಣಿಗೆಗಳಲೇಉರುಹಾಕುತಿಹ
ಉನ್ಮಾದಗಳಉಪ್ಪರಿಗೆಯಲಿ ಉಸಿರಿನೊಂದು ಬಿಸಿತಾಕಿರಲು ಬಿಸುಸುಯ್ದವೆಲ್ಲ
ಭಯದ ಬೆಂಬಾವಲಿಗಳು;
ಸುಡುತಿರುವ ಸಾವಿನಂಗಳದಲಿ ಸರಿದಾಡುತಿಹ ಸರ್ಪಸಂಕುಲವೆಲ್ಲ ಸರ್ಪಯಾಗದಿ
ಸುಟ್ಟುರಿದು ಸತ್ತಂತೆ
ಸುಳಿದಿರುವ ಸೀಮೆಯೊಳಗೇ ಹೊಸೆದ ಹೊಟ್ಟೆಯದು ಮೈಮೇಲಾಗಿ
ಮುರಿಯುವೊಲು ಮುದುಡಿಹವು;
ನಿಯಂತೃವಿನ ನಿಲಯವಾದ ನಿಶೆಯೊಳಗಲ್ಲಿ ನಿಷಧಿಯೊಲು ನಿಂದ ನ್ಯಾಯಸ್ಥಾನವದು
ನೀರಿರದ ನದಿಯೊಳಗೆ ನಿಂತು ನೀರಡಿಸಿಹ ನೀರಕ್ಕಿಯಂತಾಗಿ ನಡುಗುಡುಗಿ
ನಿದ್ದೆಹೋಗಿತ್ತು;
ಮಾನವನ ಮಡಿಗಾಗಿ ಮರುಗಿ ಮಂಕಾದ ಮರಣಾಲಯದೊಳಗಲ್ಲಿ ಮತ್ತೆ
ಮುಂದಾಗಿ ಮಂದಾಗಿ
ಮುಲುಗುಟ್ಟಿ ಮಾತನಾಡಿತ್ತೊಂದು ಮುದುಡಿದ ಮಂದ್ರಧ್ವನಿಯು, “ನಿಶೆಯಾಳದ
ನರಕದೊಳಗಿಲ್ಲಿ
ನುಡಿವ ನ್ಯಾಯಪೀಠದೆದುರಲ್ಲಿ ನಡೆಯುತಿಹ ನರನೇ ನೀನಾರು? ನಿರ್ವಾತದ
ನೀರವತೆಯಲ್ಲಿ
ನಿಟ್ಟುಸಿರನಿಟ್ಟು ನಿಡಿವ ನಾಡಿಯ ನರಗಳಿಗಿಲ್ಲಿ ನೀರುಣಿಸುವ ನಿಗಾ ಘಟಕವಿರದ
ನಿರಾಳದಲಿ
ಪ್ರಾಣವಳಿದ ಪಾಪಾತ್ಮರಿಗಾಗಿರುವ ಪಾಳಯದಲಿ ಪ್ರಾಣವಿಹ ಪುರುಷರಿಗೆಂದೂ
ಪ್ರವೇಶವಿಲ್ಲ.
ಇಂತಿರಲು ಇಳಿವಾದಿಯಿಂದಿಳಿದಿಲ್ಲಿ ಬಂದು ಭ್ರಮಿಸುತಿಹ ಭವ್ಯಾತ್ಮನೇ ನೀನಾರು?
ಹಾದಿಬೀದಿಯೊಳಗೆಲ್ಲ ಹತ್ಯೆಯಾದವರ, ಹಡೆದು ಹೆಣವಾದವರ, ಹತ್ತುಜನ
ಹೊತ್ತುತಂದು
ಹತ್ತಾಳು ಹೊಂಡದೊಳು ಹುಗಿದವರ, ಹೆಸರಿಗೊಂದು ಹೂಗುಚ್ಚವನಿಟ್ಟು
ಹನಿನೀರಿತ್ತವರ

ಹರಣದ ಹಾದಿಯೊಳಗಿಲ್ಲಿ ಹೊತ್ತುತಂದು ಹಜಾರದೊಳಗಿಲ್ಲಿ ಹೋಮಿಸಿಹ
ಹೇಡೀಸನ
ಸಾವಿನ ಸೂತಕವನು ಸುರುಳಿ ಸುತ್ತುವ ಅದಾವ ಆಧ್ಯಾತ್ಮಿಕ ಶಕ್ತಿಯದು ನಿನ್ನನಿಲ್ಲಿ
ನಿಲ್ಲಿಸಿಹುದು?
ಒಡನೆ ಒಡನುಡಿದಿತ್ತೊಂದು ಒಡಲಾಳದೊಳಗಿಂದೆದ್ದು ಬಂದಂತಹ ಭಾವಧ್ವನಿಯೊಂದು,
"ಮಾನಸವನು ಮಣಿಸಿ ಮೂಲೋಕದಿಂದಿಳಿದಿಲ್ಲಿ ಸಾವನೇ ಸೆಣೆಸಿ
ಸುಡುಗಾಡಿಗೆಸೆಯಲೆಂದಿಲ್ಲಿ
ಉರುಹಾಕಿದ ರುರುವಿನ ರಕ್ತದಲಿ ದಿವ್ಯತೆಯ ಧರ್ಮವಿದೆ, ದೈತ್ಯತೆಯ ಧೈರ್ಯವಿದೆ;
ಉಚ್ಚ–ನೀಚಗಳೆರಡನ್ನೂ ಸೂಚ್ಯದಲಿ ನಿಚ್ಚಯಿಸಿ ಗುಚ್ಛವಾಗಿಸಿಹ
ಗಂಡೆದೆಯದವನ ಗುಂಡಿಗೆಯಲಿದೆ;
ದೇವ–ದಾನವರಿಬ್ಬರೂ ದೇಹವೊಂದನೆ ಧರಿಸಿಹರು, ದೈತ್ಯಾದಿತ್ಯರವರದನೆ
ಚೈತ್ಯವಾಗಿಸಿಕೊಂಡದರೊಳಗೆ ಚರಿಸಿಹರು.
ಸಮನ್ವಯತೆಯನು ಸಾರುವೊಲು ಶುಕ್ಲಾಂಗ–ಕೃಷ್ಣಾಂಗಳೆರಡೂ
ಕಾಯವೊಂದರಲೇ ಕಲೆತದನುಕರ್ಮದ ಕಾರಸ್ಥಾನವಾಗಿಸಿಹವು.
ಸುರಾಸುರಮಿಶ್ರಪಿಂಡ ಮಾನವಪಿಂಡವಾಗೊಗೆತಂದಿರಲವನನೇ ಮನುಕುಲದ
ಮಹಾಪ್ರವರ್ತಕನಾಗಿಸಿಲ್ಲಿ ಮೆರೆಸಿಹವು.
ಬ್ರಹ್ಮನ ಮಾನಸಪುತ್ರನಾಗುತೊಗೆತಂದ ಭೃಗುವರನೆಂಬೋರ್ವಋಷಿಯ ವಕ್ಷದೊಳಗೆ
ಪ್ರೇಮವೃಕ್ಷವ
ನೆಟ್ಟು ನೀರುಣಿಸಿ ಬೆಳೆಸಿ ಬೃಹದಾಕಾರವಾಗಿಸಿಹಳೋರ್ವ ದಾನವಕನ್ಯೆ. ಹೆಸರವಳದು
ಪುಲೋಮೆ.
ಗರ್ಭವತಿಯಾಗಿ ನಡೆದ ಪುಲೋಮೆಯ ಗರ್ಭವದುಚ್ಯುತವಾಗಿ ಚೆಲ್ಲಿರಲದು
ಚ್ಯವನನೆಂದು ಹೆಸರಾಗಿತ್ತು.
ಚೆಲುವಾಂತ ಚ್ಯವನನ ಚಿತ್ತವನು ಕದಕಿ ಕಲ್ಲೆಸೆದದನು ಪಲ್ಲವಿಸಿದ
ಪ್ರೇಮವಾಗಿಸಿದಳೋರ್ವ ಅಪ್ಸರೆ ಘೃತಾಚಿ.
ಇಳೆಯ ಇತಿಮಿತಿಗಳನೆಲ್ಲ ಈಡನ್ನಿನೊಳಗಲ್ಲಿ ಇರಿಸಿ ಮರೆಸಿ ಮಾನವಪ್ರೇಮವನೇ
ಮಣಿಮುತ್ತನಾಗಿಸಿ ಮೆರೆಸಿದಳಲ್ಲಿ
ಋಷಿ–ರಾಕ್ಷಸ ಸಂತಾನವಂದು ಅಪ್ಸರಕನ್ಯೆಯೊಳಗೊಂದಾಗಿರಲು ಒಗೆತಂದನವ
ರುರು.
ಕುಲತ್ರಯಗಳವು ಕೂಡಿಕೊಂಡಿರಲು ಕುಡಿಯೊಡೆದ ಕಾರ್ಮಣಕಿರೀಟನವ
ಕಾಲಕೂಟವನೇ ಕೆಣಕಿ

ಕಟ್ಟಾಡಿಸಿ ಕಾಮನ ಕೈಯಾರೆ ಕೊಡಮಾಡಲ್ಪಟ್ಟ ಪ್ರೇಮದ ಪುಷ್ಪವೊಂದನು
ಪಡೆದಿಲ್ಲಿ ಪದವಿರಿಸಿಹನು.
ಅದಕಂತಲೇ ನರಕದ ನಿಯಂತೃವಿನ ನ್ಯಾಯಮಂದಿರದಲಿ ನೆಟ್ಟ ನಿಯಮಗಳವನನು
ನಿಯಂತ್ರಿಸುವದಿಲ್ಲ
ತಾನಿಂತ ತಳವನೇ ತಣಿಸುವ ಹೇಡಿಸನ ಶೈತ್ಯಶ್ವಾಸವದು ಸುಗುಣನನು
ಸೆಟೆದುರುಳಿಸಲದು ಶಕ್ತವಾಗಿಲ್ಲ
ಕರಾಳಕಾಲುವೆಯೊಳಗೆ ಕುದಿಕುದಿದು ಕಿರುಚುವ ಕೂಗಿಗೆ ಕಾರ್ಮಣನನು
ಕಲ್ಲಾಗಿಸುವ ಕಾಠಿಣ್ಯವಿಲ್ಲ."
ಪ್ರೇಮವೆಂಬೊಂದು ಪದವೆದ್ದು ಪ್ರಕೃತಿಯನೆಲ್ಲ ಪ್ರೇರೇಪಿಸಿರಲು ನಿಶೆಯಾಳದ
ನರಕವೇ ನಡುಗುಡುಗಿ ನೀರಾಗಿತ್ತು.
ನಿಯಂತೃವಿನ ನ್ಯಾಯಪೀಠವದು ನೆರಳು–ನಿಶೆಗಳ ನೂಕಾಟದಲಿ ಅರ್ಧಬೆಳಕರ್ಧ
ಕತ್ತಲೆಯಲಿ ಕಳೆದೋಗಿ ಕಾಣದಂತಾಗಿತ್ತು.
ನೆರೆದಿರುವ ನಾಗಕುಲವೆಲ್ಲ ನೋವಿನಲಿ ನರಳಿ ಹೊರಳಿ ಹೊಂಡದಾಳದೊಳು
ಮರಳಿ ಮತ್ತೆ ಮೇಲೇರಿ ಉರುಳಿ ಉಧ್ವಸ್ಥವಾಗಿತ್ತು.
ಯಮಸನ್ನಿಧಿಯ ಎಡಬಲಕೆ ಸುಳಿದ ಶುನಕಗಳೆರಡು ನಾಲ್ಕುನೇತ್ರಗಳಿಹ ನೆತ್ತಿಯನೆತ್ತಿ,
ನಾಲಗೆಯ ಸುರುಳೆಸುತ್ತಿ ಸುಮ್ಮನಾದವು.
ತನ್ನಂಕಿತದಲಿ ತಣ್ಣಗಿರುವ ತಾಣವದು ಉರಿದರಿದು ಉಧ್ವಂಸವಾದ ಕಾಣ್ಕೆಯನು
ಕಂಡು ಕರುಳುರಿದಿರಲು
ಕತ್ತೆತ್ತಿ ಕೇಳಿದನವ "ಕೃತಾಂತ, ಶೈತ್ಯವಿಹವೀ ದೈತ್ಯಲೋಕದಲಿ ಪ್ರೇಮವನು ಪುಟಕಿಕ್ಕಿಸಿ
ಪ್ರೇಮಜ್ವಾಲೆಯನೇ
ವಿಸ್ಫಾಲಿಸುವಂತೆ ಗೈದಿಲ್ಲಿ ಪ್ರೇಮಕಣಗಳ ಬಿತ್ತಿ ಬಿಸಿಯಾಗಿಸಲೆಂದು ಕಾದಿರುವನೇ
ಆ ಕಾಮ?
ಪಂಚಾಯತನದೊಳಗೆ ಸಂಚಯಿಸಿದೀ ಪ್ರಪಂಚದೊಳಗೆಲ್ಲ ಅವನ ಸಂಚೇ
ಸಾರ್ವತ್ರಿಕವಿಹುದು.
ಜಂಗಮ ಜಗತ್ತುಗಳನೆಲ್ಲ ಝಗಮಗಿಸುವ ಜಾತ್ರೆಯನ್ನಾಗಿಸಿ ಜಾಲಂಧರದೆಡೆಗೆ
ಜಗ್ಗಿಸುವನು,ಕಾಲಡಿಗೆ ಕುಗ್ಗಿಸುವನು.
ಯುದ್ಧದೇವನೆದೆಗೆ ಮದ್ದನ್ನಿತ್ತು ಮರಣಮಹಾನವಿಯನೇ ಮರೆಸುವನು,
ಮೂಲೋಕವನೇ ಮುಪ್ಪಿನೊಳಗಲ್ಲಿ ಮೆರೆಸುವನು.
ಆದರಿಲ್ಲಿ ನಿಯಂತೃವಿನ ನೆರಳೇ ನಡೆದಾಡುವ ನರಕದೊಳಗಿಲ್ಲಿ ಕಾಮನ ಕಳ್ಳಾಟಗಳಿಗೆ
ಮಳ್ಳರಾಗಿ ಮರುಗುವ ಮೂಢರಾರಿಲ್ಲ.

ಸಾವಿನ ಶಿಶಿರಂಗಣದಲಿ ಕಾಮನ ವಸಂತವೆಂದೂ ವಿಸ್ತರಿಸದು, ಕೆಳಗಿಳಿದ ಕೊನೆಯ ಕಾರಸ್ಥಾನದಲಿ
ಕಾಮನವ ಕಾಲಿಟ್ಟು ಕರ್ಮವನು ಕಾಯುವ ಕೃತಾಂತನ ಕಾರ್ಯಕೆ ಕಲ್ಲುಮುಳ್ಳುಗಳ ಕರೆದು ಕಾಲ್ತೊಡಕನಾಗುವನೇ?"
ಅಜ್ಞಾತವಾದರೂ ಆಜ್ಞಾಪೂರಿತವಿಹ ಧ್ವನಿಯದು ಯಮನ ಯಾತನೆಗೆ ಎದುರುತ್ತರವನಿತ್ತು ನುಡಿದಿತ್ತು,
"ಸ್ವರ್ಗದ ಸೀಮೆಯಲಿ ಸುಳಿವ ಸುಂದರಾಂಗಿಯಾಕೆ, ಅಪ್ಸರೆ ಮೇನಕೆ. ಮನದ ಮೂಲೆಯೊಳಗಿಂದಿಳಿದು
ಜಡದ ಜಾತ್ರೆಯೊಳಗೊಂದಾಗಲೆಂದಿಲ್ಲಿ ಜರಿದು ಜನರಿರುವ ಜಂಗಮಜಗಕೆ ಬಂದಿಳಿದು ಭವಿಸಿದಳು.
ಪೃಥ್ವಿಯ ಪರಿಧಿಯೊಳಗೆ ಪಳಗಿರುವ ಪ್ರಮದೆಯರಂತೆ ಪ್ರಕೃತಿಯೊಳಗೆ ಪದವಿರಿಸಿ ಪ್ರವಹಿಸಿರಲು
ಗಂಧರ್ವಲೋಕದಿ ಗರ್ಭಾಂಕುರನಿಹ ವಿಶ್ವಾವಸುವೆಂಬೋರ್ವ ದೊರೆಯು ದೊರೆತ ದೂರಾವರ್ತಿಯಳನು ಧರಿಸಿರಲು ಪ್ರೇಮದ ಪ್ರವಾಳವಾಗುತೊಗೆತಂದು ಪುಟ್ಟಿಹಳವಳು ಪುಟ್ಟಿ ಪ್ರಿಯಂವದೆಯು.
ಕಾನನದ ಕನ್ಯೆಯಾಗಿ ಕುಳಿತವಳಂದು ತರುಣ ತಾರಕೆಯೊಲಿಹ ರುರುವಿನ ಮನದನ್ನೆಯಾಗಿ ಮೆರೆದಿರಲು,
ಚಂದ್ರಚಕೋರಿಯೊಲಿಹ ಚಿನ್ಮಯರ ಚಿತ್ತಿಯೊಳಗೆ ಚೀತ್ಕಾರವನೆಬ್ಬಿಸುವೊಲು ಉಬ್ಬಸವಿಡುವ ಉರಗವೊಂದು
ಪಾತಾಳದ ಪೌಳಿಯಿಂದೇರಿ ಪೃಥ್ವಿಯಲಿ ಪ್ರೇರಿಸಿದ ಪ್ರೇಮಿಗಳ ಪ್ರವಾರದೆಡೆ ಪ್ರವಹಿಸಿತ್ತು,
ಪ್ರಿಯಕರನ ಪ್ರಾಣನಾಡಿಯಾಗಿಹ ಪ್ರಿಯಂವದೆಗಿದೋ ಪ್ರಾಣಾಂತವಾಗಿತ್ತು.
ಮನದ ಮಾದೇವಿಯನು ಮರಳಿ ಮೇಲೆತ್ತಲಿಂದಿಲ್ಲಿ ಮಹಾದೇವತೆಗಳನೇ ಮಣಿಸಿ ಮುಂದಡಿಯಿಟ್ಟು
ಕಾಮನಿಂದ ಪಡೆದೊಂದು ಪ್ರೇಮಪುಷ್ಪದ ಪ್ರಭಾವದಿಂದಿಲ್ಲಿಗೆ ಪಯಣಿಸಿಹನವ. ಪ್ರೇಮದಿ ಪ್ರಯತ್ನಿಸಿಹನವ."
ನಿಯಂತೃವಿನ ನಿರ್ಣಾಯಕ ನುಡಿಗಡಣವು ನೇರಾನೇರದಲಿ ನುಡಿದಿತ್ತು. ರುರುವನು ರುಚಿಸಲೆಂದೆದುರು ನೋಡಿತ್ತು,
"ಪ್ರಾಣಿಲೋಕದಿಂ ಪಾತಾಳದೊರೆಗಿನ ಪಾಷಾಣಮಾರ್ಗದಲಿ ಪಯಣಿಸಿಲ್ಲಿ ಪಾದವಿರಿಸಿಹ ಪೃಥಿವಿಪುತ್ರನೇ,

ನಾಕ–ನರಕಗಳಲ್ಲಿ ನ್ಯಾಯನೀತಿಗಳನೆಲ್ಲ ನಿಯಮಿಸಿ ನಿರ್ದೇಶಿಸಿಹ ನಿಗಮವೊಂದಲ್ಲಿ
ನೆಲೆಸಿಹುದದುವೇ ಯಜ್ಞ!
ಅಜ್ಞ–ತಜ್ಞಗ್ಗಳನೆಲ್ಲ ಪ್ರಜ್ಞದಲಿ ಪಜ್ವಳಿಸಿ ಪುನರ್‌ಜೀವಿತವಿರುವೊಲು ಪ್ರವರ್ತಿಸುವ
ಯಜ್ಞವದು
ನಿಶೆಯಿಂದ ನಿಚ್ಚಣಿಕೆಯೊಂದನು ನೆಟ್ಟು ನೇರವೇರುವುದು, ಉಷೆಯೊಳಗೆ ಉದಿಸಿ
ಉತ್ಸರ್ಜಿಸುವೊಲು ಉರುಹಾಕುವುದು,
ಭೂಲೋಕದಿಂ ಸ್ವರ್‌ಮಂಡಲದ ಪರ್ಯಂತದ ಪಾರಾವಾರದಲಿ ಪರಿವಾರಿಗರಾದ
ದೈತ್ಯಾದಿತ್ಯರ ದ್ವಂದ್ವಗಳನೆಲ್ಲ ದಡಕೊತ್ತಿ ಧರ್ಮದ ದಾರಿಬೆಳಕಿನಲ್ಲವರ
ದಯಪಾಲಿಸುವದು,
ಸ್ವರ್ಗ–ನರಕಗಳ ನಿಯಮಗಳನೆಲ್ಲ ನೆಲಕೊತ್ತಿ ನವ್ಯನಿರ್ಧಾರವೊಂದನು ನೆಟ್ಟು
ನೂರಾಗಿಸುವುದು,
ಯಜ್ಞದ ಯಜ್ಞಾಯತನದೊಳಗೆ ನಿನ್ನ ನೀ ಯಜಿಸಲು ನೀ ಸಿದ್ಧನಿರುವೆಯಾದರೆ
ಯಜ್ಞದೊಂದುಆಜ್ಞೆಗೆ ಸ್ವರ್ಗವೇ ಮಣಿದು ಮಹಾದ್ವಾರವ ತೆರೆಯುವುದು. ನಿನ್ನ
ತನ್ನೊಳಗೊಂದಾಗಿಸಿಕೊಳುವುದು.
ಬಂದು ಬಾಗಿಲಲಿ ಬೀಗರ ಬರಸೆಳೆವ ಬಂಧುಗಳೊಲು ದೇವಗಣವೇ ತಾ ಮುಂದಾಗಿ
ಮಣಿಯುವುದು,
ದೇವಮಂಡಲದ ದ್ವಾರಪಿಂಡಿಯ ದಾಂಟಿ ಹೊಸ್ತಿಲದೀಚೆ ಸುಳಿವ ಪಂಚದೇವಿಯರು
ಪಂಚಾರತಿಯನೆತ್ತುವರು.
ಇಂತಿರುವ ಯಜ್ಞದ ಯಮನಿಯಮಗಳಿಗೆ ನಿಯೋಜಿತನಾಗಿಲ್ಲಿ ನಿಂತು ನುಡಿದಿರುವೆ,
ಅಪರಾರ್ಧದ ಅರ್ಧಾಯುಷ್ಯವನೇ ಅರ್ಧಾಂಗಿಗಿತ್ತವಳನು ಕರೆದೊಯ್ಯಲಿಂದಿಲ್ಲಿ
ಕಾದಿರುವೆ.
ನಿನ್ನೀ ನಿಯಮಕೆ ನೆಚ್ಚಿ ನಿನ್ನಾಕೆಯ ನಿಶಾತ್ಮವನು ನಿನ್ನಂಕಿತಗೊಳಿಸಿ ನಿಮ್ಮೀರ್ವರನು
ನೆಲಕೇರುವೊಲು ನಿಯೋಜಿಪೆನು,
ಆದರೆ, ಅದಕೂ ಮೊದಲಿಲ್ಲಿ ಮೂಲೋಕಕೆ ಮುಡಿಪಾಗಿಹ ಮರ್ಮಗಳ ಮತ್ತೆ
ಮನದಟ್ಟು ಮಾಡಿಕೊಡುವೆನು,
ಓ ಮರ್ತ್ಯವಾಸಿಯೇ, ಕಳೆದೋದ ಕಾಂತೆಯನು ಕರಾಳ ಲೋಕದಿಂದ
ಕರೆದೊಯ್ಯಲೆಂದಿಲ್ಲಿ ಕಾಲಿಟ್ಟಿರುವೆ,
ಓರ್ವ ಹೆಣ್ಣಿಗಾಗಿ ಹವಿರ್ಭಾಗವನಿತ್ತು ಹೊರಡುವೆಯಾ, ಕಾಮದ ಕರುಣೆಗಾಗಿ
ಅರ್ಥವನೇ ಅನರ್ಥಗೊಳಿಸುವೆಯಾ?

ಮಂಗಲಕರವಿಹ ಮೋಕ್ಷವನೇ ಮೂರಡಿಗೊತ್ತಿ ಮಣ್ಣಾಗಿಸುವೆಯಾ? ಧರ್ಮವನೇ ದಿಕ್ಕುಪಾಲಾಗಿಸುವೆಯಾ?

ಜನ್ಮಜಾತರಿಗಾಗಿರುವ ಜನ್ಮ–ಜರಾ–ಮೃತ್ಯುಗಳೆಂಬಮೂರುಘಟ್ಟಗಳವು ಮಾನವನು ಮುಗಿಸಲೇಬೇಕಿರುವ ಮಹಾಪರ್ವಗಳು.

ಯೌವನದ ಯಾಂತ್ರಿಕತೆಯಲ್ಲಿ ಮುಪ್ಪಿನ ಮಾಂತ್ರಿಕತೆಯನೇ ಮರೆತು ಮೂಢನಾಗಿ ಮೈಮರೆವರೇನು ಮಾನವರು?

ಮಾನಸರ ಮಂಡಲದಲಿ ಮುಪ್ಪೆಂಬ ಮಹಾಕ್ಷಣವಿಲ್ಲ, ಅನಿಮೇಷರ ಅಂಗಣದಲಿ ಅಜ್ಜರಾಗುವ ಅನುಭವವಿಲ್ಲ.

ವೇಗವಿಲ್ಲದ, ವರ್ಧನವಿಲ್ಲದ, ನಿಂತಲ್ಲೇ ನಿಂತ ನೀರಗುಂಡಿಯೊಲು ನಿರರ್ಥಕವಿಹವಾ ನಿಲಿಂಪರಿಗಿಂತಲೂ ನೂರ್ಪಾಲನಿರುವೆ.

ಬಾಲ್ಯದಲಿ ಬೆಳೆದು, ಕೌಮಾರದಲಿ ಕಲಿತು, ತಾರುಣ್ಯದಲಿ ತಪಿಸಿ, ಯೌವನದಲಿ ಯಜಿಸಿ

ಮುಪ್ಪಿನಲಿ ಮಹಾಯೋಗಿಯೆಂದು ಯಾಜ್ಞಿಕರಿಹ ಋಷಿಪರಂಪರೆಯಿಂದ ಪುಣ್ಯಪುನೀತನಿಹೆ.

ಗಳಿಸಿದ ಗೋನಿಧಿಯನು ಗೋಗಳ್ಳರಿಗೆಂದು ಗೋದಾನವನಿತ್ತು ಗೋಸುಂಬೆಯೊಲು ಗಮಿಸುವೆಯಾ?

ಚಿಗುರೇ ಚಿರಂತನವಲ್ಲ ಮೊಗ್ಗೆಯದು ಪಲ್ಲವಿಸಿ ಪ್ರೇಮಗಂಧವನೆಲ್ಲೆಡೆಗೆ ಪಸರಿರಬೇಕು.

ಬೀಜವದು ಕಾಯಾಗಿ ಹಣ್ಣಾಗಿ ಮಾಗಿದ ಮಾವಾಗಿ ಮರದಿಂದುದುರಬೇಕು. ಮಹಾದೇವನ ಮಡಿಲೇರಿ ಮೆರೆಯಬೇಕು.

ವೃದ್ಧಾಪ್ಯವದು ರೋಗರುಜಿನಗಳ ರೋಜಗಾರವಲ್ಲ. ಬದಲಿಗದು ಭಗವಂತನೆಡೆ ಭವಿಸಲಿಕ್ಕಿರುವ ಬ್ರಹ್ಮಮಾರ್ಗವಿಹುದು.

ಭುವಿಯಿಂ ಭೂಮದೆಡೆಗೆ ನೆಟ್ಟಿರುವ ಸಮಯ–ಸೇತುವೆಯಹುದು.

ಪ್ರಶಾಂತಿಧಾಮಕೆ ಪಯಣಿಸಲಿಕ್ಕಿರುವ ಪೌಳಿಗಳಿಹ ಪ್ರಾಂಗಣವಾಗಿಹುದು.

ಶ್ರಮವು ಶ್ರಾವ್ಯವಾಗಿ, ವಿದ್ಯೆಯು ವಿವೇಚನೆಯಾಗಿ, ವಿಷಯವು ವಿಜ್ಞಾನವಾಗಿ ಕೊನೆಗದು ಜ್ಞಾನವಾಗಿ

ಅಜ್ಞಾನವನು ಅಳಿದು ಸುಜ್ಞಾನವನು ಸುತ್ತೆಲ್ಲ ಸುಗೋಚರವಿರುವೊಲು ಸಂಚಯಿಸುವ ಸಂಜೆಕಾಲವಾಗಿಹುದು.

ಇಂತಿರಲುಅಮೂಲ್ಯವಿಹ ಅವಸಾನದ ಕಾಲವನು ಕಳೆದುಕೊಂಡಿಲ್ಲಿ ಕುಲಗೇಡಿಯಾಗಿ ಕಳೆದೋಗುವೆಯಾ?

ಬದುಕಿನಲಿ ಬಂದುಹೋದ ಭಾಮಿನಿಗಾಗಿ ಬಂಗಾರದೊಲಿಹ ಭವಿಷ್ಯವನೇ
ಬೆಂಕಿಗಾಹುತಿಯಾಗಿಸಿ ಭ್ರಮಿಸುವೆಯಾ?
ಚೈತನ್ಯವದು ಚಿರಂತನರಿಗಿರದ ಮುಪ್ಪೆಂಬ ಮಹಾವರದಾನವನು ಮಾನವರಿಗಿತ್ತು
ಮೆರೆಸಿಹುದು.
ಸರಿಯದ ಸಮಯದಲಿ ಸರುವರವರು ಸುಪ್ಪತ್ತಿಗೆಯಲಿದ್ದರೂ ಸಾವಿನ ಸುಖದ
ಸದಾವಕಾಶವಿರದೆ ಸೂತರಾಗಿಹರು.
ಮಾತೆಯ ಮಡಿಲಿನಲಿ ಮಲಗಿ, ಮಕ್ಕಳಾಟವನಾಡಿ, ಮೋಹದಮಲೆಯನೇರಿ,
ಮರುಗಿ, ಮರಳಿ ಮಣ್ಣಿನೊಳಗೊಂದಾಗುವ
ಮಾನವರ ದಿವ್ಯಾತ್ಮವದು ಸಾವಿನಲೇ ಸಮಾಪ್ತಿಯಾಗದೇ ಸೀಮೋಲ್ಲಂಘನವಗೈದು
ಸ್ವರ್ಣಸರೋವರವನೇ ಸೇರುವುದು.
ಕೊನೆಮೊದಲಿರದ ಕಾಲದಂತೆ, ಆರಂಭಾತ್ಯಗಳಿರದ ಅಂತರಿಕ್ಷದಂತೆ
ನಿತ್ಯನೂತನವಿಹುದು ಅಮರ ಚಿರಂತನವಿಹುದು.
ಆಯುವಿನ ಆವಿಷ್ಕಾರದಲಿ ದೇಹವದು ದಣಿದರೂ ಅಮರವಿಹ ಆತ್ಮವದು
ಅನಂತವನೇ ಅನುರಣಿಸುವುದು.
ಬಾಲ್ಯ–ಕೌಮಾರ್ಯ–ಯೌವನ–ವೃದ್ಧಾಪ್ಯಗಳೆಂಬ ಋತುಮಾನಗಳವು ಮಾನವನನು
ಚಕ್ರವ್ಯೂಹದೊಳು ಚರಿಸಿಹವು.
ಆಯಸ್ಸೆಂಬ ಅದ್ಭುತ ಸುರಂಗದೊಳಗೆ ಸುತ್ತಿಸಿಹವು. ಮತ್ತೆಮತ್ತೆ ಮೃಣ್ಮಯಕೆ
ಮರಳುವ ಮಹಾರಹಸ್ಯವನೇ ಮುಂದಿಟ್ಟಿಹವು.
ಕಂಡ ಕನಸುಗಳಿಗೆಲ್ಲ ಭರವಸೆಯ ಬಣ್ಣವ ಬೆರೆಸಿ ಬದುಕುತ್ತ ದುಃಖದ ದಾರಿಯೊಳಗೇ
ದಂಡೆತ್ತಿ ಸುಖದ ಸಾಗರವನು
ಸೇರಿ ಸುಖಿಸಿದ ಯುವಕನೋರ್ವ, ಬದುಕಿನ ಮುಸ್ಸಂಜೆಯಲಿ ಮರೆತ
ಮಹಾದಿನಗಳನೆಲ್ಲ ನೆನೆದು ನಕ್ಕು
ಸಂತೃಪ್ತನಿಹ ಸಿಹಿಘಳಿಗೆಯನೇ ತ್ಯಜಿಸಿ ತಾತ್ಕಾಲಿಕನಾಗಿ ತಮಸ್ಸಿನೆಡೆಗೆ ತೆರಳುವೆಯಾ?”
ಒಡನೆ ಒಡನುಡಿದಿತ್ತೊಂದು ಕಡಲಾಳದೊಳಗಿಂದೆದ್ದ ಕರಾಳಧ್ವನಿಯೊಂದು,
“ನಿಯಂತೃವಿನೆದುರು ನಿಂತು
ನುಡಿಯುತಿರುವ ನರನೇ, ನೋಡಿಲ್ಲಿ, ನಿನ್ನವಳ ನೇಮಕಾಗಿ ನೀ ಕಳೆದುಕೊಳಲಿರುವ
ಭವಿಷ್ಯದ ಬ್ರಹ್ಮಕಾಲವ.”
ಧ್ವನಿಯು ಮಂದ್ರವಾಗಿತ್ತು, ಚಿತ್ರಗುಪ್ತನವ ಬಿತ್ತರಿಸಿದ ಭವಿಷ್ಯದ ಗುಪ್ತಚಿತ್ರಗಳವು
ಪರದೆಯ ಮೇಲೆ ಮೂಡಿ ಚಲಿಸಿತ್ತು.

ಕೃತಾಂತನ ಕಾರ್ಯಾಗಾರದಲಿ ಚಲಿಸಿದ ಚಲನಚಿತ್ರದಲಿ ಜಗತ್ತಿನ ಬರಲಿರುವ
ಭೂಪಟದ ಭವಿಷ್ಯದರ್ಶನವದು ಬಿತ್ತರಿಸಿತ್ತು.
ಅಥೆನ್ಸಿನ ಬೆಟ್ಟದ ಮೇಲೊಂದು ಮನೆಯ ಮಾಡಿರುವಂತೆ ಮೂಡಿದ ಮಹಾಸೌಧವದು
ಆಕ್ರೋಪೋಲೀಸ್,
ಕಲ್ಲಿನೊಳಗೆ ಕೆತ್ತಿರುವ ಎತ್ತರೆತ್ತರದ ಭವ್ಯಶಿಲ್ಪಗಳವು ಫಿಡಿಯಸನೆಂಬ ಶಿಲ್ಪಕಾರನ
ಶಿಲ್ಪಸ್ವಾರಸ್ಯವನಲ್ಲಿ ತೋರಿತ್ತು.
ಆಲಯದ ಆಂತರ್ಯದೊಳಗೆ ನಿಂತಿಹಳವಳು ನಿತ್ಯನೂತನೆ ವರ್ಜಿನಳು.
ತೋರಿಹಳು ಬುವಿಗೆಲ್ಲ ಭವ್ಯಭಾಂಡಾರವನು.
ಕಾಲಾಂತರದಿ ಸ್ವರ್ಗಮರ್ತ್ಯದೊಳಗೆಲ್ಲೂ ಇಲ್ಲದ ದೌಲತ್ತಿನ ದಿವ್ಯಸೌಧವದು
ದೀನದುರ್ಬಲರ ದಿಬ್ಬಗಳಾಗಿ ದಿನಗಳ ದೂಡಿತ್ತು.
ಬೌದ್ಧಗುಹೆಯೊಳಗೆ ಸಾಲಂಕೃತಗೊಂಡ ಸೌಮ್ಯವದನಗಳವು ಸಾರ್ವಕಾಲಿಕದ
ಸತ್ಯಸಿದ್ಧಾಂತಗಳನು ಸೂಸುತ್ತ ಸುಳಿದಿಹವು.
ಓರಿಸ್ಸಾದ ಸೂರ್ಯಮಂದಿರದ ಶಿಲಾಂಗಣದಲಿ ನೃಪಾಲರೂ, ಸೇನಾಗಣರೂ,
ಶಿಲಾಬಾಲಿಕೆಯರೂ ಸ್ತಬ್ಧಚಿತ್ರಗಳಾಗಿ ಸ್ಥಾನಿಕರಾಗಿಹರು.
ಭಗವಂತನಿಗಾಗಿರುವ ಭುವನೇಶ್ವರದ ಭವನವದು ಬುವಿಯು ಕಂಡ
ಕಲಾಸೌಂದರ್ಯದ ಕಲ್ಪತರುವಾಗಿಹುದು.
ಗುಪ್ತಚಿತ್ರವದು ಚರಿಸಿತ್ತು. ಜ್ವಲಂತವಿಹ ಜಂತಿಯ ಮೇಲೆ ರುರುವಿನ ಭವಿಷ್ಯದ
ಭಾಗವೊಂದನಲ್ಲಿ ಬಿತ್ತರಿಸಿತ್ತು,
ಕಂಡನವ ಕಾರ್ಮೋಡವು ಸರಿದು ಸುಸ್ಪಷ್ಟವಿಹ ಸುದಿನಗಳ. ಆಯುವದು
ಆರತಕ್ಷತೆಯನಿತ್ತು ಆಶೀರ್ವದಿಸಿದ ಆ ಕ್ಷಣಗಳ.
ಕಟ್ಟಡವಿಯ ನಟ್ಟನಡುವೆ ನೆರೆದಿರುವ ಕೃಷ್ಣಶಿಲಾಶೃಂಗವೊಂದರ ಬದಿಗೆ ಬೆಳೆದಿರುವ
ಬೃಹದಾಶ್ರಮವೊಂದು
ಬಂದುಹೋಕರ ಬದುಕಿನ ಭಾಗ್ಯನಿಧಿಯ ಭಂಡಾರವಾಗಿತ್ತು. ಭವಿಷ್ಯದ
ಭಗವದ್‍ಸನ್ನಿಧಿಯದಕೆ ಭಗವಂತನಾಗಿ
ಬಯಸಿದ ಭಾಗ್ಯಗಳನೆಲ್ಲ ಬದಿಗೊತ್ತಿದ ಬ್ರಹ್ಮರ್ಷಿಯೊರ್ವನವ ಬೃಹದ್‍ವೃಕ್ಷದ
ಬುಡದಲಿ ಬ್ರಹ್ಮಾಸನನಿಹನು.
ಚಲಿಸುವ ಚಿತ್ರದೊಳಗೆ ಚಿತ್ತವನಿಟ್ಟಿರಲು ತದೇಕಚಿತ್ತನಾದನವ ರುರು. ಋಷಿಗಂಗಳಲಿ
ತನ್ನಕಂಗಳವ ಕಂಡು ಕನಲಿದನವ.
ಲಕ್ಷ್ಯಗೊಟ್ಟೀಕ್ಷಿಸಿರಲು ಆ ಋಷಿಯೇ ತಾನೆಂಬ ಅರಿವಾದೊಡನೆ ಅರಿತನವ.
ಮುಪ್ಪಿನ ಮುಸ್ಸಂಜೆಯೊಳಗೆ

ತಾನಿಹೆನು ತಾರಾಲೋಕದಡಿಯ ತಪಸ್ಸಿನ ತವರುನಿಧಿ. ಅಲ್ಲಿ ಭವಿಷ್ಯದ
ಋಷ್ಯಾಶ್ರಮದಲ್ಲಿ ಮಹರ್ಷಿಯಾಗಿ ಮಂಡಿಸಿಹ
ತನ್ನನು ಬಳಸಿ ಬೆಳಗಿದ ಬ್ರಹ್ಮಬಾಲಕರೆಲ್ಲ ಒಟ್ಟಾಗಿ ಒಂದೆಡೆಗೆ ನೆರೆದುನಿಂತು
ನೂರಾವರ್ತದಲಿ ನೂರ್ಮಡಿಸುವೊಲು
ಪಠಿಸಿಹರು ವೇದೋಕ್ತಗಳ, ಯಜಿಸಿಹರು ಯಜ್ಞಯಾಗಾದಿಗಳ, ಭಜಿಸಿಹರು
ಭಗವತ್‌ಗೀತೆಗಳ.
ಹವನವ ಗೈದು, ಹವಿಸ್ಸನ್ನಿತ್ತು, ಹವ್ಯಕವ್ಯಗಳೇ ಹವ್ಯಾಸವಿಹ ಹಂದರದೊಳಗೆ
ಹತ್ತಾರು ನಾಡಿನ ನೃಪಾಲರು
ನಾನಿಡುವ ನೇಮಕಾಗಿ ನೆತ್ತಿಯನೆತ್ತಿ ನಿಂತಿಹರು, ಕೈಮುಗಿದುಕಟ್ಟಿ ಕುಳಿತಿಹರು.
ಆಜ್ಞೆಗಾಗೆಂದು ಆಲಿಸಿಹರು.
ಸುತ್ತೆಲ್ಲ ಸುಳಿದ ಸುಮಲತೆಗಳ ಪುಷ್ಪೋದ್ಯಾನದಿ ಪಲ್ಲವಿಸಿದ ಪಾರಿಜಾತಾದಿ
ಪುಷ್ಪಗಳವು ನರುಗಂಧವನಿತ್ತು ನೆರೆದಿಹುದು.
ಜಟೆ ಬಿಟ್ಟ ಜಂಗಮರೊಲು ಜಾಗದಲಿ ಜಾಲಂಧರವನಿಳಿಸಿ ವರ್ಧಿಸಿಹವವು
ವಟವೃಕ್ಷಗಳೆಂಬ ವನರಾಜಿಗಳ ರಾಜರು.
ಎಲ್ಲರಿಂದ ಎಲ್ಲತರಿಂದ ಎಲ್ಲೆ ಮೀರುವೊಲು ಪೂಜ್ಯನೀಹ ಪರಮಪಿತನಾಗಿರುವ
ಪುಣ್ಯಕ್ಷಣಗಳಲಿ
ದಿವ್ಯತೆಯನು ಧರಿಸಿ ಅನಂತತೆಯೊಳಗೆ ಒಂದಾಗಿ ವಂದನೀಯನಾಗುವಾ ಒಂಟಿ
ಕ್ಷಣವ ಕಂಡನವ
ಕಣ್ರೆಪ್ಪೆಗಳವು ಕದಲದೊಲು ಕಂಡನವ ಬದುಕಿನ ಮುಸ್ಸಂಜೆಯ ಮಹಾಕ್ಷಣಗಳ.
ಅಸ್ತಂಗತದ ಅಮಲಿನಲಿ ಅಡರಿಹೋದವೆಲ್ಲ ಆಕಾಂಕ್ಷೆಗಳು. ಮುದುಡಿಹೋದವೆಲ್ಲ
ಮನದ ಮಹಾತ್ಮ್ಯೆಗಳು
ಸುಳಿದಿರುವ ಸೌಂದರ್ಯದೊಳಗೆ ಸರಿದೋದವೆಲ್ಲ ವಿಶ್ವದ ಬೇರುಗಳು, ಕಳೆದೋದವೆಲ್ಲ
ಕಾಂತನ ಕಾಂಕ್ಷೆಗಳು.
ನೆತ್ತಿಮೇಲಿನ ನೀಲದಲಿ ನರ್ತಿಸಿ ಸುತ್ತು ಹಾಕಿರಲೊಂದು ಕ್ರೌಂಚಪಕ್ಷಿಯು,
ಕರ್ಣದಲಿ ಕೇಳಿರಲೊಂದು ಮನತರಂಗಿಣಿಯ ಮರ್ಮರವು
ಕೊಡವಿಕೊಂಡೆದ್ದನವ. ಎತ್ತಲೆತ್ತಲೋ ಸುತ್ತಿದ ಬಯಕೆಯ ಬಣ್ಣವದು
ಬಿಳಿಚಿಕೊಂಡಿರಲು ತಡವರಿಸಿಕೊಂಡೆದ್ದನವ.
ಆತ್ಮದ ಆಂತರ್ಯದೊಳಗೆ ಅಡಗಿಕೊಂಡಿದ್ದ ಅರ್ಧಉಷೆಯರ್ಧನಿಶೆಯನೆತ್ತಿ
ನೆಲಕೊಗಿದನವ.

ಸಿಡಿದ ಸಿಡಿಲೊಂದು ಮೊಳಗುವ ಮಿಂಚಿನಂತದನು ಹೊಂಚಿ ಹೊರಹಾಕಿದನವ.
ಕಳೆದ ಕತ್ತಲಿನಿಂದ ಬತ್ತಲ ಬೆಳಕಾಗಿ ಬೆಳಗಿದನವ.
ನರಕದ ನಿಶೆಯೊಳಗೆ, ಬೆಳಕಿರದ ಬಾವಿಯೊಳಗೆ ಬಂದಿಳಿದು ನಿಂದವನ ಬಳಸಿ
ಬೆಳೆದಿಹ ರಾತ್ರಿಯೊಳಗೆ
ಬೆಳಗಿವನ ಬಿಟ್ಟು ಬರಿದೆ ಧೂಸರದ ಬತ್ತಲಬಾವಿಯದು ಕವಿದಿರುವ ಕತ್ತಲೆಯೊಳಗೆ
ಕುಳಿತಿತ್ತು.
ಕಾರ್ಮಣನ ಕೈಯೊಳಿಹ ಕಾಮನ ಕುಸುಮವದು ಪಸರಿಸಿದ ಪರಿಮಳದ ಪ್ರಘಾತಕೆ
ಪರಿತಪಿಸಿತ್ತದು ಪಾತಾಳ
ಆನಂದವನೇ ಅರಿಯದ ಅಂಧತಮಸ್ಸಿನಲಿ ಅರಿವೆದ್ದಿರಲು ಆಗಂತುಕನನು
ಆಪೋಶನಗೈಯಲೆಂದು
ಕಾದು ಕುಳಿತಿಹ ಕ್ರೂರನಾಗರ ಕಂಗಳಲಿ ಕಂಡರಿಸಿದ ಕೆಂಡವದು ಕರಗಿ
ಕಂಬನಿಯಾಗಿತ್ತು. ಕರುಣೆಯಾಗುತದು ಕಲೆತಿತ್ತು.
ಪ್ರಪಂಚವನೇ ಪಾತಾಳದೊಳಗಿಲ್ಲಿ ಪವಡಿಸುವೊಲು ಪ್ರತೀಕ್ಷಿಸಿದ್ದ ಪ್ರಭೃತಿಗಳವು
ಪಲಾಯನವಾದವ ಪಠಿಸಿದ್ದವು.
ಮಾನಸರಿಗೂ ಮಣಿಯದ ಮಹಾಯಜ್ಞವದನು ಮುಡಿಗೇರಿಸಿಕೊಂಡೆದ್ದ
ಮಾನುಷನ ಮಹಾತ್ಮೆಯ ಮನಗಂಡು
ಮಾತನಾಡಿತ್ತೊಂದು ಮನದ ಮೂಲೆಯೊಳಗಿಂದೆದ್ದ ಧ್ವನಿಯೊಂದು, “ಏಳು,
ಎದ್ದೇಳು! ಕಾಲವೆಂದೂ ಕಂಡರಿಯದ
ಕಲಹವದು ಕೊನೆಯಾಗಿ ಕಲ್ಯಾಣಮಯದ ಕೊಡುಗೆಯನಿತ್ತಿಹುದು. ನೀನೆದುರಿಸಿದ
ನಿಶೆಯ ಹಂದರವದು ಹಸನಾಗಿ ಹರಿದು
ಬೆಳಕೊಂದು ಮೂಡಿಹುದು. ನೀ ಹೊತ್ತ ಭಾರವದು ಬಟಾಬಯಲಾಗಿ ಭವಿಷ್ಯವನೇ
ಬದಲಿಸುವ ಭಾಗ್ಯನಿಧಿಯಾಗಿಹುದು.”
ಧುಮುಗುಟ್ಟಿದ ಧ್ವನಿಯದು ಕತ್ತಲೊಳಗೆ ಕರಗಿ ಬತ್ತಲಾಗಿ ಕಳೆದೋಗಿರಲು
ರುರುವಿನ ಕಾರ್ಮಣವದು
ಮೃತ್ಯುವಿನ ಮಂಡಲವನು ಮರೆತು ಮೇಲೇರತೊಡಗಿತು. ಅವತರಣಗೊಂಡ
ಅಮರಾತ್ಮವದು ಅಲೋಕದೆಡೆಗಾರೋಹಿಸಿತ್ತು.
ಹನ್ನೆರಡು ಬಾರಿ ವೈತರಣಿಯನು ದಾಟಿ, ಮತ್ತೆ ಹನ್ನೆರಡು ಬಾರಿ ನರಕವನೇ
ಮೀಟಿ ಮೇಲೇರಿತ್ತು.

ಮುಂದುವರಿದಿರಲು ಸುತ್ತಿಸುಳಿಯುತಿಹ ಕರಾಳಮಯದ ಕೊಳ್ಳದೊಳಗೆ ಕೆಳಗಿಳಿದಿತ್ತು.
ಕಾಣುವ ಕನಸಿನೊಳಗೆ ಸುಳಿದು ಸುಲಿಗೆಗೈಯುವ ಸೂತ್ರಗಳೊಲು ಸುಸ್ಪಷ್ಟವಿಹ
ಸುರಂಗವೊಂದರೊಳಗೆ ಸುಳಿದಿತ್ತು.
ಕುಹರದೊಳಗೆ ಕಾಲಿಡುತಿದ್ದಂತೆ ಸಿಡಿಲೊಂದು ಸಿಡಿದಿತ್ತು, ಗುಡುಗೊಂದುಗುಡುಗಿತ್ತು,
ಮಿಂಚೊಂದು ಮಿಂಚಿತ್ತು.
ಪಥವಿರದ ರಾತ್ರಿಯದು ಕೊನೆಮೊದಲಿರದ ಕತ್ತಲೆಯೊಳಗೆ ಕಳೆದೋಗಿತ್ತು.
ಕರಾಳದಲಿ ಕಣ್ಗೆನೂ ಕಾಣದಾಗಿತ್ತು.
ಕಾವಳದಲಿ ಕೈಯಾಡಿಸಿ ಕಾಲಾಡಿಸಿ ಕುಂಟುತ್ತಾ ಕ್ರಮಿಸಿರಲು, ಬಂಡಾಯವಿರದ
ಭ್ರಮಾಲೋಕವದು
ದಂಡನೆಯನ್ನೇ ದರ್ಶನವಾಗಿಸಿತ್ತು, ಶಿಕ್ಷೆಯನೇ ಶಿಕ್ಷಣವಾಗಿಸಿತ್ತು, ಕಂಡ ಕಾಣ್ಕೆಯನೇ
ಕಲುಷಿತವಾಗಿಸಿತ್ತು,
ಚೈತನ್ಯವನೇ ಚೀತ್ಕಾರವಿಡುವೊಲು ಚಿತ್ರಹಿಂಸೆಯನಲ್ಲಿ ಚಿತ್ರಿಸಿತ್ತು, ನೋವುಗಳೇ
ನೃಪಸನ್ನಿಧಿಯನಲ್ಲಿ ಸೂರೆಗೈದಿತ್ತು,
ವೇದ್ಯವಿರದ ವೇದನೆಗಳೇ ಧ್ವನಿಯೇಳದೊಲದನು ದಫನವಾಗಿಸಿತ್ತು,
ಅಮಾನವೀಯದ ಆಲೋಚನೆಗಳೇ ಆಲಯದೊಳಗಲ್ಲಿ ಆಸೀನವಾಗಿತ್ತು,
ಚಾರುದಿಶೆಗಳನೇ ಚಂಚಲಮಯಗೊಳಿಸುವೊಲಿಹ ಚೀತ್ಕಾರಗಳವು ಚಲಿಸಿ ಛಂಗನೇ
ಗೋಳದ ಗೋಡೆಯನು
ದಾಟಿ ಮುಂದೋಡದಂತೆ ತಡೆದವುಗಳನು ತಡೆಯಾಜ್ಞೆಯನಿತ್ತಿಹುದೊಂದು
ಕಬ್ಬಿಣದ ನೂರೊಂದು ಭಿತ್ತಿಯದು.
ಇಂತು ಕಂಡುಂಡ ಕಾರಾಗೃಹದ ದಂಡನೆಗಳನೆಲ್ಲ ದೂರಾವರ್ತದಲಿಹರಿಗೆ
ದೂರನಿತ್ತು ದುರ್ಗಮದಿಂದ
ದೂರವಾಗುವ ದಾರಿಯಿರದೆ ದಿಗ್ಗೇಡಿಯಾದ ದೀನಾತ್ಮಗಳವು ಅಳುತಿರುವ
ಆಯಕಟ್ಟಿನೊಳಗೇ ಅಲವತ್ತುಕೊಂಡಿಹವು,
ಸೀಮಾಂತವಿರದೆ ಸಂತತವಿಹ ಸಂಕಟದಲಿ ಸುಟ್ಟುರಿದು ಸುಮ್ಮನಾಗೊರಗಿಹವು,
ಬಂಧನದೊಳಗಿಂದ ಬೇರಾಗಿ
ಭವಿಸುವ ಬಂಡಾಯದ ಬಳ್ಳಿಯೊಂದಿರದೆ ಬಿಳಿಚಿದ ಬಣ್ಣದೊಳಗಿಂದೊಳಗೇ
ಹಣ್ಣಾಗಿಹವು. ಸವೆದು ಸಣ್ಣಾಗಿಹವು.
ಆಂತರ್ಯಕ್ಕಿಳಿಯದೆ ಅಂತರಾತ್ಮಾಯತನದೆಡೆಗೇರದೆ ಅಂತರ್‌ಪಿಶಾಚಿಯಿಹ
ಆತ್ಮವದು ಉಸಿರಿರದೆ ಹುಸಿಯಾಗಿತ್ತು.

ಕೊನೆಗೂ ಕರಾಳಮಯವಿಹ ಕೊನೆಯ ನರಕದ ನಿಲುವಿನಲು ನಿಂತು ನೇರವೇರಿರಲು
ನೆರವೇರಿತ್ತವನ ನೇಮ.
ಅಂತಿಮ ನರಕದ ನಾಲೆಯ ನಿಲುವಿನಲೇ ನಲಿಯುತ್ತಿದ್ದಳವಳು ನೀಲಾಕಾಶದಡಿಯ
ನೀರೆಯವಳು ನಿರ್ಮಲ ಗಂಗೆ.
ಪಾತಾಳದ ಪಾವಟಿಗೆಯೊಲಿಹ ಪಾತಾಳಗಂಗೆಯಿಂದೆದ್ದು ಪಾದವಿರಿಸಿದ್ದನವ
ಪರಮಪಾವನವಿಹ ಪೃಥಿವಿಗಂಗೆಯ ಪ್ರವಾಹಿನಿಯೆಡೆಗೆ.

**ಮರಳು ಪಯಣ**


ಕರ್ಮನೆಲೆಯ ಕಾರ್ಮಣವದು ಕಾರ್ಯವೊಂದನು ಹೊತ್ತು
ಕರಾಳದೆಳೆಡೆಗವರೋಹಿಸಿತ್ತು.
ಕರ್ಮದ ಕಾರ್ಯಾಗಾರದಲಿ ಕೃತಾಂತನನೇ ಕರಗಿಸಿ ಕುಲಭೂಮಿಯೆಡೆಗಾರೋಹಿಸಿತ್ತು.
ಗಂಗೆಯಿಂದೆದ್ದು ಗೋಚರಿಸಿ ಗಾಂಭೀರ್ಯನಿಹ ರುರುವವನು ಪ್ರಿಯಂವದೆಯ
ಪ್ರಿಯವದನವ
ಕಾಣಲೆಂದು ಕತ್ತೆತ್ತಿ ಸುತ್ತೆಲ್ಲ ಶೋಧಿಸಿರಲು,ಸಾವರಿಸಿಕೊಂಡೆದ್ದು ಸಂಶೋಧಿಸಿರಲು
ತರಂಗಿಸುತಿಹ ತರಂಗಿಣಿಯ ತೆರೆಯ ಮೇಲೆ ತರಣಿಯೊಲು ತೇಲುತಿಹ
ತರುಣಿಯ ಕಂಡನವ.
ಕತ್ತಲೊಳಗಿಂದೆದ್ದು ಬತ್ತಲಾದ ಭ್ರಮನಿರಸವಿಹ ಬರಿಮೇಯ್ಯ ಭಾಮಿನಿಯವಳ
ಭ್ರೂಮಧ್ಯದಲಿ ಬಣ್ಣವಿರಲಿಲ್ಲ
ಭೂರಮೆಯ ಬಿಸಿಯುಸಿರಿನ ಭರವಸೆಯಿದ್ದರೂ, ಬಾನಂಗಳದಿ ಭವಿಸಲಿಕ್ಕಿರುವ
ಭಾಗ್ಯವಿರಲಿಲ್ಲ.
ರಂಜನೆಯ ರಕ್ತದ ರಾಯಭಾರವಿರದೆ ಬಣ್ಣವನೆಲ್ಲ ಬಿಟ್ಟು ಬಿಳಿಚಿಕೊಂಡಿಹ
ಗುಲಾಬಿಯಂತಾಗಿಹಳು.
ಮಳೆಗಾಲದ ಮೇಘಗಳು ಮುತ್ತಿ ಮರೆಯಾಗಿಸಿಹ ಮಾರ್ತಾಂಡನ ಮೊಗದಂತವಳು
ಮಂದವಾಗಿಹಳು.
ಎದ್ದನವ, ಎದ್ದುಬಿದ್ದೋಡಿದನವ, ಭಯದ ಭಾವನೆಯಿಂದೋಡಿ ಬಳುಕುತಿಹ
ಭಾಮಿನಿಯ ಬಳಿಸಾರಿ ನಿಂದನವ.
ದುಸ್ವಪ್ನದ ದಾಳಿಯೊಳಗಾದ ದೀನನಂತೆ ದುಃಖಾರ್ತನಾದರೂ ದೇವಗಣದಿಂದೊರೆತ
ದಿವ್ಯತೆಯನು ಧರಿಸಿರಲು

ಬಿಡದೆ ಬೆನ್ನಟ್ಟಿ ಬಂದ ಭಯವೆಂಬ ಭೂತವದು ತೆರೆದ ಬಾಗಿಲಿನಿಂದೋಡಿ
ಮರೆಯಾಗಿತ್ತು. ಮತ್ತೆ ಮೂಡದಂತಾಗಿತ್ತು.
ಕಳೇಬರದೊಲು ಕಂಡ ಕನ್ಯೆಯೆಡೆ ಕೂತವಳ ಕೆನ್ನೆಯನು ತಟ್ಟಿತಡವಿದನವ.
ಮೂಕಮರ್ಮರವದು ಮಾತಾಗಿ ಮೂಡಿರಲು ಹಳೆಯ ಹೆಸರಿಡಿದು ಕೂಗಿದನವ.
ಪ್ರೇಮದ ಪ್ರಖರತೆಯನು ಪ್ರಚುರಪಡಿಸಲೆಂಬಂತೆ ರುರುವಿನಿಂದೊಗೆದ
ಪ್ರಿಯಂವದೆಯೆಂಬೊಂದು ಕರೆಯಿಂದಾಗಿ
ನರಕದ ಭಿತ್ತಿಯದು ಒಡೆದಿತ್ತು. ಬೆಳಕಿನ ಮಾಲೆಯದು ಕೆಳಗಿಳಿದಿತ್ತು.
ಕಾಲಾಂತದಿಂದಲೂ ಕಣ್ಮುಚಿ
ಕನಸಿನ ಕಾರಾಣೆಯೊಳಗೆ ಬಂಧಿತಳಾಗಿದ್ದ ಭಾಮಿನಿಯ ಭ್ರಮಣದಲಿ ಭ್ರಮಿಸಿತ್ತು
ಬರಿ ಬೂದುಸಾಗರ,
ಚಾರುದಿಶೆಗಳಲಿ ಚಂಚಲಮಯವಿಹ ಚೀತ್ಕಾರವಿರಲು ಚೈತನ್ಯವಿರದ ಚೇತನಳಾಗಿ
ಒರಗಿಕೊಂಡಿಹ
ಪ್ರಿಯಂವದೆಯು, ಆಳದೊಳಗಿಂದೆದ್ದು ಬಂದು ನೀಳವಾದ ಪ್ರಿಯಕರನ
ಪ್ರಿಯಧ್ವನಿಯದನು ಕೇಳಿದೊಡೆ
ಕವಿದಿರುವ ಕತ್ತಲಿನೊಳಗಿಂದಲೇ ಕಾಂತನವ ಕೈಹಿಡಿದು
ಕರೆದೊಯ್ಯುತಿರುವಂತಾಗಿರಲು ಕೇಳಿ ಕಣ್ತೆರೆದಳು.
ಗಾಢಾಂಧಕಾರದ ಗವಿಯಿಂದೇಳುವೊಲು ಗಾಢನಿದ್ರೆಯಿಂದೆದ್ದು ಗಮನಿಸಿದಳವಳು.
ಸುತ್ತೆಲ್ಲ ಮುತ್ತಿದ್ದ ಮಹಾನಿಶೆಯು ಮುಗಿದು ಮರ್ತ್ಯವದು ಮೂಡಿರುವದ
ಮನಗಂಡಳವಳು.
ಮರಳಿ ಮೂಡಿದ ಮಹಾಭಾಗ್ಯನಿಧಿಯೊಲಿಹ ಮನದನ್ನೆಯವಳು ಮೊಗದೆದುರು
ಮೂಡಿ ಮಾತನಾಡಿಹುದ
ಕಂಡಿರಲು ಮನಗಂಡಿರಲು ಮಡಗಿದ್ದ ಮರ್ತ್ಯವದು
ಮಹಾಪರ್ವವನಾಚರಿಸುವೊಲು ಮೊಳಗಿತ್ತು.
ವಿಶ್ವವದು ವಿಶ್ವವ್ಯಾಪಿಯಾಗಿ ವ್ಯಾಪಿಸಿದಂತಾಗಿತ್ತು. ವ್ಯಾಪಿಸುತಲಿ ಆಪೋಶಿಸಿದಂತಾಗಿತ್ತು.
ಅಲೋಕದಿಂದಿಳದ ಆನಂದಮಯವದು ದೈನಂದಿನದ ದುಃಖವನೆಲ್ಲ ಅಳಿಸಿ
ಆಲಾಪಿಸಿದಂತಾಗಿತ್ತು.
ಹಿಮಾಲಯದ ಹೊನ್ನಶಿರವನೇರಿ ಹೊದಿಕೆಯಿರದ ಹಿಮದ ಹಾಸಿಗೆಯ
ಮೇಲೇರಿ ಮಲಗಿದಂತಿತ್ತು

(ಸಶೇಷ)

## ಮುಕುಲ ಚಂದ್ರರ
## “ಶ್ರೀ ಅರವಿಂದರ ಚಿತ್ರ ರಚನೆ”

**– ಅನು: ಶ್ರೀ ರಮೇಶ ಸರಗೂರ, ಮೈಸೂರು**



ಆಗ 1919 ನೆಯ ಇಸವಿ. ನಾನು ಮದ್ರಾಸಿನಲ್ಲಿದ್ದೆ. 1917 ರಲ್ಲಿ “ಬಂಗಾಳದ ಹನ್ನೆರಡು ಭಾವಚಿತ್ರಗಳು” ಎಂಬ ನನ್ನ ಪುಸ್ತಕವು ಪ್ರಕಟವಾದ ನಂತರ ಬಾಂಬೆ ಮತ್ತು ದಕ್ಷಿಣ ಭಾರತದ ಪ್ರವಾಸವನ್ನು ನಾನು ಮಾಡಿದೆ. ನಂತರ ಮದ್ರಾಸಿಗೆ ಬಂದೆ. ಇಂಗ್ಲೆಂಡಿಗೆ ಮರಳಿ ಹೋಗುವ ಮುನ್ನ ನನ್ನ ಸ್ವದೇಶವನ್ನು ಚೆನ್ನಾಗಿ ಸುತ್ತಿ ನೋಡುವುದು ನನ್ನ ಗುರಿಯಾಗಿತ್ತು. ಹಾಗೆಯೇ ನನ್ನ ಪ್ರಯಾಣಕ್ಕೆ ಸಂಪಾದನೆಯನ್ನು ಮಾಡಿಕೊಳ್ಳಬೇಕಿತ್ತು. ಆ ಕಾಲಘಟ್ಟದಲ್ಲಿ ನಾನು ನನ್ನ ಪೆನ್ಸಿಲ್

ನಿಂದ ಭಾವಚಿತ್ರಗಳನ್ನು ಮೂಡಿಸದ ಯಾವ ಪ್ರಖ್ಯಾತ ವ್ಯಕ್ತಿಯೂ ದಕ್ಷಿಣ ಭಾರತದಲ್ಲಿ ಇರಲಿಲ್ಲ. ಆ ಎಲ್ಲಾ ಪ್ರಸಿದ್ಧ ವ್ಯಕ್ತಿಗಳ ವಿಶೇಷ ಸಹವಾಸವನ್ನು ಮತ್ತು ವಿಶ್ವಾಸವನ್ನು ನಾನು ಗಳಿಸಿದ್ದೆ.

ಅಡ್ಯಾರಿನ ಥಿಯೋಸಾಫಿಕಲ್ ಸೊಸೈಟಿಯ ಪ್ರಚಾರ ವಿಭಾಗದ ಮುಖ್ಯಸ್ಥರಾಗಿದ್ದವರು ಶ್ರೀ ಬಿ.ಪಿ. ವಾಡಿಯ. ಶ್ರೀಮತಿ ಅನಿಬೆಸೆಂಟ್ ಮತ್ತು ವಾಡಿಯ ಅವರು ಬಹಳ ಆಸಕ್ತಿಯಿಂದ ನನ್ನ ಕಲಾ ಕೃತಿಗಳನ್ನು ನೋಡಿ ಸಂತಸಪಟ್ಟರು. “ಮುಕುಲ್ ದೇ, ಪುದುಚೇರಿಯಲ್ಲಿರುವ ಶ್ರೀ ಅರವಿಂದರ ಭಾವಚಿತ್ರವನ್ನು ಸಿದ್ಧಪಡಿಸಿ ಇಲ್ಲಿಗೆ ತಂದುಕೊಟ್ಟರೆ, ನಾವು ಕೂಡ ಈ ರೀತಿಯ ಪುಸ್ತಕವನ್ನು ಮದ್ರಾಸಿನಿಂದ ಪ್ರಕಟಿಸುತ್ತೇವೆ. ಏಕೆಂದರೆ, ಶ್ರೀ ಅರವಿಂದರ ಭಾವಚಿತ್ರವಿಲ್ಲದೆ ದಕ್ಷಿಣ ಭಾರತದ ಭಾವಚಿತ್ರಗಳ ಸಂಕಲನವು ಅಪೂರ್ಣವಾಗಿ ಉಳಿದುಬಿಡುತ್ತದೆ” ಎಂದು ಅವರು ಅಭಿಪ್ರಾಯ ಪಟ್ಟರು. ನಾನು ತಕ್ಷಣವೇ ಒಪ್ಪಿಕೊಂಡೆ. “ನಿಶ್ಚಯವಾಗಿಯೂ ನಾನು ಅವರ ಭಾವಚಿತ್ರವನ್ನು ಬಿಡಿಸಿ ತರುತ್ತೇನೆ” ಎಂದು ವಾಗ್ದಾನವಿತ್ತೆ. ನಾನು ನಿಜವಾಗಿಯೂ ಯಶಸ್ವಿಯಾದೆ. ಆದರೆ ಚಿತ್ರಕಲೆಯ ಆನಂದಕ್ಕಿಂತಲೂ ಹೆಚ್ಚಿನದನ್ನು ನಾನು ಈ ಪ್ರಸಂಗದಲ್ಲಿ ಪಡೆದೆ.

ಮನೆಗೆ ಮರಳಿ ಬಂದ ನಂತರ ನಾನು ಚಿಂತೆಗೀಡಾದೆ. ಪುದುಚೇರಿಗೆ ಹೇಗೆ ಹೋಗಲಿ? ಪೊಲೀಸರು ನನ್ನನ್ನು ಅನುಮಾನದಿಂದ ನೋಡಿ, ಇಂಗ್ಲೆಂಡಿಗೆ ತೆರಳಬೇಕಾದ ನನ್ನ ಪಾಸ್‌ಪೋರ್ಟನ್ನು ರದ್ದು ಮಾಡುವುದಿಲ್ಲವೇ? ಇಂಗ್ಲೆಂಡಿಗೆ ಹೋಗುವುದರ ಬಗ್ಗೆ ನನ್ನ ನಿರ್ಧಾರ ಅಚಲವಾಗಿತ್ತು. ಸ್ವಲ್ಪ ಹಿಂಜರಿಕೆಯಿಂದಲೇ ನಾನು ವಿಚಿತ್ರವಾದ ಮಿಶ್ರಿತ ಉಡುಪುಗಳನ್ನು ಧರಿಸಿದೆ. ನನ್ನನ್ನು ಒಬ್ಬ ಬಂಗಾಳಿ ಎಂದು ಯಾರೂ ಗುರುತಿಸಬಾರದು ಎಂಬ ಉದ್ದೇಶ. ಸಾಕ್ಸ್, ಶೂಗಳು, ಪ್ಯಾಂಟು, ಟೈ ಮತ್ತು ಒಂದು ಉದ್ದನೆಯ ಕೋಟು... ಇವುಗಳ ಜೊತೆಗೆ ಜಪಾನಿನಿಂದ ನಾನು ತಂದಿದ್ದ ವಿಶೇಷವಾದ ಟೋಪಿಯನ್ನು ಧರಿಸಿದೆ. ಆ ಟೋಪಿಯು ಸ್ವಲ್ಪಮಟ್ಟಿಗೆ ಇಂದಿನ ಗಾಂಧಿ ಟೋಪಿಯನ್ನು ಹೋಲುತ್ತದೆ. ಅದನ್ನು ಮಡಿಸಿ ಕಿಸೆಯಲ್ಲಿ ಇಡಬಹುದಾಗಿತ್ತು. ಅಗತ್ಯ ಬಿದ್ದಾಗ ತಲೆಯನ್ನು ಮುಚ್ಚಲು ಅದನ್ನು ಬಳಸಬಹುದಿತ್ತು. ನನ್ನ ನಡಿಗೆ ಮತ್ತು ನನ್ನ ವಸ್ತ್ರಗಳನ್ನು ಕಂಡು ಕೆಲವರು ಗೋವಾದ ವ್ಯಕ್ತಿಯೆಂದು, ಕೆಲವರು ಮದ್ರಾಸಿ ಎಂದು ಮತ್ತೆ ಕೆಲವರು ಆಂಗ್ಲೋ ಇಂಡಿಯನ್ ಎಂದು ತಿಳಿದರು. ಆದರೆ ಯಾರೊಬ್ಬರೂ ನಾನೊಬ್ಬ ಬಂಗಾಳಿ

ಎಂದು ಅರಿಯಲಿಲ್ಲ. ನಾನು ಆಡುತ್ತಿದ್ದ ಕೆಲವೇ ಶಬ್ದಗಳು ಮದ್ರಾಸಿ ಶೈಲಿಯ ಇಂಗ್ಲೀಷ್‌ನಲ್ಲಿ ಇರುತ್ತಿದ್ದವು. ಹೀಗೆ ರೈಲಿನಲ್ಲಿ ಕ್ಷೇಮವಾಗಿ ಪುದುಚೇರಿ ನಿಲ್ದಾಣವನ್ನು ರಾತ್ರಿ 10–11 ಗಂಟೆಯ ವೇಳೆಗೆ ತಲುಪಿದೆ. ಬಳಿಕ ನನಗೆ ಪೀಕಲಾಟ ಆರಂಭವಾಯಿತು. ಬರುವುದೇನೋ ಬಂದಾಯ್ತು, ಆದರೆ ಉಳಿದುಕೊಳ್ಳುವುದೆಲ್ಲಿ?? ಎಂಬ ಚಿಂತೆ ನನ್ನನ್ನು ಮುತ್ತಿಕೊಂಡಿತು. ನನ್ನ ವರ್ತನೆಯಿಂದ ನಾನೊಬ್ಬ ವಿದೇಶಿ, ಆಗಂತುಕ, ಹೊಸಬ, ಬಂಗಾಳಿ ಎಂದು ಯಾರಾದರೂ ಗುರುತಿಸಿಬಿಟ್ಟರೆ ನಾನು ತೊಂದರೆಗೆ ಸಿಲುಕಿ ಬಿಡುತ್ತಿದ್ದೆ. ಪೊಲೀಸರು ನನ್ನನ್ನು ದಸ್ತಗಿರಿ ಮಾಡಬಹುದಿತ್ತು. ನನ್ನ ಬಳಿ ಯಾವುದೇ ಪರಿಚಯ ಪತ್ರವಾಗಲಿ ಪ್ರಶಂಸಾ ಪತ್ರವಾಗಲಿ ಅಥವಾ ಅನುಮತಿ ಪತ್ರವಾಗಲಿ ಇರಲಿಲ್ಲ. ಚಿಂತಿಸಲು ಸಮಯವೂ ಇರಲಿಲ್ಲ. ತಕ್ಷಣವೇ ನನಗೊಂದು ಉಪಾಯ ಹೊಳೆಯಿತು. ಪಾಂಡಿಚೆರಿಯನ್ನ ಚೆನ್ನಾಗಿ ಬಲ್ಲ, ಭೇಟಿ ನೀಡಿ ಪರಿಚಯ ಇರುವ ವ್ಯಕ್ತಿಯಂತೆ ಒಂದು ಕುದುರೆ ಗಾಡಿಯ ಬಳಿಗೆ ನಡೆದೆ. ಆ ಜಟಕಾ ವಾಲಾನನ್ನು ಯುರೋಪಿನ ಒಂದು ವೈಭವಯುತ ಫ್ರೆಂಚ್ ಹೋಟೆಲ್‌ಗೆ ನನ್ನನ್ನು ಕರೆದೊಯ್ಯಲು ಹೇಳಿದೆ.

ಕೆಲವು ಸಮಯದ ಬಳಿಕ ಮುಳ್ಳಿನ ಗಿಡ ಗಂಟಿಗಳು ಇದ್ದ ಒಂದು ಮಣ್ಣಿನ ರಸ್ತೆಯನ್ನು ಹಾದು ಆ ಕುದುರೆ ಗಾಡಿಯವನು ನನ್ನನ್ನು ಒಂದು ಐರೋಪ್ಯ ಹೋಟೆಲ್‌ನ ಮುಂದೆ ತಂದುಬಿಟ್ಟನು. ಕುದುರೆ ಗಾಡಿಯ ಹಣವನ್ನು ಕೊಟ್ಟು, ಹೋಟೆಲ್ ಮ್ಯಾನೇಜರ್ ಅನ್ನು ಭೇಟಿ ಮಾಡಿ, ಅತ್ಯಂತ ಕಡಿಮೆ ಬೆಲೆಯ ಕೊಠಡಿಯನ್ನು ನನಗೆ ಕೊಡಿ ಎಂದು ಕೇಳಿದೆ. ಆ ರೂಮಿಗೆ ದಿನಕ್ಕೆ ಆರರಿಂದ ಏಳು ರೂಪಾಯಿ ಬಾಡಿಗೆ. ಅದು ನೆಲ ಅಂತಸ್ತಿನಲ್ಲಿ ಇದ್ದ ಕೊಠಡಿ. ಅದರ ಛಾವಣಿಯು ಅತ್ಯಂತ ಕೆಳ ಭಾಗಕ್ಕೆ ಇದ್ದು, ತಲೆಗೆ ಬಡಿಯುತ್ತದೆಯೋ ಎನ್ನುವಂತಿತ್ತು. ಅದು ತೇವದಿಂದ ಕೂಡಿದ್ದ ಕತ್ತಲೆ ತುಂಬಿದ್ದ ಕೊಠಡಿಯಾಗಿತ್ತು. ಅದರ ಗೋಡೆಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದವು. ತಂಗಾಳಿ ಮತ್ತು ಬೆಳಕು ತೂರಿ ಬರುತ್ತಿದ್ದ ಅದರ ಕಿಟಕಿಯಿಂದ ಸಮುದ್ರವನ್ನು ವೀಕ್ಷಿಸಬಹುದಾಗಿತ್ತು. ಮ್ಯೂಸಿಯಂಗಳ ಉಗ್ರಾಣದಂತಿತ್ತು ಆ ಕೋಣೆ. ನಾನು ನೆಮ್ಮದಿಯ ನಿಟ್ಟುಸಿರು ಬಿಟ್ಟೆ. ಕಡೆ ಪಕ್ಷ ಆಸರೆಗಾಗಿ ಒಂದು ಸೂರನ್ನು ಪತ್ತೆ ಮಾಡಿಕೊಂಡಾಗಿತ್ತು.

ಆದರೆ, ಪಾಂಡಿಚೆರಿಗೆ ಬಂದ ಉದ್ದೇಶ ಅಂದರೆ, ಶ್ರೀ ಅರವಿಂದರ ಭಾವಚಿತ್ರವನ್ನು ಸಿದ್ಧಪಡಿಸುವವರೆಗೂ ನಾನು ಚಿಂತೆಯಿಂದ ಮುಕ್ತನಾಗಲು

ಸಾಧ್ಯವಿರಲಿಲ್ಲ. ಆದ್ದರಿಂದ, ಅಂದು ರಾತ್ರಿ ನಾನು ಚೆನ್ನಾಗಿ ನಿದ್ರಿಸಲಿಲ್ಲ. ಮರುದಿನ ಮುಂಜಾನೆಯೇ ಎದ್ದು ಆತುರಾತುರವಾಗಿ ಸಿದ್ಧವಾಗಿ, ಸ್ವಲ್ಪ ಉಪಹಾರ ಮಾಡಿ, ಬೀದಿಗಳಲ್ಲಿ ಅಡ್ಡಾಡಲು ಹೊರಟೆ. ಸ್ವಲ್ಪ ಕಾಲದಲ್ಲಿ ರಸ್ತೆಗಳ ಪರಿಚಯ ಮಾಡಿಕೊಂಡೆ. ಬಹಳಷ್ಟು ಸಮಯ ನಾನು ಸಮುದ್ರ ತೀರದಲ್ಲಿಯೇ ನಡೆದಾಡುತ್ತಿದ್ದೆ. ಶ್ರೀ ಅರವಿಂದರ ಬಗ್ಗೆ ಯಾರಾದರೂ ಮಾತನಾಡುವರೋ ಎಂದು ಮೈಯೆಲ್ಲಾ ಕಿವಿಯಾಗಿದ್ದೆ. ಶ್ರೀ ಅರವಿಂದರು ಸಮುದ್ರ ತೀರದಲ್ಲಿ ನಡೆದಾಡಿ, ವಿಹರಿಸಲು ಬರಬಹುದೇನೋ ಎಂದು ಕಣ್ಣನ್ನು ಹಿಗ್ಗಿಸಿ ಹಿಗ್ಗಿಸಿ ನೋಡುತ್ತಿದ್ದೆ. ಆದರೆ ನನಗೆ ಅವಶ್ಯಕವಾದುದನ್ನು ನಾನು ಅಲ್ಲಿ ನೋಡಲೂ ಇಲ್ಲ, ಅವರ ಬಗ್ಗೆ ಕೇಳಲೂ ಇಲ್ಲ. ಬಂದ ಕೆಲಸ ಯಡವಟ್ಟಾಗಿ ಕೆಟ್ಟುಹೋಗಬಹುದು ಎಂಬ ಅಂಜಿಕೆಯಿಂದ ಯಾರನ್ನೂ ವಿಚಾರಿಸುವ ಗೊಡವೆಗೆ ಹೋಗಲಿಲ್ಲ. ಈ ಸ್ಥಿತಿಯಲ್ಲಿ ಪಾಂಡಿಚೆರಿಯ ಬೀದಿ ಬೀದಿಗಳಲ್ಲಿ ಅಲೆಯುತ್ತಾ ರಸ್ತೆಗಳ ಪರಿಚಯ ಮಾಡಿಕೊಂಡೆ. ಮೂರು ದಿನಗಳು ಕಳೆದುಹೋದವು.

ಏಪ್ರಿಲ್ 20 ರಂದು ನಾಲ್ಕನೆಯ ದಿನ. ಪೆನ್ಸಿಲ್ ಮತ್ತು ಪ್ಯಾಡನ್ನು ನನ್ನ ಕಂಕುಳಲ್ಲಿ ಸಿಕ್ಕಿಸಿಕೊಂಡು ಸಮುದ್ರ ತೀರಕ್ಕೆ ಹೊರಟೆ. ಒಬ್ಬ ಸಭ್ಯ ವ್ಯಕ್ತಿಯನ್ನು ಪರಿಚಯಿಸಿಕೊಂಡೆ. “ಶ್ರೀ ಅರವಿಂದರು ನಿಜಕ್ಕೂ ಒಬ್ಬ ಒಳ್ಳೆ ವ್ಯಕ್ತಿ ಅಲ್ಲವೇ?” ಎಂದು ಆ ವ್ಯಕ್ತಿಗೆ ಹೇಳಿದೆ. ಅದಕ್ಕೆ ಆತನು ಮಾರುತ್ತರ ನೀಡಿದ್ದು ಹೀಗೆ: “ಹೌದು, ಖಂಡಿತವಾಗಿ. ಶ್ರೀ ಅರವಿಂದರು ತುಂಬಾ ಒಳ್ಳೆಯ ವ್ಯಕ್ತಿ. ನನಗೆ ಹಾಗೆಂದೇ ತೋರುತ್ತಾರೆ. ಆದರೆ ಅವರೆಂದೂ ಮನೆಯಿಂದ ಹೊರಗೆ ಬರುವುದಿಲ್ಲ. ಹಗಲು–ರಾತ್ರಿ ಆ ಹಳೆಯ ಮನೆಯ ಒಳಗೇ ಇರುತ್ತಾರೆ.” ಆಗ ನಾನು ಕೇಳಿದೆ, “ಅವರ ಮನೆಯು ಅಲ್ಲೇ, ಆ ಬದಿಗೆ ಇದೆ ಅಲ್ಲವೇ?” ಎಂದೆ. ಅದಕ್ಕೆ ಆತನು, “ಈ ಬದಿಯಲ್ಲಲ್ಲ, ಆ ಕಡೆ ಮುಂದಿನ ಬೀದಿಯಲ್ಲಿ ಅವರ ಮನೆ ಇದೆ” ಎಂದು ನುಡಿದನು. ಇನ್ನು ಯಾವ ಹೆಚ್ಚಿನ ಪ್ರಶ್ನೆಯನ್ನೂ ಕೇಳದೇ, ಆ ವ್ಯಕ್ತಿಗೆ ನನ್ನನ್ನು ಪ್ರಶ್ನಿಸಲು ಯಾವ ಅವಕಾಶವನ್ನೂ ನೀಡದೆ, ನಮ್ಮ ವಿರುದ್ಧ ದಿಕ್ಕಿಗಿದ್ದ ಆ ರಸ್ತೆಗೆ ಹೊರಟೆ. ಸಂಪೂರ್ಣ ಏಕಾಗ್ರತೆಯಿಂದ ದೇವರನ್ನು ಸ್ಮರಿಸುತ್ತಾ ಶ್ರೀ ಅರವಿಂದರ ನಿವಾಸದ ಬೀದಿಯನ್ನು ಹಿಡಿದೆ. ನನ್ನ ಮನಸ್ಸಿನಲ್ಲಿ ಭಯ, ಆತಂಕ, ಅಂಜಿಕೆ ಮನೆ ಮಾಡಿದ್ದವು. ನಾನು ಅವರನ್ನು ಭೇಟಿ ಮಾಡಬಹುದು ಎಂದು ಯಾರು ತಾನೆ ತಿಳಿದಿದ್ದರು?? ಮಾರ್ಗ ಮಧ್ಯದಲ್ಲಿ ಯಾವ ಅಡ್ಡಿಯೂ ಆಗುವುದಿಲ್ಲ ಎಂದು ಯಾರು ತಾನೇ ಅಂದುಕೊಳ್ಳಬಲ್ಲರು.

ಅದೊಂದು ಏಪ್ರಿಲ್ ತಿಂಗಳ ಮಧ್ಯಾಹ್ನ. ಸೂರ್ಯನು ಪ್ರಕಾಶವಾಗಿ ಬೆಳಗುತ್ತಿದ್ದನು. ಬೀದಿಗಳು ಬಹುತೇಕ ನಿರ್ಜನವಾಗಿದ್ದವು. ಡವಡವಿಸುತ್ತಿದ್ದ ಹೃದಯದಿಂದ ಒಂದಿಬ್ಬರು ವ್ಯಕ್ತಿಗಳನ್ನು ವಿಚಾರಿಸಿ ಸರಿಯಾದ ಮನೆಯನ್ನು ಪತ್ತೆ ಮಾಡಲು ನಾನು ಸಮರ್ಥನಾದೆ. ಅದೊಂದು ಎರಡು ಅಂತಸ್ತಿನ ಅತ್ಯಂತ ಹಳೆಯ ಶಿಥಿಲವಾದ ಮನೆಯಾಗಿತ್ತು. ಗೋಡೆಗಳು ಬಹುಶಃ ಹಿಂದೊಮ್ಮೆ ಹಳದಿ ಬಣ್ಣಕ್ಕೆ ಇದ್ದಿರಬಹುದು. ಈಗ ಅವುಗಳ ತುಂಬಾ ಮುಕ್ಕುಗಳು ಬಿರುಕುಗಳು ಇದ್ದು, ಹಸಿರು ಬಣ್ಣಕ್ಕೆ ತಿರುಗಿತ್ತು. ಗೋಡೆಗಳ ಪ್ಲಾಸ್ಟರ್ ಹಲವು ಕಡೆ ಕಿತ್ತುಬಂದು, ಒಳಗಿನ ಕೆಂಪು ಇಟ್ಟಿಗೆಗಳನ್ನು ತೋರುತ್ತಿದ್ದವು. ಬಾಗಿಲುಗಳು ಮತ್ತು ಕಿಟಕಿಗಳು ವಿಶಾಲವಾಗಿ ತೆರೆದಿದ್ದವು. ಕಂಪಿಸುತ್ತಿದ್ದ ಹೃದಯ ಮತ್ತು ಭಯಗ್ರಸ್ಥ ಕಣ್ಣುಗಳಿಂದ ನಾನು ನಿಧಾನವಾಗಿ ಆ ಮನೆಯನ್ನು ಪ್ರವೇಶಿಸಿದೆ. ಆ ಮನೆಯ ಅಂಗಳದಲ್ಲಿ ಒಂದು ಬಾಳೆ ಮರವಿತ್ತು. ಅದರ ಎಲೆಗಳೆಲ್ಲ ಹರಿದಿದ್ದವು. ಬೆಳೆದಿದ್ದ ಹುಲ್ಲು ಮತ್ತು ಕಳೆ ಗಿಡಗಳಿಂದ ತುಂಬಿದ್ದ ಮನೆಯ ಅಂಗಳವು ಮಂಡಿಯವರೆಗೆ ಬೆಳೆದಿದ್ದ ಚಿಕ್ಕ ಕಾಡಿನಂತೆ ಕಾಣುತ್ತಿತ್ತು. ಒಂದು ಜಾಗದಲ್ಲಿ ಇದ್ದಿಲಿನ ರಾಶಿಯೇ ಇತ್ತು. ಮತ್ತೊಂದೆಡೆ ಸೌದೆಗಳನ್ನು ಸೇರಿಸಲಾಗಿತ್ತು. ಎಲ್ಲ ವಸ್ತುಗಳು ಚಲ್ಲಾಪಿಲ್ಲಿಯಾಗಿ ಅವ್ಯವಸ್ಥಿತವಾಗಿ ತೋರಿ ಬಂದವು. ಎರಡು ಮೂರು ಬೆಕ್ಕುಗಳು ಬಾಳೆಗಿಡದ ಬಳಿ ನಿದ್ರಿಸುತ್ತಿದ್ದವು. ವಾಸ್ತವವಾಗಿ ಅಲ್ಲಿದ್ದ ಬೂದಿಗುಡ್ಡೆಯ ಎಲ್ಲಾ ಬದಿಗಳಲ್ಲೂ ಬೆಕ್ಕುಗಳೇ ಇದ್ದವು. ಅದೊಂದು ಬೆಕ್ಕುಗಳ ವಿದ್ಯಾರ್ಥಿ ನಿಲಯದಂತೆ ಭಾಸವಾಗುತ್ತಿತ್ತು.

ಒಬ್ಬ ಬಂಗಾಳಿ ವ್ಯಕ್ತಿ, ತೆಳ್ಳಗಿದ್ದಾತ, – ಬಹುಶಃ ಅಡುಗೆ ಮಾಡುತ್ತಿದ್ದನೋ ಅಥವಾ ಅದೇ ರೀತಿಯ ಯಾವುದೋ ಕೆಲಸ ಮಾಡುತ್ತಿದ್ದನೋ, – ಹೊರಗೆ ಬಂದು ನನ್ನನ್ನು ವಿಚಾರಿಸಿದನು: "ನಿಮಗೇನು ಬೇಕು?". ನಾನು ಮರಳಿ ವಿಚಾರಿಸಿದೆ: "ಶ್ರೀ ಅರವಿಂದರು ಇಲ್ಲಿ ವಾಸಿಸುತ್ತಿರುವರೇ?". ಆತನು ಹೇಳಿದ: "ಹೌದು, ಅವರು ಇಲ್ಲಿಯೇ ವಾಸಿಸುತ್ತಿದ್ದಾರೆ."

"ನಾನು ಅವರನ್ನು ಒಮ್ಮೆ ಭೇಟಿಯಾಗಲು ಬಯಸುತ್ತೇನೆ. ಅವರನ್ನು ನೋಡಲು ಸಾಧ್ಯವಾಗುವುದೇ?" ಎಂದು ನಾನು ಕೇಳಿದೆ.

"ನೀವು ಯಾರು? ನೀವು ಒಬ್ಬ ಬಂಗಾಳಿಯಂತೆ ತೋರಿ ಬರುತ್ತೀರಿ" ಎಂದನು.

"ಹೌದು ನಾನೊಬ್ಬ ಬಂಗಾಳಿ, ನನ್ನ ಹೆಸರು ಮುಕುಲ್ ದೇ."

ಆತನು ನನ್ನನ್ನು ಮೇಲಂತಸ್ತಿಗೆ ಕರೆದೊಯ್ದನು.

ವರಾಂಡದಲ್ಲಿರುವ ಒಂದು ಮರದ ಕುರ್ಚಿಯ ಮೇಲೆ ನನ್ನನ್ನು ಕುಳ್ಳಿರಿಸಿ ಅವನು ಹೇಳಿದನು: "ನಿಮ್ಮ ಆಸನವನ್ನು ಸ್ವೀಕರಿಸಿ. ನಾನು ಅವರಿಗೆ ಮಾಹಿತಿ ನೀಡುತ್ತೇನೆ" ಎಂದನು. ಶಿಥಿಲವಾಗಿ ಹಳೆಯದಾಗಿದ್ದ ಆ ಮನೆಯಂತೆಯೇ ಅಲ್ಲಿದ್ದ ಕುರ್ಚಿಯೂ ಕೂಡಾ ಬಹು ಪುರಾತನ ಕಾಲದ್ದು. ಅದರಲ್ಲಿ ಬಣ್ಣವಾಗಲಿ, ಪಾಲಿಶ್‌ನ ಹೊಳಪಾಗಲಿ ಇರಲಿಲ್ಲ. ಎಲ್ಲವೂ ತಿಂದುಹೋದಂತೆ ಇತ್ತು. ನಾನು ಸಂತೋಷ ಮತ್ತು ಆತಂಕದ ಮಿಶ್ರ ಭಾವಗಳಿಂದ ಕುಳಿತುಕೊಂಡೆ. ನಾನು ಸುತ್ತಲೂ ವೀಕ್ಷಿಸಿ ನೋಡಿದೆ. ಗೋಡೆಯ ಮೇಲೆ ಮೂರು ನಾಲ್ಕು ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಚಿತ್ರಗಳನ್ನು ಕತ್ತರಿಸಿ, ಕಟ್ಟು ಹಾಕಿಸಿ ತೂಗು ಹಾಕಲಾಗಿತ್ತು. ಇದನ್ನು ನೋಡಿ ನನಗೆ ಆಸೆ ಮತ್ತು ಭರವಸೆ ಉಂಟಾದವು. ಅಂದರೆ, ಶ್ರೀ ಅರವಿಂದರು ಚಿತ್ರ ಕಲಾಕೃತಿಗಳನ್ನು ಪ್ರೀತಿಸುತ್ತಾರೆ!! ತಕ್ಷಣ ನಾನು ಗಮನಿಸಿದೆ. ಈ ಚಿತ್ರಕಲೆಗಳಲ್ಲಿ ನನ್ನಿಂದ ರಚಿತವಾದ ಒಂದು ಪೇಂಟಿಂಗ್ ಇತ್ತು. ಒಂದು ಮಾಸ ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಲಾಗಿತ್ತು; ಅದರ ವಸ್ತುವೆಂದರೆ, ಶ್ರೀಮತಿ ರಾಧೆ ತನ್ನ ಸೊಂಟದ ಮೇಲೆ ಕೊಡವನ್ನು ಇಟ್ಟುಕೊಂಡು, ನೀರು ತರಲು ಹೋಗುತ್ತಿರುವ ಚಿತ್ರ. ಈ ಕಲಾಕೃತಿಯ ಕೆಳ ಭಾಗದಲ್ಲಿ ನನ್ನ ಹೆಸರನ್ನು ಬರೆಯಲಾಗಿತ್ತು. ಅದನ್ನು ನೋಡಿ ನನಗೆ ಅಪಾರ ಸಂತೋಷವಾಯಿತು. ಎಂತಹ ಸುಂದರ ಕಾಕತಾಳೀಯ!! ನನಗೆ ಸ್ವಲ್ಪ ಧೈರ್ಯ ಮತ್ತು ಭರವಸೆ ಮೂಡಿತು. ಇದೇ ನನ್ನ ಪರಿಚಯ ಪತ್ರವಾಗಿ ಕೆಲಸ ಮಾಡುತ್ತದೆ ಎನಿಸಿತು. ಏಕೆಂದರೆ, ಒಬ್ಬ ಸಂಪೂರ್ಣ ಅಜ್ಞಾತ ವ್ಯಕ್ತಿಯಾಗಿ, ಯಾರಿಂದಲೂ ಪರಿಚಯ ಪತ್ರವನ್ನು ಜೊತೆಯಲ್ಲಿ ತರದೆ ನಾನು ಆ ಸ್ಥಳ ಮುಟ್ಟಿದ್ದೆ.

ಆ ಸಮಯಕ್ಕೆ ಸರಿಯಾಗಿ, ಶ್ರೀ ಅರವಿಂದರು ನಿಧಾನವಾಗಿ ಕೋಣೆಯಿಂದ ಹೊರಕ್ಕೆ ಬರುತ್ತಿದ್ದರು. ಚಿಕ್ಕ ಗಾತ್ರದ ಕೆಂಪು ಬಣ್ಣದ ಅಂಚಿದ್ದ ಮಾಸಲಾಗಿರುವ ಧೋತಿಯನ್ನು ಅವರು ಧರಿಸಿದ್ದರು. ಅದರ ಒಂದು ತುದಿಯು ಕೊರಳ ಸುತ್ತಲೂ ಇದ್ದಿತು: ಪಾದರಕ್ಷೆ ಇಲ್ಲದ ಪಾದಗಳು, ವಸ್ತ್ರಗಳನ್ನು ಧರಿಸಿರದ ಶರೀರದ ಮೇಲ್ಭಾಗ, ಉದ್ದನೆಯ ಕೂದಲು, ಗಡ್ಡ, ಸಣ್ಣಗಿನ ತಪೋಮಯ ಶರೀರ. ಅವರನ್ನು ನೋಡಿದ ಕೂಡಲೇ ಅವರೇ ಶ್ರೀ ಅರವಿಂದರೆಂದು ನಾನು ಅರ್ಥ ಮಾಡಿಕೊಂಡೆ. ಅವರು ಪುರಾತನ ಕಾಲದ ಋಷಿಗಳಂತೆ, ಜೀವಂತ ಕ್ರಿಸ್ತನಂತೆ ತೋರಿ ಬರುತ್ತಿದ್ದರು.

ಅವರೇ ಕೇಳಿದರು: "ನಿಮಗೇನು ಬೇಕು?"

“ನನ್ನ ಹೆಸರು ಮುಕುಲ್ ದೇ. ನಾನೊಬ್ಬ ಬಂಗಾಳಿ. ನಿಮ್ಮ ಭಾವಚಿತ್ರವನ್ನು ಬಿಡಿಸಲು ಬಂದಿರುವೆ. ನೀವು ಚಿತ್ರಕಲಾ ಕೃತಿಗಳನ್ನು ಇಷ್ಟಪಡುತ್ತೀರಿ ಎಂದು ನನಗೆ ತಿಳಿದಿದೆ. ಇಲ್ಲಿ ಗೋಡೆಯ ಮೇಲಿರುವ ಆ ಕೃತಿಯನ್ನು ನಾನೇ ರಚಿಸಿದ್ದು.”

ಅವರು ಸ್ವಲ್ಪ ಮುಗುಳ್ನಕ್ಕು ಹೇಳಿದರು: “ಹೌದು ನನಗೆ ಅದು ತುಂಬಾ ಇಷ್ಟ. ನನಗೆ ಗೊತ್ತು ನಿಮ್ಮದೇ ಕೃತಿ ಅದು ಎಂದು. “ನಾನೀಗ ಏನು ಮಾಡಬೇಕು?”

ನಾನು ಉತ್ತರಿಸಿದೆ: “ನೀವು ಏನು ಮಾಡಬೇಕಾಗಿಲ್ಲ; ಸುಮ್ಮನೆ ಮೌನವಾಗಿ ಕುಳಿತರೆ ಸಾಕಾಗುತ್ತೆ.”

“ನಾನು ಎಷ್ಟು ಕಾಲ ಕುಳಿತುಕೊಳ್ಳಬೇಕಾಗುತ್ತದೆ?”

“ಸುಮಾರು ಅರ್ಧ ಗಂಟೆ ಅಥವಾ ಒಂದು ಗಂಟೆಗಳ ಕಾಲ”

“ನಾನೀಗ ಕುಳಿತುಕೊಂಡರೆ ನೀವು ಚಿತ್ರ ಬಿಡಿಸಬಲ್ಲಿರಾ?”

ನನಗೆ ಸ್ವರ್ಗವೇ ಕೈಯೊಳಗೆ ಕಳಚಿ ಬಿದ್ದಂತಾಯಿತು. ನಾನು ಆನಂದದಿಂದ ತುಂಬಿ ಹೋದೆ!! “ಹೌದು, ನಾನು ಚಿತ್ರಿಸಬಲ್ಲೆ” ಎಂದೆ. ಒಂದು ಪೇಪರ್ ಶೀಟನ್ನು ಹರಡಿಕೊಂಡು, ಪೆನ್ಸಿಲ್ ಹಿಡಿದು ಕುಳಿತೆ. ಶ್ರೀ ಅರವಿಂದರೂ ಒಂದು ಹಳೆಯ ಮರದ ಕುರ್ಚಿಯ ಮೇಲೆ ಕುಳಿತರು.

ನಾನು ನನ್ನ ಜೀವನದಲ್ಲಿ ಅನೇಕ ವ್ಯಕ್ತಿಗಳ ಭಾವಚಿತ್ರವನ್ನು ಬಿಡಿಸಿದ್ದೇನೆ. ಆದರೆ ಆ ಬಗೆಯ ಕುಳಿತಿರುವ ಭಂಗಿಯನ್ನು ಯಾರಲ್ಲಿಯೂ ಕಂಡಿಲ್ಲ. ಅಂತಹ ಅದ್ಭುತವಾದ ಭಂಗಿ. ನಾನು ಒಂದು ಗಂಟೆಯ ಕಾಲ ಚಿತ್ರಕಲೆಯಲ್ಲಿ ತಲ್ಲೀನನಾದೆ. ಆ ಸಮಯದಲ್ಲಿ ಅವರು ಕೊಂಚವೂ ಅಲುಗಾಡಲಿಲ್ಲ. ಅವರು ಕಣ್ಣುರೆಪ್ಪೆಯನ್ನು ಒಮ್ಮೆಯೂ ಮಿಟುಕಿಸಲಿಲ್ಲ. ಒಂದು ಪಾರ್ಶ್ವಕ್ಕೆ ನೋಟವನ್ನು ನೆಟ್ಟು, ದಿಟ್ಟಿಸುತ್ತಾ ಕುಳಿತುಬಿಟ್ಟರು. ಆಶ್ಚರ್ಯ ಮತ್ತು ಆನಂದ ಉಲ್ಲಾಸಗಳಿಂದ ತುಂಬಿದ ನಾನು ಅವರ ಪಾದಗಳನ್ನು ಸ್ಪರ್ಶಿಸಿದೆ. ನಾನು ಬಿಡಿಸಿದ್ದ ಭಾವಚಿತ್ರವನ್ನು ಅವರಿಗೆ ತೋರಿಸಿದೆ. ಅವರು ನಿಸ್ಸಂದೇಹವಾಗಿ ಸಂತೋಷಭರಿತರಾದರು. ಆ ಭಾವಚಿತ್ರವನ್ನು ಬೇರೆ ಬೇರೆ ಕೋನಗಳಿಂದ ವೀಕ್ಷಿಸಿದರು. ನನ್ನ ಕೋರಿಕೆಯನ್ನು ಮನ್ನಿಸಿ, ಇಂಗ್ಲೀಷಿನಲ್ಲಿ ಮತ್ತು ಬಂಗಾಳಿಯಲ್ಲಿ ಸಹಿ ಹಾಕಿ ದಿನಾಂಕವನ್ನು ಬರೆದರು. ಮಾರನೆಯ ದಿನವೂ ನಾನು ಬರುತ್ತೇನೆ ಎಂದು ಅವರಿಗೆ ತಿಳಿಸಿ

ಹೋಟೆಲ್‌ಗೆ ಮರಳಿದೆ. ಅದೆಂತಹ ಸಂತೋಷ, ಅದೆಂತಹ ಅಚ್ಚರಿ ಮತ್ತು ಪೂರ್ಣತೆ ನನ್ನ ಮನಸ್ಸನ್ನು ಆ ದಿನ ಆವರಿಸಿತ್ತು!! ಅದನ್ನು ಶಬ್ದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವೇ ಇಲ್ಲ.

ಮರುದಿನ ಏಪ್ರಿಲ್ 21. ನಾನು ಬೆಳಗ್ಗೆ ಬೇಗನೆ ಎದ್ದು ಸ್ನಾನ ಮುಗಿಸಿ ಉಪಹಾರ ಮುಗಿಸಿ ನನ್ನ ಪೇಪರ್ ಪೆನ್ಸಿಲ್ ಎಲ್ಲಾ ತೆಗೆದುಕೊಂಡು ಶ್ರೀ ಅರವಿಂದರನ್ನು ಕಾಣಲು ಹೊರಟೆ. ಈಗ ನಾನು ದಾರಿಯನ್ನು ಪತ್ತೆ ಮಾಡಲು ಹೆಣಗ ಬೇಕಾಗಿರಲಿಲ್ಲ. ಚೆನ್ನಾಗಿ ಪರಿಚಿತವಾಗಿದ್ದ ರಸ್ತೆಯಲ್ಲಿ ಅವರ ಮನೆಯನ್ನು ಸುಲಭವಾಗಿ ತಲುಪಿ, ಮೆಟ್ಟಿಲು ಹತ್ತಿ ಮೇಲಂತಸ್ತಿಗೆ ಹೋದೆ. ಎಲ್ಲವೂ ಸುಲಭ ಮತ್ತು ಈಗಾಗಲೇ ತಿಳಿದಿದೆಯೇನೋ ಎಂಬಂತೆ, ಬಾಗಿಲುಗಳು ಪೂರ್ಣ ತೆರೆದಿದ್ದವು. ವರಾಂಡದಲ್ಲಿ ನಾನು ಅದೇ ಕುರ್ಚಿಯ ಮೇಲೆ ಕುಳಿತೆ. ಸ್ವಲ್ಪ ಕಾಲದ ನಂತರ ಅವರು ಕೋಣೆಯಿಂದ ಹೊರಗೆ ಬಂದು, ತಮ್ಮ ಕುರ್ಚಿಯ ಮೇಲೆ ಅದೇ ಭಂಗಿಯಲ್ಲಿ, ಶಿಲಾ ಪ್ರತಿಮೆಯಂತೆ ಆಚಲವಾಗಿ, ಶಾಂತವಾಗಿ, ನೆಟ್ಟ ದೃಷ್ಟಿಯಿಂದ ಧ್ಯಾನಸ್ಥರಾಗಿ ಕುಳಿತರು. ಒಂದು ಗಂಟೆಯ ಅವಧಿಯಲ್ಲಿ ನಾನು ಶ್ರೀ ಅರವಿಂದರ ಎರಡನೆಯ ಭಾವಚಿತ್ರವನ್ನು ಪೂರ್ಣಗೊಳಿಸಿದ್ದೆ. ಅವರು ಅದನ್ನು ಪರಿಶೀಲಿಸಿ ನೋಡಿ, ತಮ್ಮ ಹಸ್ತಾಕ್ಷರವನ್ನು ಮತ್ತು ದಿನಾಂಕವನ್ನು ಅದರ ಮೇಲೆ ಬರೆದರು. ಅಂದು ಸಂಜೆ ಮತ್ತೆ ಬರುವೆನೆಂದು ಅವರಿಗೆ ತಿಳಿಸಿ ಅವರಿಂದ ಬೀಳ್ಕೊಂಡೆ. ನನ್ನೊಳಗೆ ಸಂತೋಷ ತುಂಬಿ ತುಳುಕುತ್ತಿತ್ತು. 3 ಕೋನಗಳಿಂದ ಶ್ರೀ ಅರವಿಂದರ ಮೂರು ಭಾವಚಿತ್ರಗಳನ್ನು ಸಿದ್ಧಪಡಿಸಿ ನನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗುವೆ ಎಂಬುದು ನನ್ನ ಬಾಳಿನ ಮಹತ್ತರ ಸಂಗತಿಯಾಗಿತ್ತು. ಗಣ್ಯರು ಇವುಗಳಲ್ಲಿ ಒಂದನ್ನಾದರೂ ಕಡೇ ಪಕ್ಷ ನಿಜವಾಗಿಯೂ ಇಷ್ಟಪಡುವರು ಎಂದು ನನ್ನ ವಿಶ್ವಾಸವಾಗಿತ್ತು.

ಮತ್ತೆ ನಾನು ಮಧ್ಯಾಹ್ನ ನನ್ನ ಪರಿಕರಗಳನ್ನು ಕಂಕುಳಲ್ಲಿ ಇಟ್ಟುಕೊಂಡು ಹೊರಟೆ. ಅನೇಕ ವಿಚಾರಗಳು ನನ್ನ ಮನಸ್ಸನ್ನು ಹಾದು ಹೋದವು. ಅವರೇ ಶ್ರೀಅರವಿಂದರು. ಎಂತಹ ಅದ್ಭುತ! ಅವರೆಂತಹ ವಿಚಿತ್ರ ವ್ಯಕ್ತಿ! ಇಂಗ್ಲೆಂಡಿನಿಂದ ಹಿಂದಿರುಗಿದ ಐಸಿಎಸ್ ಪದವೀಧರರು, ಕ್ರಾಂತಿಕಾರಿ ನೇತಾರರು – ಅದೆಷ್ಟು ಕಥೆಗಳನ್ನು ನಾನು ಅವರ ಬಗ್ಗೆ ಕೇಳಿರುವೆ!! ಅವೆಲ್ಲಾ ನಿಜವಾಗಿಯೂ ಸತ್ಯವೇ?? ಯಾರಿಗೆ ಗೊತ್ತು!!

ಮತ್ತೆ ನಾನು ನೇರವಾಗಿ ಅವರ ಮನೆಯನ್ನು ಪ್ರವೇಶಿಸಿ, ಅದೇ ಕುರ್ಚಿಯ ಮೇಲೆ ಮೇಲಂತಸ್ತಿನ ವರಾಂಡದಲ್ಲಿ ಕುಳಿತುಕೊಂಡೆ. ಸ್ವಲ್ಪದರಲ್ಲಿ ಅವರು ಹೊರಗೆ ಬಂದರು. ಅದೇ ರೀತಿ, ಪಾದರಕ್ಷೆಗಳಿಲ್ಲದ ಪಾದಗಳು, ಕತ್ತಿನ ಸುತ್ತ ಇದ್ದ ಧೋತಿ ಮತ್ತು ಮುಖದ ಮೇಲೆ ಮುಗುಳ್ನಗೆ. ನಾನು ಪ್ರಣಾಮಗಳನ್ನು ಸಲ್ಲಿಸಿ, ಭಾವಚಿತ್ರ ಮೂಡಿಸುವಲ್ಲಿ ತಕ್ಷಣವೇ ಮಗ್ನನಾದೆ. ಒಂದು ಗಂಟೆಯ ಕಾಲ ಚಿತ್ರಿಸಿ ಮುಗಿಸಿದೆ. ಆದರೆ ಅದೆಂತಹ ವಿಚಿತ್ರ!! ಅವರು ಕಣ್ಣುಗಳನ್ನು ಚಲಿಸಿ, ಕಣ್ಣು ರೆಪ್ಪೆ ಮಿಟುಕಿಸಿದ್ದನ್ನು ನಾನು ನೋಡಲಿಲ್ಲ. ಕೃತಿಯನ್ನು ಪೂರ್ಣ ಮಾಡಿ ಭಾವಚಿತ್ರವನ್ನು ಅವರಿಗೆ ತೋರಿಸಿದೆ. ಈ ಮೂರನೆಯ ಚಿತ್ರದ ಮೇಲೆ ಸಹ ಅವರು ಸಹಿ ಮಾಡಿದರು. ಅವರು ತಲೆಯೆತ್ತಿ ನನ್ನನ್ನು ನೋಡಿ, ಸಮ್ಮತಿಪೂರ್ವಕವಾಗಿ ಮುಗುಳ್ನಕ್ಕಾಗ ನಾನು ಕೇಳಿದೆ: “ನಾನು ನಿಮ್ಮನ್ನು ಕೆಲವು ಪ್ರಶ್ನೆ ಕೇಳಬಹುದೇ? ನಿಮ್ಮ ಬಗ್ಗೆ ಹಲವಾರು ಸಂಗತಿಗಳನ್ನು ನಾನು ಕೇಳಿರುವೆ. ಆದ್ದರಿಂದ ಅರಿಯಲು ಉತ್ಸುಕನಾಗಿರುವೆ. ನೀವು ಬೇಸರ ಪಟ್ಟುಕೊಳ್ಳುವುದಿಲ್ಲ ಎಂದು ಭಾವಿಸುತ್ತೇನೆ.”

“ಇಲ್ಲ, ಹೇಳಿ, ನಿಮಗೆ ಯಾವ ಪ್ರಶ್ನೆಗಳನ್ನು ಕೇಳಬೇಕೆನಿಸುತ್ತದೋ ಕೇಳಿ” ಎಂದು ನಕ್ಕರು.

“ನೀವು ಇಂಗ್ಲೆಂಡಿನಲ್ಲಿದ್ದಾಗ ಮತ್ತು ಅಲ್ಲಿ ಅಧ್ಯಯನ ಮಾಡುತ್ತಿದ್ದಾಗ ಬ್ರಿಟಿಷರನ್ನು ಕುರಿತು ಯಾವ ನಿಲುವು, ಮನೋಭಾವವನ್ನು ಇಟ್ಟುಕೊಂಡಿದ್ರಿ?” ಎಂದು ನಾನು ಕೇಳಿದೆ.

“ಆಗ ನನ್ನ ದೃಷ್ಟಿಕೋನವು ಸ್ನೇಹ ಪೂರ್ಣವೂ ಮತ್ತು ವಿಶ್ವಾಸ ಪೂರ್ವಕವೂ ಆಗಿತ್ತು. ಬ್ರಿಟಿಷರಲ್ಲಿ ಅನೇಕರ ಜೊತೆ ನಾನು ಒಡನಾಡುತ್ತಿದ್ದೆ. ಲಂಡನ್‌ನಲ್ಲಿ ನನಗೆ ಅನೇಕ ಸ್ನೇಹಿತರಿದ್ದರು.”

“ಆದರೆ ನೀವು ಬಂಗಾಳದ ಕ್ರಾಂತಿಕಾರಿ ಪಕ್ಷದ ನಾಯಕರಾಗಿದ್ದೀರಿ ಮತ್ತು ಉಗ್ರವಾಗಿ ಬ್ರಿಟಿಷ್ ವಿರೋಧಿಗಳಾಗಿದ್ದೀರಿ ಎಂದು ಕೇಳಿರುವೆ. ಪ್ರಸ್ತುತ ಬ್ರಿಟಿಷರ ಬಗ್ಗೆ ನಿಮ್ಮ ಧೋರಣೆ, ಅಭಿಪ್ರಾಯ ಏನು??”

“ಹೌದು ನೀವು ಏನು ಕೇಳಿದ್ದೀರೋ ಅದು ಸರಿಯಾಗಿದೆ. ನಾನು ಕ್ರಾಂತಿಕಾರಿ ಪಕ್ಷದಲ್ಲಿದ್ದೆ. ಇಂಗ್ಲೆಂಡಿನಲ್ಲಿದ್ದಾಗ ನನ್ನ ದೇಶವನ್ನು ಕುರಿತು ತುಂಬಾ ಯೋಚಿಸುತ್ತಿದ್ದೆ. ಭಾರತಕ್ಕೆ ಮರಳಿದ ಮೇಲೆ ಬ್ರಿಟಿಷರ ಆಡಳಿತದ ವಿರೋಧಿಯಾದೆ. ಆದರೆ ಈಗ

ನನಗೆ ಬ್ರಿಟಿಷರ ವಿರುದ್ಧವಾಗಿ ಯಾವುದೇ ವೈರಭಾವವಾಗಲಿ, ಹಗೆತನವಾಗಲಿ ಇಲ್ಲ; ಹಾಗೆ ನೋಡಿದರೆ, ಯಾರ ವಿರುದ್ಧವೂ ನನಗೆ ಕೋಪ, ಸಿಟ್ಟು, ರೋಷ, ನಂಜು ಖಂಡಿತ ಇಲ್ಲ. ನಾನೀಗ ಪ್ರಶಾಂತನಾಗಿರುವೆ."

"ಆ ಕೋಪ ಮತ್ತು ಸಿಟ್ಟು ಹೇಗೆ ಅದೃಶ್ಯವಾಯಿತು ಮತ್ತು ಈ ಬಗೆಯ ಆಂತರಿಕ ಪರಿವರ್ತನೆ ಮತ್ತು ಶಾಂತಿ ಹೇಗೆ ಬಂದಿತು?"

"ಬಂಗಾಳದಲ್ಲಿ ನಾನು ಕ್ರಾಂತಿಕಾರಿಗಳ ಜೊತೆಯಲ್ಲಿ ಕೆಲಸ ಮಾಡುತ್ತಿದ್ದಾಗ ಒಬ್ಬ ಮಹಾನ್ ಯೋಗಿಯ ಪರಿಚಯವಾಗಿ, ಅವರ ಸಂಪರ್ಕಕ್ಕೆ ಬಂದೆ. ಅವರಿಂದ ನಾನು ಪ್ರಾಣಾಯಾಮ ಮತ್ತು ಯೋಗವನ್ನು ಕಲಿತು ಅಭ್ಯಾಸ ಮಾಡಿದೆ. ತದನಂತರ ಇಲ್ಲಿಗೆ ಬಂದೆ. ಬ್ರಿಟಿಷರ ವಿರುದ್ಧ ಇದ್ದ ನನ್ನ ಕೋಪ ಮತ್ತು ರೋಷಗಳೆಲ್ಲ ಇಲ್ಲಿ ಮಾಯವಾದವು. ಈಗ ನಾನು ಇಲ್ಲಿ ಶಾಂತನಾಗಿರುವೆ."

"ನಿಮಗೆ ಯಾರ ವಿರುದ್ಧವೂ ಕೋಪವಿಲ್ಲದಿದ್ದರೆ ಮರಳಿ ಏಕೆ ಬಂಗಾಳಕ್ಕೆ ಬರಬಾರದು? ನಿಮ್ಮ ಪತ್ನಿಯು ಜೀವಂತ ಇದ್ದಾರೆ ಎಂದು ಕೇಳಿರುವೆ. ಅವರ ಫೋಟೋವನ್ನು ನೋಡಿರುವೆ. ಅವರು ಸುಂದರವಾದ ಲಕ್ಷಣವಾದ ಸ್ತ್ರೀಯಾಗಿ ತೋರುತ್ತಾರೆ. ನೀವೇಕೆ ಇಲ್ಲಿ ಏಕಾಂಗಿಯಾಗಿ ಇದ್ದೀರಿ? ನೀವು ಏಕೆ ಮನೆಗೆ ಮತ್ತು ನಿಮ್ಮ ಜನ್ಮಸ್ಥಳಕ್ಕೆ ಹಿಂದಿರುಗಬಾರದು? ನಿಮ್ಮ ಸ್ವಂತ ನಾಡಿಗೆ ನೀವು ಯಾವಾಗ ಮರಳಿ ಬರುತ್ತೀರಿ?"

ಶ್ರೀ ಅರವಿಂದರು ಕೆಲವು ಕಾಲ ಮೌನವಾಗಿದ್ದರು. ನಂತರ ನಿಧಾನವಾಗಿ ಉತ್ತರಿಸಿದರು: "ಆಗಲಿ, ದೇಶವು ಬ್ರಿಟಿಷರ ಆಡಳಿತದಿಂದ ಸ್ವತಂತ್ರವಾದಾಗ ನಾನು ಮರಳಿ ಬರುತ್ತೇನೆ."

ಬಳಿಕ ಯಾವುದೇ ಮಾತು ಇರಲಿಲ್ಲ. ಅವರ ಪ್ರಕಾಶಮಯ ನುಡಿಗಳನ್ನು ಕೇಳಿದ ನಂತರ ಮತ್ತು ಅವರ ಮೂರು ಭಾವಚಿತ್ರಗಳನ್ನು ಚಿತ್ರಿಸಲು ಸಮರ್ಥನಾದ ಮೇಲೆ, ನನ್ನ ಹೃತ್ಪೂರ್ವಕ ವಂದನೆಗಳನ್ನು ಮತ್ತು ಕೃತಜ್ಞತಾಪೂರ್ವಕ ಪ್ರಣಾಮಗಳನ್ನು ಶ್ರೀ ಅರವಿಂದರಿಗೆ ಸಲ್ಲಿಸಿದೆ.

ಅವರು ಹೇಳಿದರು: "ನಿಮ್ಮ ಕಲಾಕೃತಿಯನ್ನು ನಾನು ತುಂಬಾ ಇಷ್ಟಪಟ್ಟಿರುವೆ. ನಿಮ್ಮ ಜೊತೆಗಿನ ಸಂಭಾಷಣೆಯೂ ಮೆಚ್ಚುಗೆಯಾಯಿತು. ನಿಮ್ಮನ್ನು ನಾನು ಆಶೀರ್ವದಿಸಿರುವೆ. ನಿಮಗೆ ಶುಭವಾಗಲೆಂದು ಹಾರೈಸುವೆ."

ಅವರ ಚರಣ ಧೂಳಿಯನ್ನು ಮತ್ತು ಅವರ ಆಶೀರ್ವಾದಗಳ ಕೃಪಾಹಸ್ತವನ್ನು ನನ್ನ ಶಿರದ ಮೇಲಿಟ್ಟುಕೊಂಡು, ನಾನು ಧನ್ಯತಾ ಭಾವವನ್ನು ಅನುಭವಿಸಿದೆ. ಒಂದು ಸಾಮ್ರಾಜ್ಯವನ್ನೇ ಗೆದ್ದು ಜಯಿಸಿದ ಆನಂದ ಮತ್ತು ಹೆಮ್ಮೆಯಿಂದ ಅದೇ ದಿನವೇ ನಾನು ಪಾಂಡಿಚೆರಿಯಿಂದ ನಿರ್ಗಮಿಸಿ, ಮದ್ರಾಸಿಗೆ ಬಂದೆನು.

ನಾನು ಶ್ರೀ ಅರವಿಂದರ ಸಮೀಪಕ್ಕೆ ಹೋಗಿದ್ದಾಗ ಮತ್ತು ಅವರನ್ನು ಭೇಟಿ ಮಾಡಿದಾಗ, ಅಲ್ಲಿ ಯಾವ ಬಗೆಯ ಗದ್ದಲವಾಗಲಿ, ನೂಕು ನುಗ್ಗಲಾಗಲಿ, ನಿಯಮ ಕಟ್ಟಳೆಗಳಾಗಲಿ, ಪೂಜಾರಿಗಳಾಗಲಿ ಅಥವಾ ಕಾವಲುಗಾರರಾಗಲಿ ಅಂತಹುದೇನೂ ಇರಲಿಲ್ಲ. ಗೇಟ್ ಪಾಸ್ ಅಥವಾ ಪರಿಚಯ ಪತ್ರದ ಅಗತ್ಯವೂ ಅಲ್ಲಿರಲಿಲ್ಲ. ಅವರನ್ನು ಸಮೀಪಿಸುವುದು ಸುಲಭವಾಗಿತ್ತು ಮತ್ತು ಸರಳವಾಗಿತ್ತು. ನನ್ನ ಪ್ರಶ್ನೆಗಳು ಸರಳ ಇದ್ದವು. ಶ್ರೀ ಅರವಿಂದರ ಉತ್ತರಗಳು ಕೂಡ ನಿಜವಾಗಿ ಅಷ್ಟೇ ಸರಳವಿತ್ತು. ಆ ದಿನ ನಾನು ಯಾವುದೇ ಮಧ್ಯವರ್ತಿ ಪಾದ್ರಿ ಅಥವಾ ಪೂಜಾರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ದೇವತಾ ದರ್ಶನವನ್ನು ಪಡೆಯಬೇಕಾಗಿರಲಿಲ್ಲ. ಸತ್ಯ ಮತ್ತು ಸೌಂದರ್ಯಗಳಲ್ಲಿ ಜೀವಿಸುತ್ತಿದ್ದ ಒಬ್ಬ ಯೋಗಿಯನ್ನು ನಾನು ಕಂಡೆ. ನಮ್ಮ ಸನಾತನ ಭಾರತದ ಒಬ್ಬ ಮಹಾಋಷಿಯ ಮೂರ್ತರೂಪವನ್ನು ದರ್ಶಿಸಿದೆ.

ಶ್ರೀ ಅರವಿಂದರ ಮುಗುಳ್ನಗೆ ಮತ್ತು ಕಾರುಣ್ಯಪೂರ್ಣ ನೋಟವು ನನ್ನ ಸ್ಮೃತಿಯಲ್ಲಿ ಎಂದಿಗೂ ಮಸುಕಾಗಿಲ್ಲ, ಕಾಂತಿಹೀನವಾಗಿಲ್ಲ..

(ಆಕರ: THE HERITAGE, AUGUST 1988)

**ಟಿಪ್ಪಣಿ:** ಮುಕುಲ್ ಚಂದ್ರ ದೇ (1895–1989) ಎಂಬ ಬಂಗಾಳದ ಚಿತ್ರ ಕಲಾವಿದ ಶ್ರೀ ಅರವಿಂದರ ಜೊತೆಗಿನ ತನ್ನ ಅವಿಸ್ಮರಣೀಯ ಅನುಭವವನ್ನು ಹೀಗೆ ದಾಖಲಿಸಿದ್ದಾರೆ. ಅವರು ಠಾಗೂರರ ಶಾಂತಿ ನಿಕೇತನದ ಪ್ರತಿಭಾವಂತ ವಿದ್ಯಾರ್ಥಿ. ಅದ್ಭುತ ಕಲಾಕೃತಿಗಳನ್ನು ಕಲಾ ಪ್ರಪಂಚಕ್ಕೆ ನೀಡಿದ್ದಾರೆ. ಶ್ರೀ ಅರವಿಂದರ ಭಾವಚಿತ್ರ ರಚಿಸಿ ತಮ್ಮ ಕಲಾ ಜೀವನದ ಸಾರ್ಥಕತೆ ಪಡೆದ ಜೀವ ಮುಕುಲ್. ಕಲ್ಕತ್ತ ಕಲಾ ಕಾಲೇಜಿನ ಪ್ರಾಂಶುಪಾಲರಾಗಿಯೂ ನಂತರ ಸೇವೆ ಸಲ್ಲಿಸಿದರು.



ಫೋಟೋ: ಇಮೇಜಿಂಗ್ ಸಾವಿತ್ರಿ

ಲೌಕಿಕದ ಭಾವ ಸಂತಸದ ಜೀವಕಿದು ಮಿಗಿಲು ದೃಶ್ಯ ಮುದದಿ
ರಸೋದ್ಗಾರ ಜೊತೆ ದಿವ್ಯಕಾಂತಿಯಾ ಚೈತನ್ಯಕಲ್ಲಿ ಆದಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 29)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಆಲಿಸಲು ಬಲ್ಲೆ ಪರಮನಾ ಧ್ವನಿಯ ನನ್ನಂತರಂಗದಲ್ಲಿ
ಮತ್ತಿದೋ ನಾನು ಮತಿವಂತನಾಗಿ ಪ್ರಗತಿಯೊಲು, ನಮ್ರವಾಗಿ;
ಅದರ ಮಕರಂದದಾ ಮಧುರದಮೃತವನು ಪಾನಗೊಂಡು
ಆ ಬೆಳಕ ಬಾಳ ಬೆಳಕಿಗಿದೋ ಸವಿವ, ನಾನಿದೋ ವೃಕ್ಷವಿಂದು

**– ಪುಟ್ಟು ಕುಲಕರ್ಣಿ**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.